# ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ
# 2013–14ನೇ ಸಾಲಿನ ವಾರ್ಷಿಕ ವರದಿ:

## 1. ಅವಲೋಕನ

### ಮುಖ್ಯ ಕಾರ್ಯಗಳು

ರಾಜ್ಯದ ಅಭಿವೃದ್ಧಿಗಾಗಿ ವಾರ್ಷಿಕ ಮತ್ತು ಪಂಚವಾರ್ಷಿಕ ಯೋಜನೆಗಳ ತಯಾರಿಕೆ, ಕಾರ್ಯಕ್ರಮಗಳ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನವನ್ನು ಅಗ್ಗಿಂದಾಗೆ ನಿರ್ಧರಿಸಿ ಜಿಲ್ಲೆಗಳು ಹಾಗೂ ರಾಜ್ಯದ ಮಾನವ ಅಭಿವೃದ್ಧಿ ಸೂಚ್ಯಾಂಕಗಳನ್ನಾಧರಿಸಿ ಕಾರ್ಯನೀತಿ ಬದಲಾವಣೆಗಳನ್ನು ಸೂಚಿಸುವುದು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಮುಖ್ಯ ಕಾರ್ಯವಾಗಿದೆ. ಪ್ರಾದೇಶಿಕ ಅಸಮತೋಲನೆಯನ್ನು ನಿವಾರಿಸುವಲ್ಲಿ ವಿಶೇಷ ಒತ್ತು ನೀಡಲಾಗಿದೆ. ಇಲಾಖೆಯು ರಾಜ್ಯದ ಎಲ್ಲಾ ಇಲಾಖೆಗಳಿಗೆ (ಅ) ಜಿಲ್ಲಾ ಮತ್ತು ರಾಜ್ಯದ ಯೋಜನೆಗಳ ತಯಾರಿಕೆ (ಆ) ಯೋಜನೆಗಳ ಮೇಲ್ವಿಚಾರಣೆಗೆ ಮಾಹಿತಿ ನಿರ್ವಹಣಾ ವ್ಯವಸ್ಥೆಯನ್ನು ಒದಗಿಸುವುದು (ಇ) ಇಲಾಖೆಗಳು ಅನುಷ್ಠಾನಗೊಳಿಸುವ ಕಾರ್ಯಕ್ರಮಗಳ ಮೌಲ್ಯಮಾಪನ ಪ್ರಕ್ರಿಯೆಯನ್ನು ಸಶಕ್ತಗೊಳಿಸಲು ಅನುವು ಮಾಡಿಕೊಡುತ್ತದೆ. ಇದಲ್ಲದೆ ರಾಜ್ಯದ ಒಟ್ಟಾರೆ ಕಾರ್ಯನಿರ್ವಹಣೆಯ ಮೂಲ ಮಾಹಿತಿಯನ್ನು ಒದಗಿಸಲು ಇಲಾಖೆಯು ರಾಜ್ಯದ ಆರ್ಥಿಕ ಸಮೀಕ್ಷೆಯನ್ನು ತಯಾರಿಸುತ್ತದೆ. ರಾಜ್ಯ ಮತ್ತು ಜಿಲ್ಲಾಮಟ್ಟದ ಮಾನವ ಅಭಿವೃದ್ಧಿ ವರದಿಗಳನ್ನು ತಯಾರಿಸುವುದು ಸಹ ಇಲಾಖೆಯ ಪ್ರಮುಖವಾದ ಕಾರ್ಯವಾಗಿದೆ.

### ಆಡಳಿತ

ಮಾನ್ಯ ಯೋಜನಾ ಸಚಿವರು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಮುಖ್ಯಸ್ತರಾಗಿರುತ್ತಾರೆ. ಇಲಾಖೆಯ ಅಧೀನದಲ್ಲಿ ಈ ಕೆಳಕಂಡ ಕ್ಷೇತ್ರ ಇಲಾಖೆಗಳು, ಶಾಸನಬದ್ಧ ಸಂಸ್ಥೆಗಳು ಹಾಗೂ ಸ್ವಾಯತ್ತ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದೆ.

ಅ) ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ.
ಆ) ರಾಜ್ಯ ಯೋಜನಾ ಮಂಡಳಿ.
ಇ) ಕರ್ನಾಟಕ ಮೌಲ್ಯಮಾಪನಾ ಪ್ರಾಧಿಕಾರ.
ಈ) ಕೆಳಕಂಡ 4 ಸ್ವಾಯತ್ತ ಮಂಡಳಿಗಳು/ಪ್ರಾಧಿಕಾರಿಗಳು.

i) ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ.
ii) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ.
iii) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ.
iv) ಕರಾವಳಿ ಅಭಿವೃದ್ಧಿ ಪ್ರಾಧಿಕಾರ.

ಯೋಜನಾ ಇಲಾಖೆಯಲ್ಲಿ – 8 ಕಾರ್ಯನಿರತ ವಿಭಾಗಗಳಿದ್ದು 1) ಯೋಜನಾ ಹಣಕಾಸು ಮತ್ತು ಸಂಪನ್ಮೂಲ ವಿಭಾಗ 2) ಮಾನವ ಅಭಿವೃದ್ಧಿ ವಿಭಾಗ 3) ಯೋಜನಾ ಸಂಯೋಜನಾ ಮತ್ತು ಮಾಹಿತಿ ವಿಭಾಗ 4) ಜಿಲ್ಲಾ ಯೋಜನಾ ವಿಭಾಗ 5) ಪರಿಯೋಜನಾ ರಚನಾ ವಿಭಾಗ 6) ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ 7) ಜನಶಕ್ತಿ ಮತ್ತು ಉದ್ಯೋಗ ವಿಭಾಗ 8) ಸಂಪೂರ್ಣ ಯೋಜನಾ ವಿಭಾಗ. ಇದಲ್ಲದೆ, ವಿಶೇಷ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿನ ಪ್ರಾದೇಶಿಕ ಅಸಮತೋಲನವನ್ನು ಸರಿಪಡಿಸಲು ವಿಶೇಷ ಕೋಶವು ಕಾರ್ಯನಿರ್ವಹಿಸುತ್ತಿದೆ.


ಯೋಜನಾ ಇಲಾಖೆಯ ಆಡಳಿತಕ್ಕೆ ಒಳಪಟ್ಟಿರುವ ಕೆಲವು ಪ್ರಮುಖ ಕಾರ್ಯಕ್ರಮಗಳೆಂದರೆ:

ಅ) ಸಂಸತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ.

ಆ) ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ.

ಕ್ಷೇತ್ರ ಮಟ್ಟದಲ್ಲಿ ಸಂಸತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಮತ್ತು ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳನ್ನು ಮತ್ತು ಇತರೆ ಸಂಸ್ಥೆಗಳ ಮೂಲಕ ರಾಜ್ಯ ಸರ್ಕಾರ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾಧಿಕಾರಿಗಳು ನೋಡಲ್ ಅಧಿಕಾರಿಗಳಾಗಿರುತ್ತಾರೆ.

**ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ರಚನಾ ತ:ಖ್ತೆ**



**ಕಾರ್ಯನಿರತ ವಿಭಾಗಗಳ ವಿಭಾಗವಾರು ರಚನೆ, ಕಾರ್ಯಗಳು ಮತ್ತು ಜವಾಬ್ದಾರಿಗಳು**

## 2. ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗ

**ಮುಖ್ಯ ಕಾರ್ಯಗಳು**

ಪ್ರದೇಶಾಭಿವೃದ್ಧಿ ಮಂಡಳಿ ವಿಭಾಗದ ಮುಖ್ಯ ಕರ್ತವ್ಯವು ಯೋಜನಾ ಇಲಾಖೆಯ ಆಡಳಿತ ವ್ಯಾಪ್ತಿಗೊಳಪಡುವ ಪ್ರದೇಶಾಭಿವೃದ್ಧಿ ಯೋಜನೆ (ಕೆಎಲ್ಎಲ್ಎಡಿ) ಮತ್ತು ಮಂಡಳಿಗಳ (ಹೆಚ್‌ಕೆಡಿಬಿ, ಕೆಎಪಿ, ಬಿಎಸ್‌ಡಿಬಿ, ಎಂಎಡಿಬಿ) ಕ್ರಿಯಾ ಯೋಜನೆಗಳ ಅನುಮೋದನೆ ಮತ್ತು ಉಸ್ತುವಾರಿಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ಕೈಗೊಳ್ಳುವುದು.

**ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಗುಲ್ಬರ್ಗಾ**

i) **ಸ್ಥಾಪನೆ:**

ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು ದಿನಾಂಕ: 10–03–1992ರಂದು ಕರ್ನಾಟಕ ಅಧಿನಿಯಮ ಸಂಖ್ಯೆ:35ರಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧಿನಿಯಮ 1991ರಡಿ ಸ್ಥಾಪನೆಗೊಂಡಿದೆ. ಮಂಡಳಿಯ ಕಾರ್ಯ ವ್ಯಾಪ್ತಿಯು ಬೀದರ್, ಬಳ್ಳಾರಿ, ಗುಲ್ಬರ್ಗ, ಕೊಪ್ಪಳ, ರಾಯಚೂರು ಮತ್ತು ದಾವಣಗೆರೆ (ಹರಪನಹಳ್ಳಿ ತಾಲ್ಲೂಕು ಮಾತ್ರ) ಜಿಲ್ಲೆಗಳ 42 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ. ರಾಜ್ಯ ಸರ್ಕಾರವು 65 ಸದಸ್ಯರ ಪೈಕಿ ಒಬ್ಬರನ್ನು ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸುವುದು ಹಾಗೂ ಪ್ರಾದೇಶಿಕ ಆಯುಕ್ತರ ದರ್ಜೆಗೆ ಕೆಳಗಿನವರಲ್ಲದ ಒಬ್ಬ ಅಧಿಕಾರಿಯನ್ನು ಮಂಡಳಿಯ ಕಾರ್ಯದರ್ಶಿಯನ್ನಾಗಿ ನೇಮಿಸುವುದು.

ii) **ಮಂಡಳಿಯ ಉದ್ದೇಶಗಳು:**

ಮಂಡಳಿಯ ಉದ್ದೇಶವು ಮಂಡಳಿಯ ವ್ಯಾಪ್ತಿಗೊಳಪಡುವ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು. ಮೂಲಭೂತ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ ನಿರ್ಮಾಣ, ಸೇತುವೆ ನಿರ್ಮಾಣ, ಶಾಲೆ, ಕಾಲೇಜುಗಳು, ಆಸ್ಪತ್ರೆ ಮತ್ತು ಹಾಸ್ಟೆಲ್ ಕಟ್ಟಡ ನಿರ್ಮಾಣ, ನಗರ ಮತ್ತು ಗ್ರಾಮೀಣ ನೀರು ಸರಬರಾಜು ಯೋಜನೆಗಳು, ಸಣ್ಣ ನೀರಾವರಿ ಕಾಮಗಾರಿಗಳು ಮತ್ತು ಗ್ರಾಮೀಣ ವಿದ್ಯುಚ್ಛಕ್ತಿ ಯೋಜನೆಗಳಿಗೆ ಒತ್ತು ನೀಡಲಾಗಿದೆ.

iii) **ಲೆಕ್ಕಶೀರ್ಷಿಕೆ: 2515–00–103–0–01 (ಯೋಜನೆ)**

iv) **ರಾಜ್ಯದ ಪಾಲು – ಶೇಕಡ 100 ರಷ್ಟು**

(ರೂ. ಲಕ್ಷಗಳಲ್ಲಿ)

| ವರ್ಷ | ಆಯವ್ಯಯ | ಬಿಡುಗಡೆಯಾದ ಅನುದಾನ | ವೆಚ್ಚ * | ಮುಕ್ತಾಯಗೊಂಡ ಕಾಮಗಾರಿಗಳ ಸಂಖ್ಯೆ |
|---|---|---|---|---|
| 2009-10 | 3100.00 | 2100.00 | 3842.00 | 1427 |
| 2010-11 | 2300.00 | 1725.00 | 1682.00 | 368 |
| 2011-12 | 4500.00 | 3390.00 | 3170.20 | 740 |
| 2012-13 | 5300.00 | 5300.00 | 3867.75 | 687 |
| 2013-14 | 6530.00 | 4897.60 | 3277.36 | 590 |

* ಭರಿಸಿದ ವೆಚ್ಚವು ಪ್ರಾರಂಭಿಕ ಶಿಲ್ಕನ್ನು ಒಳಗೊಂಡಿರುತ್ತದೆ,

**ಟಿಪ್ಪಣಿ**: ಕಾಮಗಾರಿವಾರು ವಿವರಗಳನ್ನು http://stg1.kar.nic.in/hkadb ವೆಬ್‌ಸೈಟ್‌ನಲ್ಲಿ ನೀಡಲಾಗಿದೆ.

## ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ

i) **ಸ್ಥಾಪನೆ:**

ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯು ದಿನಾಂಕ: 10–03–1993ರಂದು ಕರ್ನಾಟಕ ಅಧಿನಿಯಮ **ಸಂಖ್ಯೆ:36 ರಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಅಧಿನಿಯಮ 1991ರಡಿ** ಸ್ಥಾಪನೆಗೊಂಡಿದೆ. ಮಂಡಳಿಯ ಕಾರ್ಯ ವ್ಯಾಪ್ತಿಯು ಬೆಳಗಾಂ, ಚಿಕ್ಕಮಗಳೂರು, ಕೊಡಗು, ಹಾಸನ, ಮೈಸೂರು, ಚಾಮರಾಜನಗರ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಧಾರವಾಡ, ದಾವಣಗೆರೆ ಮತ್ತು ಹಾವೇರಿ ಜಿಲ್ಲೆಗಳ 65 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ. ರಾಜ್ಯ ಸರ್ಕಾರವು 122 ಸದಸ್ಯರ ಪೈಕಿ ಒಬ್ಬರನ್ನು ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸುವುದು ಹಾಗೂ ಪ್ರಾದೇಶಿಕ ಆಯುಕ್ತರ ದರ್ಜೆಗೆ ಕೆಳಗಿನವರಲ್ಲದ ಒಬ್ಬ ಅಧಿಕಾರಿಯನ್ನು ಮಂಡಳಿಯ ಕಾರ್ಯದರ್ಶಿಯನ್ನಾಗಿ ನೇಮಿಸುವುದು.

ii) **ಮಂಡಳಿಯ ಉದ್ದೇಶಗಳು:**

ಮಂಡಳಿಯ ಉದ್ದೇಶವು ಮಂಡಳಿಯ ವ್ಯಾಪ್ತಿಗೊಳಪಡುವ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು. ಮೂಲಭೂತ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ ನಿರ್ಮಾಣ, ಸೇತುವೆ ನಿರ್ಮಾಣ (ಕಾಲು ಸೇತುವೆ ಮತ್ತು ತೂಗು ಸೇತುವೆಗಳು), ಶಾಲೆ, ಕಾಲೇಜುಗಳು, ಆಸ್ಪತ್ರೆ ಮತ್ತು ಹಾಸ್ಟೆಲ್ ಕಟ್ಟಡ ನಿರ್ಮಾಣ, ನಗರ ಮತ್ತು ಗ್ರಾಮೀಣ ನೀರು ಸರಬರಾಜು ಯೋಜನೆಗಳು, ಸಣ್ಣ ನೀರಾವರಿ ಕಾಮಗಾರಿಗಳು ಮತ್ತು ಗ್ರಾಮೀಣ ವಿದ್ಯುಚ್ಛಕ್ತಿ ಯೋಜನೆಗಳಿಗೆ ಒತ್ತು ನೀಡಲಾಗಿದೆ.

iii) **ಲೆಕ್ಕಶೀರ್ಷಿಕೆ: 2515–00–103–0–02 (ಯೋಜನೆ)**

iv) **ರಾಜ್ಯದ ಪಾಲು – ಶೇಕಡ 100 ರಷ್ಟು**

(ರೂ. ಲಕ್ಷಗಳಲ್ಲಿ)

| ವರ್ಷ | ಆಯವ್ಯಯ | ಬಿಡುಗಡೆಯಾದ ಅನುದಾನ | ವೆಚ್ಚ* | ಮುಕ್ತಾಯಗೊಂಡ ಕಾಮಗಾರಿಗಳ ಸಂಖ್ಯೆ |
|---|---|---|---|---|
| 2009-10 | 1600.00 | 1596.00 | 1420.00 | 1283 |
| 2010-11 | 2000.00 | 1500.00 | 750.00 | 340 |
| 2011-12 | 3400.00 | 3360.00 | 3048.24 | 532 |
| 2012-13 | 3400.00 | 3400.00 | 3233.27 | 575 |
| 2013-14 | 3430.00 | 2572.50 | 3111.00 | 635 |

* ಭರಿಸಿದ ವೆಚ್ಚವು ಪ್ರಾರಂಭಿಕ ಶಿಲ್ಕನ್ನು ಒಳಗೊಂಡಿರುತ್ತದೆ.

**ಟಿಪ್ಪಣಿ**: ಕಾಮಗಾರಿವಾರು ವಿವರಗಳನ್ನು http://stg1.kar.nic.in/madb ವೆಬ್‌ಸೈಟ್‌ನಲ್ಲಿ ನೀಡಲಾಗಿದೆ

## ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ

i) **ಸ್ಥಾಪನೆ:**

ಕರ್ನಾಟಕ ಅಧಿನಿಯಮ **ಸಂಖ್ಯೆ:38 ರಡಿ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಅಧಿನಿಯಮ 1994ರಡಿ** ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯನ್ನು 1995ನೇ ವರ್ಷದಲ್ಲಿ ಸ್ಥಾಪಿಸಲಾಯಿತು. ಬಯಲುಸೀಮೆ ಅಭಿವೃದ್ಧಿಯ ಪ್ರದೇಶವು ವಿಶೇಷ ಸಮಸ್ಯೆಗಳಿರುವ ಬರ ಪೀಡಿತ ತಾಲ್ಲೂಕುಗಳೆಂದು ಗುರುತಿಸಲಾದ ರಾಜ್ಯದ 56

ತಾಲ್ಲೂಕುಗಳನ್ನು ಒಳಗೊಂಡಿದೆ. ಈ ಪ್ರದೇಶವನ್ನು ರಾಜ್ಯದ ಇತರೆ ಭಾಗದ ಅಭಿವೃದ್ಧಿ ಮಟ್ಟಕ್ಕೆ ತರುವುದಕ್ಕಾಗಿ ಹಾಗೂ ಅಭಿವೃದ್ಧಿ ಕಾರ್ಯವನ್ನು ತ್ವರಿತಗೊಳಿಸುವ ಉದ್ದೇಶಕ್ಕಾಗಿ ಈ ಮಂಡಳಿಯನ್ನು ಸ್ಥಾಪಿಸಲಾಯಿತು. ಒಟ್ಟು 14 ಜಿಲ್ಲೆಗಳಲ್ಲಿನ 70 ವಿಧಾನಸಭಾ ಕ್ಷೇತ್ರಗಳು ಮಂಡಳಿಯ ವ್ಯಾಪ್ತಿಯಲ್ಲಿವೆ. 14 ಜಿಲ್ಲೆಗಳು ಯಾವುವು ಎಂದರೆ ಬೆಂಗಳೂರು (ಗ್ರಾಮೀಣ), ರಾಮನಗರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಹಾಸನ, ಚಿತ್ರದುರ್ಗ, ಧಾರವಾಡ, ದಾವಣಗೆರೆ, ಗದಗ, ಹಾವೇರಿ, ಬೆಳಗಾಂ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳು. ಸರ್ಕಾರವು 147 ಸದಸ್ಯರ ಪೈಕಿ ಒಬ್ಬರನ್ನು ಮಂಡಳಿಯ ಅಧ್ಯಕ್ಷರನ್ನಾಗಿ ನೇಮಿಸುವುದು ಹಾಗೂ ಪ್ರಾದೇಶಿಕ ಆಯುಕ್ತರ ದರ್ಜೆಗೆ ಕೆಳಗಿನವರಲ್ಲದ ಒಬ್ಬ ಅಧಿಕಾರಿಯನ್ನು ಮಂಡಳಿಯ ಕಾರ್ಯದರ್ಶಿಯನ್ನಾಗಿ ನೇಮಿಸುವುದು.

ii) **ಮಂಡಳಿಯ ಉದ್ದೇಶಗಳು:**

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಕರ್ತವ್ಯಗಳು:

1. ಜಲಮೂಲಗಳ ಪುನರುಜ್ಜೀವನ ಮತ್ತು ಸಂರಕ್ಷಣೆಗೆ ಪ್ರೋತ್ಸಾಹ ನೀಡುವುದು.
2. ಮಳೆ ಆಧಾರಿತ ಕೃಷಿ ಪದ್ಧತಿಗಳಲ್ಲಿ ಭೂಸಾರ ಮತ್ತು ಜಲ ಸಂರಕ್ಷಣೆ ಕ್ರಮಗಳನ್ನು ಅಳವಡಿಸಿಕೊಳ್ಳುವುದು ಹಾಗೂ ಅರಣ್ಯಾಭಿವೃದ್ಧಿ ಉತ್ತೇಜನ ನೀಡುವುದು.
3. ತೋಟಗಾರಿಕೆ ಅಭಿವೃದ್ಧಿಗೆ ಪ್ರೋತ್ಸಾಹ ನೀಡುವುದು.
4. ಪಶುಸಂಗೋಪನೆಗೆ ಉತ್ತೇಜನ ನೀಡುವುದು.
5. ಕೃಷಿ ಮತ್ತು ತತ್ಸಂಬಂಧಿ ವಲಯಗಳ ಚಟುವಟಿಕೆಗಳಿಗೆ ಉತ್ತೇಜಿಸುವುದು ಮತ್ತು ನೆರವು ನೀಡುವುದು.

iii) **ಲೆಕ್ಕಶೀರ್ಷಿಕೆ: 2515–00–103–0–03 (ಯೋಜನೆ)**

iv) **ರಾಜ್ಯದ ಪಾಲು – ಶೇಕಡ 100 ರಷ್ಟು**

(ರೂ.ಲಕ್ಷಗಳಲ್ಲಿ)

| ವರ್ಷ | ಆಯವ್ಯಯ | ಅನುದಾನ ಬಿಡುಗಡೆ | ವೆಚ್ಚ.* | ಮುಕ್ತಾಯಗೊಂಡ ಕಾಮಗಾರಿಗಳ ಸಂಖ್ಯೆ |
|---|---|---|---|---|
| 2009-10 | 700.00 | 575.50 | 1057.00 | 355 |
| 2010-11 | 700.00 | 350.00 | 305.00 | 56 |
| 2011-12 | 600.00<br>400.00 # | 800.00 | 750.85 | 189 |
| 2012-13 | 1700.00 | 1275.00 | 1017.83 | 263 |
| 2013-14 | 1730.00 | 1297.50 | 1140.669 | 256 |

*ಭರಿಸಿದ ವೆಚ್ಚವು ಪ್ರಾರಂಭಿಕ ಶಿಲ್ಕನ್ನು ಒಳಗೊಂಡಿರುತ್ತದೆ.

**# ಹೆಚ್ಚುವರಿಯಾಗಿ ರೂ.400.00 ಲಕ್ಷಗಳನ್ನು ಒದಗಿಸಲಾಗಿದೆ.**

## ಕರಾವಳಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಮಂಗಳೂರು

ಸರ್ಕಾರದ ಆದೇಶ **ಸಂಖ್ಯೆ:ನಅಇ 582 ಅಪ್ರಾ 2008, ದಿನಾಂಕ: 08–09–2008ರನ್ವಯ** ಅಧ್ಯಕ್ಷರು ಹಾಗೂ 22 ಸದಸ್ಯರುಗಳನ್ನೊಳಗೊಂಡಂತೆ ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಯಿತು. ಇದಲ್ಲದೆ, ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷರುಗಳು, ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು, ಕರ್ನಾಟಕ ನಗರ ಮೂಲಭೂತ ಸೌಕರ್ಯ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು, ಪ್ರವಾಸೋದ್ಯಮ; ಬಂದರು ಮತ್ತು ಒಳನಾಡು ಸಾರಿಗೆ ಇಲಾಖೆ,

ಲೋಕೋಪಯೋಗಿ ಇಲಾಖೆ ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ಸಾರ್ವಜನಿಕ–ಖಾಸಗಿ ಪಾಲುದಾರಿಕೆಯೊಂದಿಗೆ ರಸ್ತೆಗಳು, ಫ್ಲೈಓವರ್ಸ್, ಪ್ರವಾಸೋದ್ಯಮ ಯೋಜನೆಗಳು, ಬಂದರು, ಕೈಗಾರಿಕೆ ಮತ್ತು ಮಾಹಿತಿ ತಂತ್ರಜ್ಞಾನ ಪಾರ್ಕ್‌ಗಳ ಶಕ್ಯತಾ ವರದಿ ಮತ್ತು ಯೋಜನೆಗಳ ಸಂಪೂರ್ಣ ವರದಿಗಳನ್ನು ಯೋಜನಾ ಇಲಾಖೆಯ ಅನುಮೋದನೆಯೊಂದಿಗೆ ಆಡಳಿತ ಇಲಾಖೆಗಳೊಂದಿಗೆ ಸಮಾಲೋಚಿಸಿ ಕ್ರಮ ಕೈಗೊಳ್ಳುವುದು ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಉದ್ದೇಶವಾಗಿದೆ.

**ಲೆಕ್ಕಶೀರ್ಷಿಕೆ: 2217–80–001–1–06**

**ರಾಜ್ಯದ ಪಾಲು – ಶೇಕಡ 100 ರಷ್ಟು**

**(ರೂ. ಲಕ್ಷಗಳಲ್ಲಿ)**

| ವರ್ಷ | ಆಯವ್ಯಯ | ಅನುದಾನ ಬಿಡುಗಡೆ | ವೆಚ್ಚ* |
|---|---|---|---|
| 2009-10 | 200.00 | 100.50 | 37.10 |
| 2010-11 | 300.00 | 150.00 | 31.96 |
| 2011-12 | 300.00 | 150.00 | 117.00 |
| 2012-13 | 500.00 | 250.00 | 106.05 |
| 2013-14 | 100.00 | 50.00 | 45.60 |

* ಭರಿಸಿದ ವೆಚ್ಚವು ಪ್ರಾರಂಭಿಕ ಶಿಲ್ಕನ್ನು ಒಳಗೊಂಡಿರುತ್ತದೆ.

**ಟಿಪ್ಪಣಿ:** ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ವೆಬ್‌ಸೈಟ್ http://www.kkap.org/

**ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ (KLLADS)**

ಈ ಯೋಜನೆಯು ಕೇಂದ್ರ ಸರ್ಕಾರದ ಸಂಸತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಪ್ರತಿರೂಪವಾಗಿದೆ. ಶಾಸಕರ ಕ್ಷೇತ್ರದಲ್ಲಿ ಕ್ಷೇತ್ರಮಟ್ಟದಲ್ಲಿ ಜನರ ಆಶೋತ್ತರ ಮತ್ತು ಅಗತ್ಯತೆಗಳನ್ನು ಈಡೇರಿಸುವ ದೃಷ್ಟಿಯಿಂದ ಈ ಯೋಜನೆಯನ್ನು 2001–02 ರಿಂದ ಜಾರಿಗೊಳಿಸಲಾಯಿತು. ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಮಾರ್ಗಸೂಚಿಗಳನ್ನು 2012–13 ರಲ್ಲಿ ಪರಿಷ್ಕರಿಸಲಾಗಿದೆ. ಮಾರ್ಗಸೂಚಿಗಳಲ್ಲಿ ಈ ಯೋಜನೆಯಡಿ ಕೈಗೊಳ್ಳಬಹುದಾದ ಕಾಮಗಾರಿಗಳ ವಿವರಗಳನ್ನು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ.

ಸಂಬಂಧಪಟ್ಟ ಶಾಸಕರು ಶಿಫಾರಸ್ಸು ಮಾಡುವ ಕಾಮಗಾರಿಗಳನ್ನು ಜಿಲ್ಲಾಧಿಕಾರಿಗಳು ಮಾರ್ಗಸೂಚಿಗಳನ್ವಯ ಅನುಮೋದಿಸಿ ಅನುಷ್ಠಾನಗೊಳಿಸುತ್ತಾರೆ. 2013–14ನೇ ಸಾಲಿನಿಂದ ಅನುದಾನವನ್ನು ಪ್ರತಿ ವಿಧಾನಸಭೆ/ವಿಧಾನಪರಿಷತ್ ಕ್ಷೇತ್ರಕ್ಕೆ ರೂ.1.00 ಕೋಟಿಯಿಂದ ರೂ.2.00 ಕೋಟಿಗಳಿಗೆ ಹೆಚ್ಚಿಸಲಾಗಿದೆ.

**ಲೆಕ್ಕಶೀರ್ಷಿಕೆ:**

ರಾಜ್ಯ ಶಾಸಕರ ನಿಧಿ: 2575-60-265-0-01(ರಾಜ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ದಿ ಯೋಜನೆ)

ಜಿಲ್ಲಾ ಮಟ್ಟ ವೆಚ್ಚ- 2575-60-265-0-02 (ಶಾಸಕರ ಕ್ಷೇತ್ರ ಅಭಿವೃದ್ದಿ ನಿಧಿ–ಇತರೆ)

ಕಶಾಸಪ್ರ - 4575-60-800-0-01(ಶಾಸಕರ ಕ್ಷೇತ್ರ ಅಭಿವೃದ್ದಿ ನಿಧಿ)

**ರಾಜ್ಯದ ಪಾಲು – ಶೇಕಡ 100 ರಷ್ಟು**

(ರೂ.ಲಕ್ಷಗಳಲ್ಲಿ)

| ವರ್ಷ | ಆಯವ್ಯಯದಲ್ಲಿ ಒದಗಿಸಿದ ಅನುದಾನ | ಬಿಡುಗಡೆಯಾದ ಅನುದಾನ | ವೆಚ್ಚ |
|---|---|---|---|
| 2009-10 | 46050.00 | 46050.00 | 35664.15 |
| 2010-11 | 29920.00 | 24914.00 | 16541.35 |
| 2011-12 | 30000.00 | 29764.00 | 29862.00 |
| 2012-13 | 30000.00 | 29862.00 | 28285.37 |
| 2013-14 | 30150.00 +30000.00 | 59837.58 | 27704.14 |

* ಭರಿಸಿದ ವೆಚ್ಚವು ಪ್ರಾರಂಭಿಕ ಶಿಲ್ಕನ್ನು ಒಳಗೊಂಡಿರುತ್ತದೆ.

ಪ್ರದೇಶಾಭಿವೃದ್ಧಿ ಮಂಡಳಿಯ ವಿಭಾಗದ ಮಂಜೂರಾದ ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು.

| ಗುಂಪು | ಒಟ್ಟು ಮಂಜೂರಾದ ಹುದ್ದೆಗಳು | ಭರ್ತಿ ಮಾಡಲ್ಪಟ್ಟ ಹುದ್ದೆಗಳು | | | ಪರಿಶಿಷ್ಟ ಜಾತಿ | | | ಪರಿಶಿಷ್ಟ ಪಂಗಡ | | | ಖಾಲಿ ಹುದ್ದೆ | ನಿವೃತ್ತಿ ಹೊಂದಲಿರುವವರು |
|---|---|---|---|---|---|---|---|---|---|---|---|---|
| | | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | | |
| ಎ | 3 | 2 | 1 | 3 | 1 | - | 1 | - | - | - | - | - |
| ಬಿ | 2 | 1 | 1 | 2 | - | 1 | 1 | - | - | - | - | |
| ಸಿ | 3 | 1 | 1 | 2 | - | - | - | - | - | - | 1 | - |
| ಡಿ | 1 | - | 1 | 1 | - | 1 | 1 | - | - | - | - | - |
| ಒಟ್ಟು | **9** | **4** | **4** | **8** | **1** | **2** | **3** | **-** | **-** | **-** | **1** | **-** |

## 3. ಸಂಸತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ (ಎಂಪಿಲ್ಯಾಡ್ಸ್)

ಸಂಸತ್ ಸದಸ್ಯರ ಶಿಫಾರಸ್ಸಿನ ಮೇರೆಗೆ ಸಾಮೂದಾಯಿಕ ಆಸ್ತಿ ಸೃಜನೆಯ ವೆಚ್ಚವನ್ನು ಭರಿಸಲು ವಿಶೇಷ ಕೇಂದ್ರ ನೆರವು ನೀಡಲು ಭಾರತ ಸರ್ಕಾರವು ಡಿಸೆಂಬರ್ 1993ರಲ್ಲಿ ಸಂಸತ್ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಿತು. ಯೋಜನೆಯ ಅನುಷ್ಠಾನಕ್ಕೆ ಮಾರ್ಗಸೂಚಿಯು ಇರುತ್ತದೆ. ಈ ಯೋಜನೆಯಡಿಯಲ್ಲಿ ಪ್ರತಿಯೊಬ್ಬ ಸದಸ್ಯರಿಗೆ ತಲಾ ರೂ.5.00 ಕೋಟಿ ಮೊತ್ತವನ್ನು ಭಾರತ ಸರ್ಕಾರವು ನಿಗಧಿ ಪಡಿಸಿದ್ದು, ಸದರಿ ಅನುದಾನವನ್ನು ನೇರವಾಗಿ ನೋಡಲ್ ಜಿಲ್ಲಾಧಿಕಾರಿಗಳಿಗೆ ಬಿಡುಗಡೆಗೊಳಿಸಲಾಗುತ್ತಿದ್ದು, ಸಂಸತ್ ಸದಸ್ಯರು ಶಿಫಾರಸ್ಸು ಮಾಡುವ ಸ್ಥಳೀಯವಾಗಿ ಅವಶ್ಯವಿರುವ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಲೋಕಸಭೆಯಲ್ಲಿ (15ನೇ ಲೋಕಸಭೆ) 28 ಸದಸ್ಯರು, ರಾಜ್ಯ ಸಭೆಯಲ್ಲಿ 12 ಸದಸ್ಯರು ಮತ್ತು ರಾಜ್ಯಸಭೆಗೆ ನಾಮಾಂಕಿತಗೊಳಿಸಿರುವ 01 ಸದಸ್ಯರು ಕರ್ನಾಟಕವನ್ನು ಪ್ರತಿನಿಧಿಸುತ್ತಿದ್ದಾರೆ. ಭಾರತ ಸರ್ಕಾರ ಮತ್ತು ಜಿಲ್ಲಾಧಿಕಾರಿಗಳ ನಡುವಣ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಎಂಪಿಲ್ಯಾಡ್ಸ್ ಕೋಶವು ನೋಡಲ್ ಇಲಾಖೆಯಾಗಿ ಕಾರ್ಯನಿರ್ವಹಿಸುತ್ತಿದೆ. ಎಂಪಿಲ್ಯಾಡ್ಸ್ ಯೋಜನೆಯಡಿ ಕಾಮಗಾರಿಯ ತಪಾಸಣೆ ಮತ್ತು ಮೇಲ್ವಿಚಾರಣೆಯನ್ನು (ಪುನರವಲೋಕನವನ್ನು) ಮಾಡಲು ಲೋಕಸಭೆ ಮತ್ತು ರಾಜ್ಯ ಸಭೆಯ ಸಂಸತ್ ಸಮಿತಿಯಲ್ಲಿ ಆಗಿಂದಾಗ್ಗೆ ರಾಜ್ಯಗಳಿಗೆ ಭೇಟಿ ನೀಡುತ್ತದೆ. ಯೋಜನೆಯ ಲಕ್ಷಣಗಳು, ನಿಷಿದ್ಧ ಕಾಮಗಾರಿಗಳ ಪಟ್ಟಿ ಮತ್ತು ಬಾಳಿಕೆ ಬಾರದ ಕಾಮಗಾರಿಗಳು, ವಿವರವಾದ ಮಾರ್ಗಸೂಚಿ, ಸರ್ಕಾರಿ ಆದೇಶಗಳು, ಸುತ್ತೋಲೆಗಳು www.mplads.nic.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

**ಮಾರ್ಗಸೂಚಿಯ ಕೆಲವು ಪ್ರಮುಖ ಅಂಶಗಳೆಂದರೆ:**

1. ಮುಖ್ಯ ವಲಯಗಳಾದ ಕುಡಿಯುವ ನೀರು, ಶಿಕ್ಷಣ, ಸಾರ್ವಜನಿಕ ಆರೋಗ್ಯ ಮತ್ತು ರಸ್ತೆಗಳಿಗೆ ಆದ್ಯತೆ.
2. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ವಾಸಿಸುವ ಜನವಸತಿಗಳ ಅಭಿವೃದ್ಧಿಗೆ ಕ್ರಮವಾಗಿ ಶೇ.15 ಮತ್ತು ಶೇ.7.5ರಷ್ಟು ಹಣ ನಿಗಧಿ.
3. ಪುನರ್ವಸತಿ ಮತ್ತು ನೈಸರ್ಗಿಕ ವಿಕೋಪಕ್ಕೀಡಾದ ಪ್ರದೇಶಗಳ ಅಭಿವೃದ್ಧಿಗಾಗಿ ಮಿತಿ ರೂ.50.00 ಲಕ್ಷಕ್ಕೆ ಹೆಚ್ಚಳ.
4. ಪಂಚಾಯತ್‌ರಾಜ್ ಸಂಸ್ಥೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳನ್ನು ಅನುಷ್ಠಾನಾಧಿಕಾರಿಯಾಗಿ ನೇಮಿಸಲು ಒತ್ತು.

ರಾಜ್ಯದಲ್ಲಿ ಯೋಜನೆಯ ಅನುಷ್ಠಾನದ ಸಮರ್ಪಕ ಮತ್ತು ಪರಿಣಾಮಕಾರಿ ಉಸ್ತುವಾರಿಯನ್ನು ಸಾಂಖ್ಯಿಕ ಮತ್ತು ಯೋಜನೆ ಮಂತ್ರಾಲಯದೊಂದಿಗೆ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಎಂಪಿಲ್ಯಾಡ್ಸ್ ಕೋಶವು ನಿಭಾಯಿಸುತ್ತದೆ. ಜಿಲ್ಲಾಧಿಕಾರಿಗಳು ನಿಗಧಿತ ಸಮಯದಲ್ಲಿ ಯೋಜನಾ ಮಂತ್ರಾಲಯಕ್ಕೆ ಬಳಕೆ ಪ್ರಮಾಣ ಪತ್ರ ಮತ್ತು ಲೆಕ್ಕ ಪರಿಶೋಧನಾ ಪ್ರಮಾಣ ಪತ್ರ ಸಲ್ಲಿಸುವುದರ ಕುರಿತಾದ ಸಮನ್ವಯ ಕಾರ್ಯವನ್ನು ಸಹ ನಿರ್ವಹಿಸುತ್ತದೆ.

ಸಂಸತ್ ಸದಸ್ಯರ ಹೆಸರುಗಳು, ಅನುದಾನ ಬಿಡುಗಡೆ ಮಾಡಿರುವ ವಿವರಗಳನ್ನು ಅನುಬಂಧ-1 ಮತ್ತು ಅನುಬಂಧ-2ರಲ್ಲಿ ತೋರಿಸಲಾಗಿದೆ.

ಯೋಜನೆಯ ಕ್ರೋಢೀಕೃತ ಪ್ರಗತಿಯು ಈ ಕೆಳಗೆ ಸೂಚಿಸಿದಂತಿರುತ್ತದೆ.

- ಮಂಜೂರಾದ ಕಾಮಗಾರಿಗಳಿಗೆ ಮುಕ್ತಾಯವಾದ ಕಾಮಗಾರಿಗಳ ಶೇಕಡಾವಾರು – 78.04%
- ಬಿಡುಗಡೆಯಾದ ಅನುದಾನಕ್ಕೆ ಶೇಕಡಾವಾರು ಹಣ ಬಳಕೆಗೆ - 90.49%
- ಬಿಡುಗಡೆ ಅನುದಾನದ ಪ್ರಗತಿ (ಲೋಕಸಭೆ ಮತ್ತು ರಾಜ್ಯಸಭೆ)

(ರೂ. ಕೋಟಿಗಳಲ್ಲಿ)

| ಬಿಡುಗಡೆಯಾದ ಅನುದಾನ | ಸಂಚಿತ ಬಡ್ಡಿ | ಖರ್ಚಾದ ಅನುದಾನ | ಜಿಲ್ಲಾಧಿಕಾರಿಗಳ ಬಳಿ ಉಳಿಕೆಯಾದ ಅನುದಾನ |
|---|---|---|---|
| 1623.50 | 52.32 | 1469.17 | 206.65 |

**ಬಿಡುಗಡೆಯಾಗಬೇಕಾದ ಅನುದಾನ**

(ರೂ. ಕೋಟಿಗಳಲ್ಲಿ)

| 15ನೇ ಲೋಕಸಭೆ | ರಾಜ್ಯಸಭೆ | ಒಟ್ಟು |
|---|---|---|
| 85.00 | 57.50 | 142.50 |

## ಅನುಬಂಧ–I

**ಮಾನ್ಯ ಲೋಕಸಭಾ ಸದಸ್ಯರ ಪಟ್ಟಿ ಮತ್ತು ದಿನಾಂಕ: 31.03.2014 ರಲ್ಲಿದ್ದಂತೆ ಬಿಡುಗಡೆಯಾಗಬೇಕಾದ ಬಾಕಿ ಅನುದಾನದ ವಿವರ**

(ರೂ. ಕೋಟಿಗಳಲ್ಲಿ)

| ಕ್ರ. ಸಂ | ಮಾನ್ಯ ಲೋಕಸಭಾ ಸದಸ್ಯರು ಮತ್ತು ಕ್ಷೇತ್ರ ಶ್ರೀ/ಶ್ರೀಯುತರು | ಮೊದಲನೇ ಕಂತು | ಎರಡನೇ ಕಂತು | ಬಾಕಿ ಮೊತ್ತ |
|---|---|---|---|---|
| 1 | ಬಾಗಲಕೋಟೆ<br>ಪಿ.ಸಿ.ಗಡ್ಡಿಗೌಡರು | - | 2.5 | 2.5 |
| 2 | ಬೆಂಗಳೂರು ಉತ್ತರ<br>ಡಿ.ಬಿ.ಚಂದ್ರೇಗೌಡ | - | 2.5 | 2.5 |
| 3 | ಬೆಂಗಳೂರು ದಕ್ಷಿಣ<br>ಅನಂತ್ ಕುಮಾರ್ | - | 2.5 | 2.5 |
| 4 | ಬೆಳಗಾಂ<br>ಸುರೇಶ್ ಚೆನ್ನಬಸಪ್ಪ ಅಂಗಡಿ | 2.5 | 2.5 | 5.0 |
| 5 | ಬಳ್ಳಾರಿ (ಎಸ್ ಟಿ)<br>ಜೆ.ಶಾಂತ | 2.5 | 2.5 | 5.0 |
| 6 | ಬೀದರ್<br>ಎನ್.ಧರಂಸಿಂಗ್ | - | 2.5 | 2.5 |
| 7 | ಬಿಜಾಪುರ (ಎಸ್‌ಸಿ)<br>ರಮೇಶ್ ಚಂದಪ್ಪ ಜಿಗಜಿಣಗಿ | 2.5 | 2.5 | 5.0 |
| 8 | ಚಾಮರಾಜನಗರ (ಎಸ್‌ಸಿ)<br>ರಂಗಸ್ವಾಮಿ ಧೃವನಾರಾಯಣ | - | - | - |
| 9 | ಚಿಕ್ಕಬಳ್ಳಾಪುರ<br>ಎಂ.ವೀರಪ್ಪಮೊಯ್ಲಿ | - | 2.5 | 2.5 |
| 10 | ಚಿಕ್ಕೋಡಿ<br>ರಮೇಶ್ ವಿಶ್ವನಾಥ್ ಕಟ್ಟಿ | - | 2.5 | 2.5 |
| 11 | ಉಡುಪಿ ಚಿಕ್ಕಮಂಗಳೂರು<br>ಜಯಪ್ರಕಾಶ್ ಹೆಗಡೆ | - | 2.5 | 2.5 |
| 12 | ಚಿತ್ರದುರ್ಗ(ಎಸ್‌ಸಿ)<br>ಜನಾರ್ಧನ್ ಸ್ವಾಮಿ | - | 2.5 | 2.5 |
| 13 | ದಾವಣಗೆರೆ<br>ಜಿ.ಎಂ.ಸಿದ್ದೇಶ್ವರ | - | 2.5 | 2.5 |
| 14 | ಧಾರವಾಡ<br>ಪ್ರಹ್ಲಾದ್ ವೆಂಕಟೇಶ್ ಜೋಷಿ | 2.5 | 2.5 | 5.0 |
| 15 | ಹಾವೇರಿ<br>ಉದಾಸಿ ಶಿವಕುಮಾರ್ ಚನ್ನಬಸಪ್ಪ | - | 2.5 | 2.5 |
| 16 | ಗುಲ್ಬರ್ಗಾ(ಎಸ್‌ಸಿ)<br>ಮಲ್ಲಿಕಾರ್ಜುನ ಖರ್ಗೆ | - | 2.5 | 2.5 |

| ಕ್ರ. ಸಂ | ಮಾನ್ಯ ಲೋಕಸಭಾ ಸದಸ್ಯರು ಮತ್ತು ಕ್ಷೇತ್ರ ಶ್ರೀ/ಶ್ರೀಯುತರು | ಮೊದಲನೇ ಕಂತು | ಎರಡನೇ ಕಂತು | ಬಾಕಿ ಮೊತ್ತ |
|---|---|---|---|---|
| 17 | ಹಾಸನ<br>ಎಚ್.ಡಿ.ದೇವೇಗೌಡ | - | 2.5 | 2.5 |
| 18 | ಉತ್ತರ ಕನ್ನಡ<br>ಅನಂತ್ ಕುಮಾರ್ ಹೆಗಡೆ | 2.5 | 2.5 | 5.0 |
| 19 | ದಕ್ಷಿಣ ಕನ್ನಡ<br>ನಳಿನ್ ಕುಮಾರ್ ಕಟೀಲ್ | - | - | - |
| 20 | ಕೋಲಾರ (ಎಸ್‌ಸಿ)<br>ಕೆ.ಎಚ್.ಮುನಿಯಪ್ಪ | - | 2.5 | 2.5 |
| 21 | ಕೊಪ್ಪಳ<br>ಶಿವರಾಮಗೌಡ | 2.5 | 2.5 | 5.0 |
| 22 | ಮಂಡ್ಯ<br>ಕು.ರಮ್ಯ | - | - | - |
| 23 | ಬೆಂಗಳೂರು ಗ್ರಾಮಾಂತರ<br>ಡಿ.ಕೆ. ಸುರೇಶ | - | - | - |
| 24 | ಮೈಸೂರು<br>ಅಡಗೂರು ಎಚ್. ವಿಶ್ವನಾಥ್ | 2.5 | 2.5 | 5.0 |
| 25 | ರಾಯಚೂರು (ಎಸ್‌ಸಿ)<br>ಎಸ್.ಫಕೀರಪ್ಪ | 2.5 | 2.5 | 5.0 |
| 26 | ಶಿವಮೊಗ್ಗ<br>ರಾಘವೇಂದ್ರ ಯಡಿಯೂರಪ್ಪ | - | 2.5 | 2.5 |
| 27 | ತುಮಕೂರು<br>ಜಿ.ಎಸ್.ಬಸವರಾಜ್ | 2.5 | 2.5 | 5.0 |
| 28 | ಬೆಂಗಳೂರು ಕೇಂದ್ರ<br>ಪಿ.ಸಿ.ಮೋಹನ್ | 2.5 | 2.5 | 5.0 |
| | **ಒಟ್ಟು** | **25.00** | **60.00** | **85.00** |

## ಅನುಬಂಧ –II

**ಮಾನ್ಯ ರಾಜ್ಯಸಭಾ ಸದಸ್ಯರ ಪಟ್ಟಿ ಮತ್ತು ದಿನಾಂಕ: 31.03.2014 ರಲ್ಲಿದ್ದಂತೆ ಬಿಡುಗಡೆಯಾಗಬೇಕಾದ ಬಾಕಿ ಅನುದಾನದ ವಿವರ**

(ರೂ. ಕೋಟಿಗಳಲ್ಲಿ)

| ಕ್ರ.ಸಂ | ಮಾನ್ಯ ರಾಜ್ಯಸಭಾ ಸದಸ್ಯರು ಮತ್ತು ಕ್ಷೇತ್ರ | ಮೊದಲನೇ ಕಂತು | ಎರಡನೇ ಕಂತು | ಬಾಕಿ ಮೊತ್ತ |
|---|---|---|---|---|
| 1 | ಶಿವಮೊಗ್ಗ<br>ಆಯನೂರ್ ಮಂಜುನಾಥ್ | 2.5 | 2.5 | 5.0 |
| 2 | ಬೆಂಗಳೂರು ನಗರ<br>ಬಿ.ಕೆ ಹರಿಪ್ರಸಾದ್ | - | - | - |

| ಕ್ರ.ಸಂ | ಮಾನ್ಯ ರಾಜ್ಯಸಭಾ ಸದಸ್ಯರು ಮತ್ತು ಕ್ಷೇತ್ರ | ಮೊದಲನೇ ಕಂತು | ಎರಡನೇ ಕಂತು | ಬಾಕಿ ಮೊತ್ತ |
|---|---|---|---|---|
| 3 | ಗುಲ್ಬರ್ಗಾ<br>ಬಸವರಾಜ್ ಪಾಟೀಲ್ | 2.5 | 2.5 | 5.0 |
| 4 | ಬೆಂಗಳೂರು ನಗರ<br>ಕೆ.ರೆಹಮಾನ್ ಖಾನ್ | 2.5 | 2.5 | 5.0 |
| 5 | ಬೆಂಗಳೂರು ನಗರ<br>ಎಂ.ರಾಮಾಜೋಯಿಸ್ | 2.5 | 2.5 | 5.0 |
| 6 | ಬೆಂಗಳೂರು ನಗರ<br>ಎಂ.ವೆಂಕಯ್ಯನಾಯ್ಡು | 2.5 | 2.5 | 5.0 |
| 7 | ಉಡುಪಿ<br>ಆಸ್ಕರ್ ಫರ್ನಾಂಡಿಸ್ | 2.5 | 2.5 | 5.0 |
| 8 | ಬೆಳಗಾಂ<br>ಪ್ರಭಾಕರ್ ಕೋರೆ | 2.5 | 2.5 | 5.0 |
| 9 | ಬೆಂಗಳೂರು ನಗರ<br>ರಾಜೀವ್ ಚಂದ್ರಶೇಖರ್ | - | 2.5 | 2.5 |
| 10 | ಬೆಂಗಳೂರು ನಗರ<br>ರಂಗಸಾಯಿ ರಾಮಕೃಷ್ಣ | 2.5 | 2.5 | 5.0 |
| 11 | ಬೆಂಗಳೂರು ನಗರ<br>ಎಸ್.ಎಂ.ಕೃಷ್ಣ | 2.5 | 2.5 | 5.0 |
| 12 | ಬೆಂಗಳೂರು ನಗರ<br>ವಿಜಯಮಲ್ಯ | 2.5 | 2.5 | 5.0 |
| 13 | ನಾಮನಿರ್ದೇಶಿತ ಸದಸ್ಯರು<br>ಬಿ.ಜಯಶ್ರೀ | 2.5 | 2.5 | 5.0 |
| **ಒಟ್ಟು** | | **27.50** | **30.00** | **57.50** |

**ಎಂಪಿಲ್ಯಾಡ್ಸ್ ವಿಭಾಗದ ಮಂಜೂರಾದ ಹಾಗೂ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು.**

| ಗುಂಪು | ಒಟ್ಟು ಮಂಜೂರಾದ ಹುದ್ದೆಗಳು | ಭರ್ತಿ ಮಾಡಲ್ಪಟ್ಟ ಹುದ್ದೆಗಳು | | | ಪರಿಶಿಷ್ಟ ಜತಿ | | | ಪರಿಶಿಷ್ಟ ಪಂಗಡ | | | ಖಾಲಿ ಹುದ್ದೆ | ನಿವೃತ್ತಿ ಹೊಂದಲಿರುವವರು |
|---|---|---|---|---|---|---|---|---|---|---|---|---|
| | | ಪುರುಷರು | ಮಹಿಳೆ | ಒಟ್ಟು | ಪುರುಷರು | ಮಹಿಳೆ | ಒಟ್ಟು | ಪುರುಷರು | ಮಹಿಳೆ | ಒಟ್ಟು | | |
| ಎ | 1 | 1 | - | 1 | - | - | - | - | - | - | - | - |
| ಬಿ | - | - | - | - | - | - | - | - | - | - | - | - |
| ಸಿ | 2 | 1 | - | 1 | - | - | - | - | - | - | 1 | - |
| ಡಿ | - | - | - | - | - | - | - | - | - | - | - | - |
| ಒಟ್ಟು | **3** | **2** | **-** | **2** | **-** | **-** | **-** | **-** | **-** | **-** | **1** | **-** |

## 4. ಯೋಜನಾ ಹಣಕಾಸು ಮತ್ತು ಸಂಪನ್ಮೂಲ ವಿಭಾಗ

### ಯೋಜನಾ ಹಣಕಾಸು ಮತ್ತು ಸಂಪನ್ಮೂಲ ವಿಭಾಗದ ಸಂಘಟನಾ ನಕ್ಷೆ

**ಹಿರಿಯ ನಿರ್ದೇಶಕರು (ಪಿಎಫ್‌ಆರ್ ವಿಭಾಗ)**
ಪಿಎಫ್‌ಆರ್ ವಿಭಾಗದ ಸಮಗ್ರ ಉಸ್ತುವಾರಿಯಾಗಿರುವರು ಇದರ ಜೊತೆಗೆ ಎಲ್ಲಾ ಸಭೆಗಳನ್ನು ಸಮನ್ವಯಗೊಳಿಸುವುದು ಎಲ್‌ಎ/ಎಲ್‌ಸಿ ಹಾಗೂ ಸಂಸತ್ತಿನ ಪ್ರಶ್ನಾವಳಿಗಳಿಗೆ ಉತ್ತರಿಸುವುದು. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಗೆ ಹಾಗೂ ವರ್ಕಿಂಗ್ ಗ್ರೂಪ್ ಚರ್ಚಾಸಭೆಗಳಿಗೆ ಹಾಜರಾಗುವುದು.

**ಜಂಟಿ ನಿರ್ದೇಶಕರು**
ತಾಂತ್ರಿಕ ಹಾಗೂ ಆಡಳಿತಾತ್ಮಕ ಕೆಲಸಗಳನ್ನು ನಿರ್ವಹಿಸುವುದು. ಹಾಗೂ ಹಿರಿಯ ನಿರ್ದೇಶಕರಿಗೆ ಸಹಾಯಕರಾಗಿ ಕಾರ್ಯ ನಿರ್ವಹಿಸಲಾಯಿತು.

**ಉಪನಿರ್ದೇಶಕರು–1**
ಗಣಿ & ಭೂ ವಿಜ್ಞಾನ ಕೈಮಗ್ಗ, ರೇಷ್ಮೆ, ವಾಣಿಜ್ಯ ಹಾಗೂ ಮಾಹಿತಿ ತಂತ್ರಜ್ಞಾನ ಇಲಾಖೆಗಳ ವಾರ್ಷಿಕ ಹಾಗೂ ಪಂಚವಾರ್ಷಿಕ ಯೋಜನೆಗಳನ್ನು ತಯಾರಿಸಲಾಯಿತು. ಹಿರಿಯ ನಿರ್ದೇಶಕರು ಹಾಗೂ ಜಂಟಿ ನಿರ್ದೇಶಕರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸಿರುವರು.

**ಉಪನಿರ್ದೇಶಕರು–2**
ಆರ್ಥಿಕ ಸಮೀಕ್ಷೆಗೆ ಬೇಕಾದ (1)ರಾಜ್ಯ ಹಣಕಾಸು (2) ಬಂಡವಾಳ ಹೂಡಿಕೆ ಹಾಗೂ ರಪ್ತುಗಳ ಅಧ್ಯಯನಗಳನ್ನು ತಯಾರಿಸಲಾಯಿತು. ಅಂತರ ರಾಜ್ಯಗಳ ಆರ್ಥಿಕ ಸೂಚ್ಯಂಕಗಳನ್ನು ತಯಾರಿಸಲಾಯಿತು. ಈ ವಿಭಾಗದ ಆಯವ್ಯಯ, ವಾರ್ಷಿಕ ವರದಿ ಹಾಗೂ ಮಾಹಿತಿ ಹಕ್ಕಿಗೆ ಸಂಬಂಧಿಸಿದ ಕೆಲಸ ನಿರ್ವಹಿಸಲಾಯಿತು.

**ಉಪನಿರ್ದೇಶಕರು–3**
ವಾರ್ಷಿಕ/ಪಂಚವಾರ್ಷಿಕ ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ವಿಷಯಗಳ ಬಗ್ಗೆ ಕಾರ್ಯ ನಿರ್ವಹಿಸಲಾಗಿದೆ. ಅಲ್ಲದೆ ಒಂದಾವರ್ತಿ ಕೇಂದ್ರ ಅನುದಾನದ ಬಗ್ಗೆ ಕೇಂದ್ರದೊಂದಿಗೆ ಪತ್ರವ್ಯವಹಾರ ನಡೆಸಲಾಹಿತು. ಹಿರಿಯ ನಿರ್ದೇಶಕರು ಹಾಗೂ ಜಂಟಿ ನಿರ್ದೇಶಕರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸಲಾಯಿತು.

**ಉಪನಿರ್ದೇಶಕರು–4**
ಸಹಕಾರ ಇಲಾಖೆ, ಮೂಲಭೂತ ಸೌಲಭ್ಯ ಹಾಗೂ ಲಿಗಲ್ ಪೆಟ್ರೋಲಜಿ ಇಲಾಖೆಗಳ ವಾರ್ಷಿಕ ಹಾಗೂ ಪಂಚವಾರ್ಷಿಕ ಯೋಜನೆಗಳನ್ನು ತಯಾರಿಸಲಾಯಿತು. ಹಿರಿಯ ನಿರ್ದೇಶಕರು ಹಾಗೂ ಜಂಟಿ ನಿರ್ದೇಶಕರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸಲಾಯಿತು.

**ಪತ್ರಾಂಕಿತ ಆಪ್ತಸಹಾಯಕರು**

**ಸಹಾಯಕ ನಿರ್ದೇಶಕರು–1**
ವಾರ್ಷಿಕ ಹಾಗೂ ಪಂಚವಾರ್ಷಿಕ ಯೋಜನೆಗಳಿಗೆ ಸಂಬಂಧಿಸಿದ ಎಲ್ಲಾ ಅನುಬಂಧಗಳನ್ನು ತಯಾರಿಸಲಾಯಿತು. ಅಲ್ಲದೆ ಹಿರಿಯ ನಿರ್ದೇಶಕರು, ಜಂಟಿ ನಿರ್ದೇಶಕರು ಹಾಗೂ ಉಪನಿರ್ದೇಶಕರುಗಳಿಗೆ ಇವರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುವುದು.

**ಸಹಾಯಕ ನಿರ್ದೇಶಕರು–2**
ಎಲ್‌ಎಎಸ್/ಎಫ್‌ಎಎಸ್ ಕಾರ್ಯಗಳನ್ನು ಜರಾಕ್ಸ ಹಾಗೂ ಪ್ಯಾಕ್ಸ್ ಮಿಶೀನ್‌ಗಳ ಬಗ್ಗೆ ಕಾಪಡುವುದು. (ಮೆಂಟೆನೆನ್ಸ) ಹಾಗೂ ಹಿರಿಯ ನಿರ್ದೇಶಕರು, ಜಂಟಿ ನಿರ್ದೇಶಕರು ಹಾಗೂ ಉಪನಿರ್ದೇಶಕರು ಇವರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸಲಾಯಿತು.

**ಸಹಾಯಕ ಸಂಖ್ಯಿಕ ಅಧಿಕಾರಿ**
ವಾರ್ಷಿಕ/ಪಂಚವಾರ್ಷಿಕಕ್ಕೆ ಸಂಬಂಧಿಸಿದ ಎಲ್ಲಾ ಅನುಬಂಧಗಳನ್ನು ತಯಾರಿಸುವಲ್ಲಿ ಸಹಾಯಮಾಡಲಾಯಿತು. ಹಾಗೂ ಹಿರಿಯ ನಿರ್ದೇಶಕರು, ಜಂಟಿ ನಿರ್ದೇಶಕರು ಹಾಗೂ ಉಪನಿರ್ದೇಶಕರು ಇವರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸಲಾಯಿತು.

- ಸಹಾಯಕ–1
- ಶೀಘ್ರಲಿಪಿಗಾರರು 1&2
- ಬೆರಳಚ್ಚುಗಾರರು–1
- ಕಿರಿಯ ಸಹಾಯಕರು–1
- ಜಮೆದಾರ್–1
- ದಲಾಯತ್ –1,2,3,4
- ವಾಹನ ಚಾಲಕ

**ಯೋಜನಾ ಹಣಕಾಸು ಮತ್ತು ಸಂಪನ್ಮೂಲ ವಿಭಾಗ**

ಯೋಜನಾ ಹಣಕಾಸು ಮತ್ತು ಸಂಪನ್ಮೂಲ ವಿಭಾಗದ ಕ್ರಿಯಾತ್ಮಕ ಜವಾಬ್ದಾರಿಗಳು ಈ ಕೆಳಕಂಡಂತೆ ಒಳಗೊಂಡಿರುತ್ತವೆ (ಎ)ವಾರ್ಷಿಕ ಮತ್ತು ಪಂಚವಾರ್ಷಿಕ ಯೋಜನೆಗಳ ತಯಾರಿಕೆ ಕಾರ್ಯ ಹಾಗೂ ಸಂಘಟಿಸುವ ಕಾರ್ಯ ನಿರ್ವಹಿಸುವುದು, (ಬಿ) ಯೋಜನಾ ಅಯೋಗವು ನಡೆಸುವ ಸಂಪನ್ಮೂಲಗಳ ಸಭೆಯಲ್ಲಿ ಭಾಗವಹಿಸುವುದು ಹಾಗೂ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ಯೋಜನಾ ಗಾತ್ರವನ್ನು ನಿರ್ಣಯಿಸುವುದು, (ಸಿ)ಸಂಪನ್ಮೂಲಗಳ ಲಭ್ಯತೆ, ಭಾಹ್ಯ ನೆರವಿನ ಯೋಜನೆಗಳಿಗೆ, ಮತ್ತು ಮೀಸಲಿಡು ಕಾರ್ಯಕ್ರಮಗಳಿಗೆ ಒದಗಿಸಬೇಕಾಗುವ ಮೊತ್ತದ ನಿರ್ಧರಣೆಯನ್ನು ಗಮನದಲ್ಲಿಟ್ಟುಕೊಂಡು ಅಂತರ್–ವಲಯವಾರು ಯೋಜನಾ ಅನುದಾನ ಹಂಚಿಕೆಯನ್ನು ಮಾಡುವುದು, (ಡಿ)ಯೋಜನೆಯ ವಲಯವಾರು ಅನುದಾನ ಹಂಚಿಕೆ ಮಾಡಿದ ವಿವರಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ತಿಳಿಸುವುದು, (ಇ)ಯೋಜನಾ ವಿವರಗಳನ್ನು ಯೋಜನಾ ಆಯೋಗದ ಅನುಮೋದನೆಗಾಗಿ ಸಲ್ಲಿಸುವುದು, (ಎಫ್) ಯೋಜನಾ ಆಯೋಗದ ಸದಸ್ಯರು / ಸಲಹೆಗಾರರೊಂದಿಗೆ, ರಾಜ್ಯದ ಅಧಿಕಾರಿಗಳ ಕಾರ್ಯ ನಿರ್ವಹಣೆ ಗುಂಪಿನ (ವರ್ಕಿಂಗ್ ಗ್ರೂಪ್) ಚರ್ಚಾಸಭೆಗಳನ್ನು ಏರ್ಪಡಿಸುವುದು, (ಜಿ) ಯೋಜನಾ ಗಾತ್ರ ಅಂತಿಮ–ಗೊಳಿಸುವ ಬಗ್ಗೆ ಯೋಜನಾ ಆಯೋಗದ ಉಪಾಧ್ಯಕ್ಷರ ಮತ್ತು ರಾಜ್ಯದ ಮುಖ್ಯ ಮಂತ್ರಿಗಳ ನಡುವೆ ಸಭೆಗಳನ್ನು ಏರ್ಪಡಿಸುವುದು (ಹೆಚ್) ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಗೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳನ್ನು ನಿರ್ವಹಿಸುವುದು.

2013–14ನೇ ಸಾಲಿನಲ್ಲಿ, ಸಂಪನ್ಮೂಲಗಳ ಲಭ್ಯತೆ, ಬಾಹ್ಯ ನೆರವಿನ ಯೋಜನೆಗಳಿಗೆ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಒದಗಿಸಬೇಕಾಗುವ ಮೊತ್ತದ ನಿರ್ಧರಣೆ ಹಾಗೂ ಸಾರ್ವಜನಿಕ ವಲಯದ ನಿಗಮ ಮಂಡಳಿಗಳ ಆಂತರಿಕ ಮತ್ತು ಹೆಚ್ಚುವರಿ ಸಂಪನ್ಮೂಲಗಳ ಕ್ರೋಢೀಕರಣ ಲಭ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ಅಂತರ್–ವಲಯವಾರು ಯೋಜನಾ ಮೊತ್ತದ ಹಂಚಿಕೆಯನ್ನು ಮಾಡಲಾಗಿದೆ. 2014–15ನೇ ಸಾಲಿನ ಪ್ರಸ್ತಾಪಿಸಲಾದ ವಾರ್ಷಿಕ ವಲಯವಾರು ಯೋಜನೆಯ ವಿವರಗಳನ್ನು ಎಲ್ಲಾ ಇಲಾಖೆಗಳಿಗೆ ಕಳುಹಿಸಿಕೊಡಲಾಯಿತು ಹಾಗೂ ಇದರ ಬಗ್ಗೆ ವಿವಿಧ ಇಲಾಖೆಗಳೊಂದಿಗೆ ಅನೇಕ ಸಭೆಗಳನ್ನು ನಡೆಸಿ,ಚರ್ಚಿಸಿ ಅಂತಿಮಗೊಳಿಸಲಾಯಿತು.ಸದರಿ ಅಂತಿಮಗೊಳಿಸಿದ ವಲಯವಾರು ಅನುದಾನದ ಹಂಚಿಕೆಯ ವಿವರಗಳನ್ನು ಆರ್ಥಿಕ ಇಲಾಖೆಯುಸೇರಿ ಇತರೆ ಎಲ್ಲಾ ಇಲಾಖೆಗಳಿಗೆ ಕಳುಹಿಸಿಕೊಡಲಾಯಿತು.

ಯೋಜನಾ ಹಣಕಾಸು ಮತ್ತು ಸಂಪನ್ಮೂಲ ವಿಭಾಗವು ಈ ಕೆಳಕಂಡ ಇಲಾಖೆಗಳಿಗೆ ನೋಡಲ್ ವಿಭಾಗವಾಗಿ ಕಾರ್ಯ ನಿರ್ವಹಿಸುತ್ತಿದೆ. ಸದರಿ ಇಲಾಖೆಗಳು ಅನುಷ್ಠಾನಗೋಳಿಸುವ ಯೋಜನಾ ಕಾರ್ಯಕ್ರಮಗಳಿಗೆ ಯೋಜನಾ ಇಲಾಖೆಯ ಅಭಿಪ್ರಾಯವನ್ನು ನಿರೂಪಿಸುತ್ತಿದೆ.

- ಅ) ವಾಣಿಜ್ಯ ಮತ್ತು ಕೈಗಾರಿಕೆ
- ಆ) ಸಹಕಾರ
- ಇ) ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಮತ್ತು
- ಈ) ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ
- ಉ) ರೇಷ್ಮೆ ಇಲಾಖೆ
- ಊ) ಆರ್ಥಿಕ ಇಲಾಖೆ

ಮೇಲೆ ಹೇಳಿದ ಇಲಾಖೆಗಳಿಗೆ ಸಂಬಂಧಿಸಿದ ಅಭಿವೃದ್ಧಿ ನೀತಿ ಮತ್ತು ಯೋಜನಾ ಕಾರ್ಯಕ್ರಮಗಳ ಹಾಗೂ ಮುಖ್ಯ ಕಾರ್ಯಕ್ರಮಗಳ ಗುರಿಗಳನ್ನು ರೂಪುಗೊಳಿಸುವ ಕುರಿತು ನಡೆಸುವ ಪರಸ್ಪರ ಚರ್ಚಾ ಸಭೆಗಳಲ್ಲಿ ಈ ವಿಭಾಗವು ನೋಡಲ್ ಏಜೆನ್ಸಿಯಾಗಿ ಭಾಗವಹಿಸುತ್ತದೆ. ಸದರಿ ಇಲಾಖೆಗಳ ಗಣಕೀಕರಣದ ಸಮಿತಿಗಳಲ್ಲಿ ನೋಡಲ್ ಏಜೆನ್ಸಿಯಾಗಿ ಈ ವಿಭಾಗವು ಪ್ರತಿನಿಧಿಸುತ್ತದೆ.

ವಿಭಾಗವು ಪ್ರತಿವರ್ಷ ವಿಶೇಷ ಅಭಿವೃದ್ಧಿ ಯೋಜನೆಯಡಿ ಅನುದಾನ ಹಂಚಿಕೆ ಕಾರ್ಯವನ್ನು ನಿರ್ವಹಿಸುತ್ತದೆ.

ಪಿಎಫ್.ಆರ್ ವಿಭಾಗವು ವಿವಿಧ ಇಲಾಖೆಯ ಅಧಿಕಾರಿಗಳಿಗೆ ಯೋಜನೆ ತಯಾರಿಸುವ ಬಗ್ಗೆ ತರಬೇತಿಯನ್ನು ನೀಡಲಾಯಿತು.

ಪಿಎಫ್.ಆರ್ ವಿಭಾಗವು 12ನೇಪಂಚವಾರ್ಷಿಕ ವಲಯವಾರು ಯೋಜನೆ ಅನುದಾನ ಹಂಚಿಕೆಯನ್ನು ಪರಿಷ್ಕರಿಸಲಾಯಿತು ಹಾಗೂ ಅನುಮೊದನೆಗಾಗಿ ಯೋಜನಾ ಆಯೋಗ,ಹೊಸದೆಹಲಿಗೆ ಕಳುಹಿಸಲಾಯಿತು.

2013–14ನೇ ಸಾಲಿಗೆ ಸಂಬಂಧಿಸಿದ ಒಂದಾವರ್ತಿ ಹೆಚ್ಚುವರಿ ಕೇಂದ್ರಿಯ ಸಹಾಯದನ ಪಡೆಯುವ ಪ್ರಸ್ತಾವನೆಗಳನ್ನು ಕ್ರೋಢೀಕರಿಸಿ, ಈ ಪ್ರಸ್ತಾವನೆಗಳಿಗೆ ಯೋಜನಾ ಆಯೋಗದಿಂದ ಅನುಮೋದನೆ ಪಡೆಯುವ ಕೆಲಸವನ್ನು ಹಾಗೂ ಆರ್ಥಿಕ ಮಂತ್ರಾಲಯದಿಂದ ಅನುದಾನ(ಯೋಜನೆಯ ಅನುದಾನದ ಶೇ.30ರಷ್ಟು) ಬಿಡುಗಡೆಗೊಳಿಸುವ ಬಗ್ಗೆ ಈ ವಿಭಾಗವು ಕಾರ್ಯ ನಿರ್ವಹಿಸುತ್ತಿದೆ. 2013–14ನೇ ಸಾಲಿಗೆ ಒಂದಾವರ್ತಿ ಹೆಚ್ಚುವರಿ ಕೇಂದ್ರಿಯ ಸಹಾಯದನ ವಿವರಗಳನ್ನು ಕೋಷ್ಟಕ–1ರಲ್ಲಿ ಕೊಡಲಾಗಿದೆ.

**ಕೋಷ್ಟಕ–1**

**ಒಂದಾವರ್ತಿ ಹೆಚ್ಚುವರಿ ಕೇಂದ್ರಿಯ ಸಹಾಯಧನದ ಯೋಜನಾ ವಿವರಗಳು:2013–14**

(ಕೋಟಿ ರೂ.ಗಳಲ್ಲಿ)

| ಕ್ರ. ಸಂ. | ಯೋಜನೆಗಳು(ಪ್ರೋಜೆಕ್ಟ್ಸ) | ಇಲಾಖೆ | ಯೋಜನೆ ಅಂದಾಜು | ಒ.ಟಿ.ಎ.ಸಿ.ಎ ದಡಿಯಲ್ಲಿ ಮಂಜೂರಾದ ಅನುದಾನ |
|---|---|---|---|---|
| 1. | ತೋಟಗಾರಿಕಾ ವಿಶ್ವವಿದ್ಯಾಲಯ, ಬಾಗಲಕೋಟೆಯಲ್ಲಿನ ಮೂಲ ಸೌಕರ್ಯ ಅಭಿವೃದ್ಧಿ ಪಡಿಸುವ ಬಗ್ಗೆ | ತೋಟಗಾರಿಕೆ | 51.80 | 15.54 |
| 2. | ಟ್ರೀ ಪಾರ್ಕ ರಚನೆ | ಅರಣ್ಯ | 12.86 | 3.86 |
| | ಮಲೆ ಮಹಾದೇಶ್ವರ ಹಾಗೂ ಚಿಂಚೋಳಿ ವನ್ಯ ಜೀವಿಗಳ ಅಭಿವೃದ್ಧಿ | | 10.00 | 3.00 |
| 3. | ಹುಬ್ಬಳ್ಳಿಯಲ್ಲಿ, ಟ್ರಾನ್ಸಿಟ್ ಮೂಲ ಸೌಕರ್ಯ ಅಭಿವೃದ್ಧಿಪಡಿಸುವ ಬಗ್ಗೆ | ನಗರಾಭಿವೃದ್ಧಿ | 39.20 | 11.76 |
| | ಹುಬ್ಬಳ್ಳಿಯಲ್ಲಿನ ಉಣಕಲ್ ಕ್ರಾಸ್ ಬಳಿ ಬಸ್ ಮೇಲು ಸೇತುವೆ ನಿರ್ಮಾಣ | | 11.05 | 3.31 |
| 4. | ಕರ್ನಾಟಕ ಕಾರ್ಮಿಕ ಸಂಸ್ಥೆಯ ಮೂಲಭೂತಸೌಲಭ್ಯ ಅಭಿವೃದ್ಧಿ | ಕಾರ್ಮಿಕ | 20.00 | 6.00 |
| 5. | ಸರ್ಕಾರದ ಟೂಲ್ ರೂಮ್ ಮತ್ತು ತರಬೇತಿ ಕೇಂದ್ರ ಚಿಕ್ಕೋಡಿ, ಹಾಸನ್ ಹಾಗೂ ಹೊಸಪೇಟೆಗಳಲ್ಲಿ ತರಬೇತಿ ಸೌಲಭ್ಯಗಳನ್ನು ಮೇಲ್ದರ್ಜಗೇರಿಸುವುದು. | ವಾಣಿಜ್ಯ ಮತ್ತು ಕೈಗಾರಿಕೆ | 26.14 | 7.84 |
| **ಒಟ್ಟು** | | | **171.05** | **51.31** |

2013–14 ಮತ್ತು 2014–15ನೇ ಸಾಲಿನ ವಾರ್ಷಿಕ ಯೋಜನೆಗಳ ಅಂತರ್– ವಲಯವಾರು ಯೋಜನಾ ಮೊತ್ತದ ವಿವರಗಳನ್ನು ಮತ್ತು (ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ಯೋಜನೆಗಳ) ಕೇಂದ್ರ ಸರ್ಕಾರದ ಪಾಲಿನ ಮೊತ್ತದ ವಿವರಗಳನ್ನು ಕ್ರಮವಾಗಿ ಕೋಷ್ಟಕ 2 ಮತ್ತು 3 ರಲ್ಲಿ ಕೊಡಲಾಗಿದೆ.

**ಕೋಷ್ಟಕ–2**

**2013–14 ಮತ್ತು 2014–15ರ ವಾರ್ಷಿಕ ಯೋಜನೆಗಳಲ್ಲಿ ವಲಯವಾರು ಯೋಜನಾ ಮೊತ್ತದ ವಿವರಗಳು**

(ಕೋಟಿ ರೂ.ಗಳಲ್ಲಿ)

| ಕ್ರ.ಸಂ | ವಲಯ | 2013-14 (D.CA) | 2014-15 (D.CA) |
|---|---|---|---|
| 1. | ಕೃಷಿ ಮತ್ತು ಸಂಬಂಧಪಟ್ಟ ಸೇವೆಗಳು (ಸಹಕಾರವೂ ಸೇರಿ) | 6055.25 | 6343.23 |
| 2. | ಗ್ರಾಮೀಣಾಭಿವೃದ್ಧಿ | 1827.83 | 4515.44 |
| 3. | ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 8856.03 | 10454.14 |
| 4. | ಇಂಧನ | 5244.46 | 4977.57 |
| 5. | ಉದ್ಯಮ ಮತ್ತು ಖನಿಜಗಳು | 764.21 | 832.57 |
| 6. | ಸಾರಿಗೆ | 4881.20 | 5422.23 |
| 7. | ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | 168.52 | 210.19 |
| 8. | ಸಾಮಾನ್ಯ ಆರ್ಥಿಕ ಸೇವೆಗಳು | 1122.85 | 1369.02 |
| 9. | ಸಾಮಾಜಿಕ ಸೇವೆಗಳು | 18129.12 | 30335.92 |
| 10. | ವಿಶೇಷ ಪ್ರದೇಶ ಕಾರ್ಯಕ್ರಮಗಳು | 451.87 | 342.89 |
| 11. | ಇತರೆ ಸೇವೆಗಳು | 1183.66 | 1629.27 |
| **ಒಟ್ಟು ಮೊತ್ತ** | | **48685.00** | **65600.00** |

**ಮೂಲ:** 2014–15ನೇ ಸಾಲಿಗೆ ಯೋಜನಾ ಕಾರ್ಯಕ್ರಮಗಳಿಗೆ ಒದಗಿಸಿದ ಹಣದ ವಿವರ

D.CA.: ಆಯವ್ಯಯ ಅಂದಾಜು

## ಕೋಷ್ಟಕ–3

## 2013–14 ಮತ್ತು 2014–15ನೇ ಸಾಲಿನ ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ವಲಯ ಯೋಜನೆಗಳ ವಲಯವಾರು ಹಂಚಿಕೆ (ಕೇಂದ್ರ ಸರ್ಕಾರದ ಪಾಲು ಮಾತ್ರ)

(ಕೋಟಿ ರೂ.ಗಳಲ್ಲಿ)

| ಕ್ರ. ಸಂ. | ವಲಯ | ಯೋಜನಾ ಮೊಬಲಗು 2013–14(D.CA) | ಯೋಜನಾ ಮೊಬಲಗು 2014–15 (D.CA) |
|---|---|---|---|
| 1. | ಕೃಷಿ ಮತ್ತು ಸಂಬಂಧಪಟ್ಟ ಸೇವೆಗಳು (ಸಹಕಾರವೂ ಸೇರಿ) | 919.71 | 105.55 |
| 2. | ಗ್ರಾಮೀಣಾಭಿವೃದ್ಧಿ | 1534.74 | |
| 3. | ನೀರಾವರಿ ಮತ್ತು ಪ್ರವಾಹ ನಿಯಂತ್ರಣ | 130.98 | |
| 4. | ಶಕ್ತಿ | 11.83 | 8.54 |
| 5. | ಉದ್ಯಮ ಮತ್ತು ಖನಿಜಗಳು | 55.45 | 0.50 |
| 6. | ಸಾರಿಗೆ | 308.00 | 1.40 |
| 7. | ವಿಜ್ಞಾನ, ತಂತ್ರಜ್ಞಾನ ಮತ್ತು ಪರಿಸರ | 0.70 | |
| 8. | ಸಾಮಾನ್ಯ ಆರ್ಥಿಕ ಸೇವೆಗಳು | 68.45 | 8.77 |
| 9. | ಸಾಮಾಜಿಕ ಸೇವೆಗಳು | 7106.54 | 1315.23 |
| 10. | ವಿಶೇಷ ಪ್ರದೇಶ ಕಾರ್ಯಕ್ರಮಗಳು | 1.64 | 36.45 |
| **ಒಟ್ಟು ಮೊತ್ತ** | | **10138.04** | **1476.44** |

**ಮೂಲ:** ಯೋಜನಾ ಕಾರ್ಯಕ್ರಮಗಳಿಗೆ ಒದಗಿಸಿದ ವಿವರ, 2014–15

**D.CA** : ಆಯವ್ಯಯ ಅಂದಾಜು

ಪಿಎಫ್.ಆರ್ ವಿಭಾಗವು, ಯೋಜನೆ,ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಗೆ ಆರ್.ಎಫ್.ಡಿ ತಯಾರಿಸುವಲ್ಲಿ ನೋಡಲ್ ವಿಭಾಗವಾಗಿ ಕಾರ್ಯನಿರ್ವಹಿಸುತ್ತದೆ.

### ಪಿ.ಎಫ್.ಆರ್ ವಿಭಾಗದ ಸಿಬ್ಬಂದಿಗಳ ವಿವರ:31–03.2013

| ವರ್ಗ | ಒಟ್ಟು ಮಂಜೂರಾದ ಹುದ್ದೆಗಳು | ಭರ್ತಿ ಮಾಡಲಾದ ಒಟ್ಟು ಹುದ್ದೆಗಳು | | | ಪರಿಶಿಷ್ಟ ಜಾತಿ | | | ಪರಿಶಿಷ್ಟ ಪಂಗಡ | | | ಖಾಲಿ ಹುದ್ದೆಗಳು | ನಿವೃತ್ತಿ /ಬಡ್ತಿಯಿಂದ ತೆರವಾದ ಸ್ಥಳ |
|---|---|---|---|---|---|---|---|---|---|---|---|---|
| | | ಗಂ | ಹೆಂ | ಒಟ್ಟು | ಗಂ | ಹೆಂ | ಒಟ್ಟು | ಗಂ | ಹೆಂ | ಒಟ್ಟು | | |
| ಎ | 6 | 4 | 1 | 5 | | | | | | | 1 | - |
| ಬಿ | 3 | 2 | - | 2 | - | - | - | - | - | - | 1 | - |
| ಸಿ | 9 | 3 | 3 | 6 | 1 | - | 1 | - | - | - | 3 | - |
| ಡಿ | 5 | 1 | 1 | 2 | | 1 | 1 | - | - | - | 3 | - |
| ಒಟ್ಟು | **23** | **10** | **5** | **15** | **1** | **1** | **2** | **-** | **-** | **-** | **8** | **-** |

## 5. ಜಿಲ್ಲಾ ಯೋಜನಾ ವಿಭಾಗ

**ಜಿಲ್ಲಾ ಯೋಜನಾ ವಿಭಾಗದ ಚಟುವಟಿಕೆಗಳು ಈಕೆಳಕಂಡಂತಿರುತ್ತವೆ;**

1. ಜಿಲ್ಲಾ ಪಂಚಾಯತಿಗಳ ಯೋಜನಾ ಘಟಕಗಳಿಗೆ ಜಿಲ್ಲಾ ವಲಯ ಯೋಜನೆಗಳ ತಯಾರಿಕೆಯಲ್ಲಿ ಮಾರ್ಗದರ್ಶನ ನೀಡುವುದು;
2. ಜಿಲ್ಲಾ ವಲಯದ ಅನುದಾನವನ್ನು ಜಿಲ್ಲಾ ಪಂಚಾಯತಿಗಳಿಗೆ ಹಂಚಿಕೆ ಮಾಡುವುದು;
3. ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳ ಯೋಜನಾ ಕಾರ್ಯಕ್ರಮಗಳಿಗೆ ಅನುದಾನವನ್ನು ನಿಗದಿಪಡಿಸುವುದು ಹಾಗೂ ರಾಜ್ಯ ಮಟ್ಟದಲ್ಲಿ ಸದರಿ ಯೋಜನೆಗಳ ಕ್ರೋಢೀಕರಣ;
4. ಜಿಲ್ಲಾವಾರು, ವಲಯವಾರು ಮತ್ತು ಕಾರ್ಯಕ್ರಮವಾರು ಅನುದಾನವನ್ನು ಸೂಚಿಸುವ ಜಿಲ್ಲಾ ಪಂಚಾಯತಿ ಆಯವ್ಯಯ ಲಿಂಕ್ ಡಾಕ್ಯೂಮೆಂಟ್ ತಯಾರಿಸುವುದು;
5. ವಸತಿ, ನಗರಾಭಿವೃದ್ಧಿ, ಗಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಹಾಗೂ ಒಳಾಡಳಿತ ಇಲಾಖೆಗಳಿಗೆ ಸಂಬಂಧಿಸಿದ ಪಂಚವಾರ್ಷಿಕ ಮತ್ತು ವಾರ್ಷಿಕ ಯೋಜನೆಗಳನ್ನು ರೂಪಿಸುವಲ್ಲಿ ಸಮನ್ವಯ ಕಾರ್ಯವನ್ನು ನಿರ್ವಹಿಸುವುದು;
6. ವಸತಿ, ನಗರಾಭಿವೃದ್ಧಿ, ಗಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಹಾಗೂ ಒಳಾಡಳಿತ ಇಲಾಖೆಗಳಿಂದ ಅನುಷ್ಠಾನಿತ ಯೋಜನಾ ಕಾರ್ಯಕ್ರಮಗಳ project appraisal ಗಳನ್ನು ತಯಾರಿಸುವುದು ಹಾಗೂ ಯೋಜನಾ ಇಲಾಖೆಯ ಅಭಿಪ್ರಾಯ ನೀಡುವುದು;
7. ಆಯಾ ವರ್ಷದ ಆರ್ಥಿಕ ಸಮೀಕ್ಷೆಯ ಸಲುವಾಗಿ ವಸತಿ, ಗ್ರಾಮೀಣ ನೀರು ಪೂರೈಕೆ ಮತ್ತು ನೈರ್ಮಲ್ಯ, ಗ್ರಾಮೀಣ ಉದ್ಯೋಗ, ಗ್ರಾಮೀಣ ಸಂಪರ್ಕ ಹಾಗೂ ವಿಕೇಂದ್ರಿಕೃತ ಆಡಳಿತ ಮುಂತಾದ ವಿಷಯಗಳ ಅಧ್ಯಾಯಗಳನ್ನು ತಯಾರಿಸುವುದು;
8. ವಿಭಾಗಕ್ಕೆ ಸಂಬಂಧಿಸಿದ ರಾಜ್ಯ ಮಟ್ಟದ ಸಮನ್ವಯ/ಅಧಿಕಾರಯುಕ್ತ ಸಮಿತಿಗಳ ಸಭೆಗಳಲ್ಲಿ ಭಾಗವಹಿಸಿ ಕಾರ್ಯಕ್ರಮಗಳ ಅನುಷ್ಠಾನ ಕುರಿತು ಅಭಿಪ್ರಾಯ ನೀಡುವುದು.

**ಪಂಚಾಯತಿ ರಾಜ್ ಸಂಸ್ಥೆಗಳ ವಾರ್ಷಿಕ ಯೋಜನೆಗಳನ್ನು ರೂಪಿಸುವಿಕೆ:**

ಪಂಚಾಯತಿ ರಾಜ್ ಸಂಸ್ಥೆಗಳ ವಾರ್ಷಿಕ ಯೋಜನೆಗಳ ರೂಪಿಸುವ ಪ್ರಕ್ರಿಯೆಯನ್ನು ರಾಷ್ಟ್ರೀಯ ಸೂಚನಾ ಸಂಸ್ಥೆ, ಕರ್ನಾಟಕ ರಾಜ್ಯ ಘಟಕ ಇವರು ವೃದ್ಧಿಪಡಿಸಿರುವ ಅಂತರ್ಜಾಲ ಆಧಾರಿತ ಇ–ಯೋಜನಾ ತಂತ್ರಾಂಶದ ಮೂಲಕ ಕೈಗೊಳ್ಳಲಾಗುತ್ತಿದೆ. ಪಂಚಾಯತಿ ರಾಜ್ ಸಂಸ್ಥೆಗಳ ಈ ಕೆಳಕಾಣಿಸಿದ disaggregated ಮಾಹಿತಿಯನ್ನು ಸಂಗ್ರಹಿಸಲು ಇ–ಯೋಜನಾ ತಂತ್ರಾಂಶವನ್ನು ಕ್ರಮಬದ್ಧಪಡಿಸಲಾಯಿತು.

1. ಭೌತಿಕ ಗುರಿ ಮತ್ತು ಸಾಧನೆಗಳು,
2. ವಲಯ/ಪಂಚಾಯತಿ ರಾಜ್ ಸಂಸ್ಥೆವಾರು ಅನುದಾನಗಳು,
3. ಹಿಂದಿನ ಎರಡು ವರ್ಷಗಳ ವಿವರಗಳು ಯೋಜನಾವಾರು ಆಯವ್ಯಯ ಅನುದಾನ ಮತ್ತು ವೆಚ್ಚದ ವಿವರಗಳು ಹಾಗೂ 2014–15 ನೇ ಸಾಲಿಗೆ ಪ್ರಸ್ತಾಪಿತ ಅನುದಾನದ ವಿವರಗಳನ್ನೊಳಗೊಂಡ ಯೋಜನಾವಾರು ಅನುದಾನದ,

4. ಯೋಜನಾ ಕಾರ್ಯಕ್ರಮಗಳಿಗೆ ಅಗತ್ಯವಿರುವ ಹೆಚ್ಚುವರಿ ಅನುದಾನದ ಯೋಜನಾವಾರು ವಿವರ,

5. ಇಲಾಖಾವಾರು ಸಿಬ್ಬಂದಿ ಸ್ಥಿತಿ ಹಾಗು ವೇತನದ ಸಲುವಾಗಿ ಅಗತ್ಯವಿರುವ ಅನುದಾನ,

6. ವಿವಿಧ ವಲಯಗಳಡಿಯಲ್ಲಿನ ಸಹಾಯನುದಾನ ಪಡೆಯುವ ಸಂಸ್ಥೆಗಳ ವಿವರ,

7. ಮುಂದುವರೆದ ಕಟ್ಟಡ ಕಾಮಗಾರಿಗಳು, ಹೊಸ ಕಟ್ಟಡಗಳ ನಿರ್ಮಾಣ, ಹಾಲಿ ಇರುವ ಕಟ್ಟಡಗಳ ನಿರ್ವಹಣೆ ಮುಂತಾದ ಮೂರು ಅಂಗಗಳನ್ನು ಒಳಗೊಂಡ ಕಾರ್ಯಕ್ರಮಗಳ ವಿವರ,

8. ಗ್ರಾಮೀಣ ನೀರು ಪೂರೈಕೆ – ಕೊಳವೆ ಬಾವಿಗಳ ಹಾಗೂ ಇತರೆ ಯೋಜನೆಗಳಡಿಯಲ್ಲಿ ಕೈಗೊಂಡ ನಿರ್ವಹಣಾ ಕಾಮಗಾರಿಗಳು,

9. ಹಣಕಾಸು ಆಯೋಗದ ಅನುದಾನದಿಂದ ಕೈಗೊಂಡ ಕಾಮಗಾರಿಗಳು,

10. ಮಹಿಳಾ ಅಭಿವೃದ್ಧಿ ಯೋಜನೆ – ಮಹಿಳೆಯರ ಅಭಿವೃದ್ಧಿಗಾಗಿ ಅನುಷ್ಠಾನಿಸಬಹುದಾದ ಸಂಭವನೀಯ ಯೋಜನೆಗಳು,

11. ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ,

12. ವಿಶೇಷಾಭಿವೃದ್ಧಿ ಯೋಜನೆ,

13. ನಗರ ಸ್ಥಳೀಯ ಸಂಸ್ಥೆಗಳ ಯೋಜನೆಗಳು – ಸಂವಿಧಾನದ 12ನೇ ಅನುಸೂಚಿಯಲ್ಲಿ ಪಟ್ಟಿಮಾಡಲಾದ 18 ಚಟುವಟಿಕೆಗಳಡಿ ಕಾರ್ಯಕ್ರಮ/ಯೋಜನೆಗಳು.

ಯೋಜನಾ ಪ್ರಕ್ರಿಯೆಯ ಸಲುವಾಗಿ ಅಗತ್ಯವಿರುವ ಡಾಟಾಬೇಸ್ ಎಲ್ಲಾ ಜಿಲ್ಲಾ ಪಂಚಾಯಿತಿಗಳಿಗೆ ಲಭ್ಯವಾಗುತ್ತದೆ.

ಪ್ರತಿ ಜಿಲ್ಲಾ ಪಂಚಾಯಿತಿಯ ಸಮಾಲೋಚನಾ ಸಭೆಗಳ ಪೂರ್ವದಲ್ಲಿ Internal Appraisal ಮೂಲಕ ಚರ್ಚಿಸಲಾಯಿತು. Internal Appraisal ಪ್ರಕ್ರಿಯೆಯನ್ನು ಆಧಾರಿಸಿ ಬದಲಾವಣೆಗಳನ್ನು ಇ–ಯೋಜನಾ ವ್ಯವಸ್ಥೆಯ ಮೂಲಕ ಅಂತಿಮ ದಸ್ತಾವೇಜಿನಲ್ಲಿ ಸೇರ್ಪಡಿಸಲಾಯಿತು.

**ಒಟ್ಟು ಯೋಜನಾ ಗಾತ್ರದ ಪೈಕಿ ಜಿಲ್ಲಾ ವಲಯ ಯೋಜನಾ ಗಾತ್ರದ ಅನುಪಾತವನ್ನು ಕೆಳಕಾಣಿಸಿದಂತೆ ಕೋಷ್ಟೀಕರಿಸಿದೆ.**

| ವಲಯ | 2013–14 | | | | 2014–15 | | | |
|---|---|---|---|---|---|---|---|---|
| | ರಾಜ್ಯ | ಕೇಂದ್ರ | ಒಟ್ಟು | ಪಂಚಾಯತಿ ರಾಜ್ ಸಂಸ್ಥೆಗಳ ಯೋಜನಾ ಗಾತ್ರದ ಅನುಪಾತ (%) | ರಾಜ್ಯ | ಕೇಂದ್ರ | ಒಟ್ಟು | ಪಂಚಾಯತಿ ರಾಜ್ ಸಂಸ್ಥೆಗಳ ಯೋಜನಾ ಗಾತ್ರದ ಅನುಪಾತ (%) |
| ಒಟ್ಟು ರಾಜ್ಯ ಯೋಜನೆಗಳು | 46450 | 8733 | 55183 | | 65600 | 1476 | 67076 | |
| ಪಂಚಾಯತಿ ರಾಜ್ ವಲಯ | | | | | | | | |

| ವಲಯ | 2013–14 | | | | 2014–15 | | | |
|---|---|---|---|---|---|---|---|---|
| | ರಾಜ್ಯ | ಕೇಂದ್ರ | ಒಟ್ಟು | ಪಂಚಾಯತಿ ರಾಜ್ ಸಂಸ್ಥೆಗಳ ಯೋಜನಾ ಗಾತ್ರದ ಅನುಪಾತ (%) | ರಾಜ್ಯ | ಕೇಂದ್ರ | ಒಟ್ಟು | ಪಂಚಾಯತಿ ರಾಜ್ ಸಂಸ್ಥೆಗಳ ಯೋಜನಾ ಗಾತ್ರದ ಅನುಪಾತ (%) |
| ಜಿಲ್ಲಾ ಪಂಚಾಯತಿ | 2657 | 2502 | 5159 | 9.4 | 4677 | 459 | 5136 | 7.6 |
| ತಾಲ್ಲೂಕು ಪಂಚಾಯತಿ | 1119 | 1321 | 2440 | 4.4 | 3053 | 309 | 3362 | 5.0 |
| ಗ್ರಾಮ ಪಂಚಾಯತಿ | 874 | 257 | 1131 | 2.0 | 1946 | 36 | 1982 | 2.9 |
| ಪಂ. ರಾ. ಸಂಸ್ಥೆಗಳ ಒಟ್ಟು ಅನುದಾನ | 4650 | 4080 | 8730 | 15.8 | 9676 | 804 | 10480 | 15.6 |

ಒಟ್ಟು ಯೋಜನಾ ಗಾತ್ರದ ಪೈಕಿ ಜಿಲ್ಲಾ ವಲಯ ಯೋಜನಾ ಗಾತ್ರದ ಅನುಪಾತ, 2013–14 ಮತ್ತು 2014–15 ವರ್ಷಗಳಲ್ಲಿ ಜಿಲ್ಲಾ ಯೋಜನಾ ಅನುಪಾತದಲ್ಲಿ ಜಿಲ್ಲಾವಾರು ಮತ್ತು ವಲಯವಾರು ಅನುದಾನವನ್ನು ಪ್ರತಿಬಿಂಬಿಸುವ ಟೈಮ್ ಸೀರೀಸ್ (Time Series) ಮಾಹಿತಿಯನ್ನು ಅನುಬಂಧ III, IV ಮತ್ತು V ರಲ್ಲಿ ನೀಡಿದೆ,

**ನೋಡಲ್ ಇಲಾಖೆಗಳ ವಾರ್ಷಿಕ ಯೋಜನೆಗಳು:**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್, ವಸತಿ, ನಗರಾಭಿವೃದ್ಧಿ ಮತ್ತು ಒಳಾಡಳಿತ ಇಲಾಖೆಗಳ 2014–15 ನೇ ಸಾಲಿನ ವಾರ್ಷಿಕ ಯೋಜನೆಗಳನ್ನು ರೂಪಿಸಲು, ಈ ಇಲಾಖೆಗಳಿಗೆ ಸಹಾಯ ನೀಡುವುದರ ಮೂಲಕ ಸಹಕರಿಸಲಾಗಿದೆ.

**ಆರ್ಥಿಕ ಸಮೀಕ್ಷೆ:**

ವಸತಿ, ಗ್ರಾಮೀಣ ನೀರು ಪೂರೈಕೆ ಮತ್ತು ನೈರ್ಮಲ್ಯ, ಗ್ರಾಮೀಣ ಉದ್ಯೋಗ, ಗ್ರಾಮೀಣ ಸಂಪರ್ಕ ಮತ್ತು ವಿಕೇಂದ್ರೀಕೃತ ಆಡಳಿತ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಆರ್ಥಿಕ ಸಮೀಕ್ಷೆಯ ಅಧ್ಯಾಯಗಳನ್ನು ತಯಾರಿಸಲು ಅನುವಾಗುವಂತೆ ಸಮನ್ವಯ ಕಾರ್ಯವನ್ನು ಸಂಬಂಧಪಟ್ಟ ಇಲಾಖೆಗಳೊಂದಿಗೆ ಕೈಗೊಳ್ಳಲಾಲಾಗುವುದು.

**ಯೋಜನಾ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅಭಿಪ್ರಾಯವ ಕಾರ್ಯ:**

ಯೋಜನಾ ಕಾರ್ಯಕ್ರಮಗಳ ಅನುಷ್ಠಾನವನ್ನು ನಿರ್ವಹಿಸುತ್ತಿರುವ ನೋಡಲ್ ಇಲಾಖೆಗಳ ವಿವಿಧ ಪ್ರಾಜೆಕ್ಟ್‌ಗಳ/ಕಾರ್ಯಕ್ರಮಗಳ ಅನುಷ್ಠಾನ ಕುರಿತು ಪರಿಶೀಲಿಸಿ ಯೋಜನಾ ಇಲಾಖೆಯ ಅಭಿಪ್ರಾಯವನ್ನು ನೀಡಲಾಯಿತು. ಅಲ್ಲದೆ, ಸಂಬಂಧಪಟ್ಟ ಉನ್ನತಾಧಿಕಾರ ಸಮಿತಿ, ಚಾಲನಾ ಸಮಿತಿ, ಉಸ್ತುವಾರಿ ಸಮಿತಿ ಮುಂತಾದ ಸಮಿತಿಗಳ ಸಭೆಗಳಲ್ಲಿ ವಿಭಾಗವು ಪ್ರತಿನಿಧಿಸಿತು.

**ಫಲಿತಾಂಶ ಚೌಕಟ್ಟು ದಾಖಲೆ:**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಫಲಿತಾಂಶ ಚೌಕಟ್ಟು ದಾಖಲೆಯನ್ನು ತಯಾರಿಸುವ ಸಂಬಂಧವಾಗಿ, ರಚಿಸಲ್ಪಟ್ಟ ತದರ್ಥ ಕಾರ್ಯಪಡೆಯ ಪರಿಣತ ಗುಂಪಿನೊಂದಿಗೆ ಸಮನ್ವಯ ಕಾರ್ಯದ ನಿರ್ವಹಣೆಯನ್ನು ವಿಭಾಗಕ್ಕೆ ವಹಿಸಲಾಗಿದೆ. ಯೋಜನೆಗಳ ಫಲಶೃತಿಯನ್ನು ನಿರ್ಧರಿಸಲು ಅಗತ್ಯವಿರುವ ಒಪ್ಪಲಾದ ಉದ್ದೇಶಗಳು, ನೀತಿ ನಿಯಮಗಳು, ಕಾರ್ಯಕ್ರಮ ಹಾಗೂ

ಪ್ರಾಜೆಕ್ಟ್‌ಗಳು, ಸಫಲತೆ ಸೂಚಕಗಳು ಫಲಿತಾಂಶ ಚೌಕಟ್ಟು ದಾಖಲೆಯನ್ನು ವರ್ಣಿಸುತ್ತದೆ. ಪ್ರತಿ ವರ್ಷ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಇಲಾಖೆಯ ಫಲಿತಾಂಶ ಚೌಕಟ್ಟು ದಾಖಲೆಯನ್ನು ಅಂತಿಮಕರಿಸಿ ಸದರಿ ದಾಖಲೆಯ ಮಧ್ಯಂತರ ವಿಶ್ಲೇಷಣೆಯನ್ನು ಕೈಗೊಳ್ಳಲಾಯಿತು. ಈ ಸಲುವಾಗಿ ಪರಿಣತ ತಂಡದ ಸಭೆಗಳನ್ನು ನಡೆಸಲಾಯಿತು.

**ವಿಭಾಗಕ್ಕೆ ಸಂಬಂಧಹೊಂದಿದ ರಾಜ್ಯಮಟ್ಟದ ಸಮನ್ವಯ/ಉನ್ನತಾಧಿಕಾರ ಸಮಿತಿಗಳು**

ವಿಭಾಗವು ಸಮನ್ವಯಿಸುವ ರಾಜ್ಯ ಮಟ್ಟದ ಸಮನ್ವಯ/ ಉನ್ನತಾಧಿಕಾರ ಸಮಿತಿಗಳು ಈ ಕೆಳಕಂಡಂತಿರುತ್ತವೆ.

1. ಗ್ರಾಮೀಣ ನೀರು ಪೂರೈಕೆಯ ರಾಜ್ಯಮಟ್ಟದ ಉನ್ನತಾಧಿಕಾರ ಸಮಿತಿ
2. ಗ್ರಾಮೀಣ ನೀರು ಪೂರೈಕೆಯ ಯೋಜನೆಗಳ ಮಂಜೂರಾತಿಗೆ ರಾಜ್ಯಮಟ್ಟದ ಸಮಿತಿ
3. ಕರ್ನಾಟಕ ನೀರು ಪೂರೈಕೆ ಮತ್ತು ನೈರ್ಮಲ್ಯ ಏಜೆನ್ಸಿಯ ಗೌರ್ನಿಂಗ್ ಕೌನ್ಸಿಲ್
4. ಹಿಂದುಳಿದ ಪ್ರದೇಶಗಳ ಅನುದಾನ ನಿಧಿ ಕಾರ್ಯಕ್ರಮದ ಅನುಷ್ಠಾನದ ಉನ್ನತಮಟ್ಟದ ಸಮಿತಿ
5. Application of Innovative Technology ಅನುಷ್ಠಾನದ ರಾಜ್ಯ ಮಟ್ಟದ ಸಮಿತಿ
6. ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಗೌರ್ನಿಂಗ್ ಕೌನ್ಸಿಲ್
7. ಉತ್ತರ ಕರ್ನಾಟಕದ ನಗರ ಪ್ರದೇಶಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯ ಉನ್ನತಾಧಿಕಾರ ಸಮಿತಿ
8. ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಸುಧಾರಣಾ ಪ್ರಾಜೆಕ್ಟ್‌ನ ಉನ್ನತಾಧಿಕಾರ ಸಮಿತಿ
9. ಕರ್ನಾಟಕ ನಗರಾಭಿವೃದ್ಧಿ ಮತ್ತು ಕರಾವಳಿ ಪರಿಸರ ನಿರ್ವಹಣಾ ಪ್ರಾಜೆಕ್ಟ್‌ನ ಉನ್ನತಾಧಿಕಾರ ಸಮಿತಿ
10. ನೀರು ಪೂರೈಕೆ ಮತ್ತು ಒಳಚರಂಡಿ ಯೋಜನೆಗಳ ಉನ್ನತಾಧಿಕಾರ ಸಮಿತಿ
11. ಕರ್ನಾಟಕ ಮುನಿಸಿಪಲ್ ಸುಧಾರಣೆ ಪ್ರಾಜೆಕ್ಟ್‌ನ ಉನ್ನತಾಧಿಕಾರ ಸಮಿತಿ
12. ಸಮಗ್ರ ವಸತಿ ಮತ್ತು ಕೊಳಗೇರಿ ಅಭಿವೃದ್ಧಿ ಕಾರ್ಯಕ್ರಮದ ಉನ್ನತಾಧಿಕಾರ ಸಮಿತಿ
13. ಅಪರಾಧ ಪತ್ತೆ ಹಚ್ಚುವ ಉನ್ನತಾಧಿಕಾರ ಸಮಿತಿ
14. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಸತಿ, ನಗರಾಭಿವೃದ್ಧಿ ಮತ್ತು ಒಳಾಡಳಿತ ಇಲಾಖೆಗಳ ತಾಂತ್ರಿಕ ಸಲಹಾ ಸಮಿತಿಗಳು

# ಅನುಬಂಧ – III

## ಒಟ್ಟು ಯೋಜನಾ ಮೊತ್ತದ ಪೈಕಿ ಜಿಲ್ಲಾ ವಲಯ ಯೋಜನೆಗಳ ಅನುಪಾತ

(ರೂ.ಕೋಟಿಗಳಲ್ಲಿ)

| ವರ್ಷ (D.CA) | ವಿವರ | ರಾಜ್ಯ ಯೋಜನೆಗಳ ಒಟ್ಟು ಯೋಜನಾ ಗಾತ್ರ | ಜಿಲ್ಲಾ ವಲಯ | |
|---|---|---|---|---|
| | | | ಒಟ್ಟು ಯೋಜನಾ ಗಾತ್ರ | ಯೋಜನಾ ಗಾತ್ರ ಪ್ರತಿಶತ |
| 2007-08 | **ರಾಜ್ಯ**<br>**ಕೇಂದ್ರ**<br>ಒಟ್ಟು | 18515<br>2749<br>**21264** | 2241<br>1330<br>**3571** | 12.1<br>48.4<br>**16.8** |
| 2008-09 | **ರಾಜ್ಯ**<br>**ಕೇಂದ್ರ**<br>ಒಟ್ಟು | 25953<br>2246<br>**28199** | 2632<br>1785<br>**4417** | 10.1<br>79.5<br>**15.7** |
| 2009-10 | **ರಾಜ್ಯ**<br>ಕೇಂದ್ರ | 29500<br>2931*<br>**32431** | 2880<br>1857<br>**4737** | 9.8<br>63.4<br>**14.6** |
| 2010-11 | **ರಾಜ್ಯ**<br>**ಕೇಂದ್ರ**<br>ಒಟ್ಟು | 31000<br>2764*<br>**33764** | 3010<br>1860<br>**4870** | 9.7<br>67.3<br>**14.4** |
| 2011-12 | **ರಾಜ್ಯ**<br>**ಕೇಂದ್ರ**<br>ಒಟ್ಟು | 38070<br>2802*<br>**40872** | 3726<br>2316<br>**6042** | 9.8<br>82.7<br>**14.8** |
| 2012-13 | **ರಾಜ್ಯ**<br>**ಕೇಂದ್ರ**<br>ಒಟ್ಟು | 42030<br>7751<br>**49781** | 4055<br>3754<br>**7809** | 9.6<br>48.4<br>**15.7** |
| 2013-14 | **ರಾಜ್ಯ**<br>**ಕೇಂದ್ರ**<br>ಒಟ್ಟು | 46450<br>8733<br>**55183** | 4650<br>4080<br>**8730** | 10.0<br>46.7<br>**15.8** |
| 2014-15 | **ರಾಜ್ಯ**<br>**ಕೇಂದ್ರ**<br>ಒಟ್ಟು | 65600<br>1476<br>**67076** | 9676<br>804<br>**10480** | 14.75<br>54.47<br>**15.62** |

* ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಬರವಸೆ, ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ, ಡಿಅರ್‌ಡಿಏ (ಆಡಳಿತ), ಡಿಪಿಏಪಿ, ಮತ್ತು ಡಿಡಿಪಿ ಯೋಜನೆಗಳಡಿ ಒದಗಿಸಿದ ಅನುದಾನವನ್ನು ವಾರ್ಷಿಕ ಹಣಕಾಸಿನ ವಿವರಗಳಲ್ಲಿ ಒಳಗೊಂಡಿರುವುದಿಲ್ಲ.

** D CA – ಆಯವ್ಯಯ ಅಂದಾಜು

## ಅನುಬಂಧ – IV

### ಜಿಲ್ಲಾವಾರು ಯೋಜನಾ ಅನುದಾನದ ಹಂಚಿಕೆ

(ಕೋಟಿ ರೂಗಳು)

| ಕ್ರ ಸಂ | ಜಿಲ್ಲೆ | 2013–14 | | | 2014–15 | | |
|---|---|---|---|---|---|---|---|
| | | ರಾಜ್ಯ | ಕೇಂದ್ರ | ಒಟ್ಟು | ರಾಜ್ಯ | ಕೇಂದ್ರ | ಒಟ್ಟು |
| 1 | ಬೆಂಗಳೂರು (ಗ್ರಾ) | 93.25 | 128.22 | 221.47 | 266.13 | 32.65 | 298.78 |
| 2 | ಬೆಂಗಳೂರು(ನ) | 48.85 | 46.68 | 95.53 | 111.95 | 16.99 | 128.94 |
| 3 | ಚಿತ್ರದುರ್ಗ | 93.33 | 82.89 | 176.22 | 218.86 | 21.27 | 240.13 |
| 4 | ಕೋಲಾರ | 72.33 | 64.86 | 137.19 | 172.00 | 15.23 | 187.23 |
| 5 | ಶಿವಮೊಗ್ಗ | 113.43 | 100.23 | 213.66 | 226.44 | 25.41 | 251.85 |
| 6 | ತುಮಕೂರು | 141.39 | 130.68 | 272.07 | 312.16 | 39.84 | 352.00 |
| 7 | ಮೈಸೂರು | 117.50 | 107.92 | 225.42 | 267.09 | 34.89 | 301.98 |
| 8 | ಚಿಕ್ಕಮಗಳೂರು | 88.16 | 51.45 | 139.61 | 167.95 | 22.07 | 190.03 |
| 9 | ದ.ಕನ್ನಡ | 77.77 | 72.33 | 150.10 | 175.85 | 28.40 | 204.25 |
| 10 | ಹಾಸನ | 107.79 | 74.35 | 182.14 | 208.05 | 30.01 | 238.06 |
| 11 | ಕೊಡಗು | 38.51 | 28.06 | 66.57 | 71.38 | 12.09 | 83.47 |
| 12 | ಮಂಡ್ಯ | 102.58 | 82.76 | 185.34 | 203.11 | 27.83 | 230.94 |
| 13 | ಬೆಳಗಾಂ | 225.41 | 191.45 | 416.86 | 531.27 | 77.96 | 609.23 |
| 14 | ಬಿಜಾಪುರ | 109.25 | 94.23 | 203.48 | 299.60 | 32.53 | 332.13 |
| 15 | ಧಾರವಾಡ | 69.55 | 71.03 | 140.58 | 178.43 | 29.51 | 207.93 |
| 16 | ಉ.ಕನ್ನಡ | 103.21 | 78.69 | 181.90 | 237.49 | 31.93 | 269.42 |
| 17 | ಗುಲ್ಬರ್ಗ | 154.82 | 102.88 | 257.70 | 363.41 | 25.22 | 388.63 |
| 18 | ಬಳ್ಳಾರಿ | 114.94 | 89.87 | 204.81 | 272.62 | 23.36 | 295.98 |
| 19 | ಬೀದರ್ | 85.03 | 55.09 | 140.12 | 203.14 | 17.88 | 221.02 |
| 20 | ರಾಯಚೂರು | 109.45 | 90.32 | 199.77 | 272.70 | 35.61 | 308.31 |
| 21 | ದಾವಣಗೆರೆ | 102.88 | 79.11 | 181.99 | 209.37 | 28.97 | 238.33 |
| 22 | ಚಾಮರಾಜನಗರ | 62.94 | 45.05 | 107.99 | 125.71 | 18.11 | 143.82 |
| 23 | ಉಡುಪಿ | 51.61 | 41.58 | 93.19 | 103.30 | 15.17 | 118.47 |
| 24 | ಬಾಗಲಕೋಟೆ | 108.68 | 82.27 | 190.95 | 255.19 | 21.93 | 277.12 |
| 25 | ಗದಗ್ | 61.50 | 42.67 | 104.17 | 131.71 | 12.03 | 143.74 |
| 26 | ಹಾವೇರಿ | 91.52 | 65.41 | 156.93 | 197.88 | 23.38 | 221.26 |
| 27 | ಕೊಪ್ಪಳ | 81.17 | 55.42 | 136.59 | 187.68 | 21.59 | 209.27 |
| 28 | ರಾಮನಗರ | 60.03 | 45.96 | 105.99 | 126.94 | 18.42 | 145.36 |
| 29 | ಚಿಕ್ಕಬಳ್ಳಾಪುರ | 68.90 | 57.86 | 126.76 | 154.69 | 14.99 | 169.68 |
| 30 | ಯಾದಗಿರಿ | 59.54 | 45.21 | 104.75 | 146.11 | 11.20 | 157.31 |
| | ಇಡಿಗಂಟು | 1834.68 | 1775.65 | 3610.33 | 3277.86 | 38.16 | 3316.02 |
| **ಒಟ್ಟು** | | **4650.00** | **4080.18** | **8730.18** | **9676.07** | **804.63** | **10480.70** |

# ಅನುಬಂಧ – V

## ವಲಯವಾರು ಯೋಜನಾ ಅನುದಾನದ ಹಂಚಿಕೆ

(ರೂ ಕೋಟಿಗಳಲ್ಲಿ)

| ಕ್ರ ಸಂ | ವಲಯ | 2013–14 | | | 2014–15 | | |
|---|---|---|---|---|---|---|---|
| | | ರಾಜ್ಯ | ಕೇಂದ್ರ | ಒಟ್ಟು | ರಾಜ್ಯ | ಕೇಂದ್ರ | ಒಟ್ಟು |
| 1 | ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ | 1615.65 | 658.27 | 2273.92 | 2987.22 | 5.47 | 2992.69 |
| 2 | ವಯಸ್ಕರ ಶಿಕ್ಷಣ | 2.92 | | 2.92 | 2.95 | 0.00 | 2.95 |
| 3 | ಕ್ರೀಡೆ, ಯುವಜನ ಸೇವೆ | 15.74 | 11.96 | 27.70 | 29.29 | 0.00 | 29.29 |
| 4 | ಜನಾರೋಗ್ಯ | 168.55 | | 168.55 | 180.69 | 0.00 | 180.69 |
| 5 | ಆಯುಷ್ | 8.45 | | 8.45 | 9.67 | 0.00 | 9.67 |
| 6 | ಕುಟುಂಬ ಕಲ್ಯಾಣ | 25.64 | 396.30 | 421.94 | 28.53 | 439.50 | 468.03 |
| 7 | ಗ್ರಾಮೀಣ ನೀರು ಪೂರೈಕೆ | 129.53 | 100.30 | 229.83 | 236.52 | 0.00 | 236.52 |
| 8 | ಪ ಜಾಯವರ ಕಲ್ಯಾಣ | 140.65 | 238.67 | 379.32 | 376.53 | 6.05 | 382.58 |
| 9 | ಪ.ಪಂ. ದವರ ಕಲ್ಯಾಣ | 54.72 | 56.12 | 110.84 | 67.43 | 61.61 | 129.04 |
| 10 | ವಿಶೇಷ ಘಟಕ ಉಪ ಯೋಜನೆ | 30.87 | | 30.87 | 30.95 | 0.00 | 30.95 |
| 11 | ಹಿಂದುಳಿದ ವರ್ಗಗಳ ಕಲ್ಯಾಣ | 146.90 | | 146.90 | 186.63 | 0.00 | 186.63 |
| 12 | ಮಹಿಳಾ ಮತ್ತು ಮಕ್ಕಳ ಕಲ್ಯಾಣ | 307.71 | 620.27 | 927.98 | 967.85 | 0.00 | 967.85 |
| 13 | ಪೌಷ್ಠಿಕ ಆಹಾರ | 148.82 | 414.90 | 563.72 | 323.78 | 244.76 | 568.54 |
| 14 | ಕೃಷಿ | 28.98 | 12.94 | 41.92 | 42.73 | 0.00 | 42.73 |
| 15 | ತೋಟಗಾರಿಕೆ | 20.47 | 0.80 | 21.27 | 22.07 | 0.00 | 22.07 |
| 16 | ಪಶುಸಂಗೋಪನೆ | 136.75 | 4.70 | 141.45 | 154.69 | 0.00 | 154.69 |
| 17 | ಮೀನುಗಾರಿಕೆ | 6.69 | 0.45 | 7.14 | 7.18 | 0.53 | 7.71 |
| 18 | ಅರಣ್ಯ | 24.68 | | 24.68 | 27.79 | 0.00 | 27.79 |
| 19 | ಸಹಕಾರ | 5.24 | | 5.24 | 5.16 | 0.00 | 5.16 |
| 20 | ವಿಶೇಷ ಪ್ರದೇಶಾಭಿವೃದ್ಧಿ ಯೋಜನೆಗಳು | 40.01 | 32.57 | 72.58 | 49.65 | 36.45 | 86.10 |
| 21 | ಇಂಧನ | 7.13 | 11.83 | 18.96 | 7.15 | 8.54 | 15.7 |
| 22 | ಗ್ರಾಮೀಣ ಉದ್ಯೋಗ – ಎಂ.ಜಿ.ಎನ್.ಆರ್.ಇ.ಜಿ. | 137.53 | 1375.27 | 1512.80 | 1510.00 | 0.00 | 1510.00 |
| 23 | ಪಂ.ರಾ.ಸಂ. ಗಳಿಗೆ ಅನುದಾನ | 914.59 | | 914.59 | 1010.03 | 0.00 | 1010.03 |
| 24 | ಸಣ್ಣ ನೀರಾವರಿ | 0.76 | | 0.76 | 0.76 | 0.00 | 0.76 |
| 25 | ಸಣ್ಣ ಉದ್ಯಮಗಳು | 5.67 | | 5.67 | 6.13 | 0.00 | 6.13 |
| 26 | ರೇಷ್ಮೆ | 5.02 | | 5.02 | 5.54 | 0.00 | 5.54 |
| 27 | ರಸ್ತೆ ಮತ್ತು ಸೇತುವೆ | 155.18 | | 155.18 | 159.20 | 0.00 | 159.20 |
| 28 | ಸಚಿವಾಲಯ ಆರ್ಥಿಕ ಸೇವೆಗಳು | 3.17 | | 3.17 | 17.48 | 0.00 | 17.48 |


| ಕ್ರ ಸಂ | ವಲಯ | 2012–13 | | | 2013–14 | | |
|---|---|---|---|---|---|---|---|
| | | **ರಾಜ್ಯ** | **ಕೇಂದ್ರ** | **ಒಟ್ಟು** | **ರಾಜ್ಯ** | **ಕೇಂದ್ರ** | **ಒಟ್ಟು** |
| 29 | ಗಿರಿಜನ ಉಪಯೋಜನೆ | 9.86 | | 9.86 | 9.86 | 0.00 | 9.86 |
| 30 | ಕೈಮಗ್ಗ | 2.87 | | 2.87 | 2.90 | 0.00 | 2.90 |
| 31 | ವಿಜ್ಞಾನ ಮತ್ತು ತಂತ್ರಜ್ಞಾನ | 1.52 | | 1.52 | 1.57 | 0.00 | 1.57 |
| 32 | ಕಲೆ, ಸಂಸ್ಕೃತಿ ಮತ್ತು ಗ್ರಂಥಾಲಯ | 0.88 | | 0.88 | 1.04 | 0.00 | 1.04 |
| 33 | ವಸತಿ | 282.25 | | 282.25 | 1019.99 | 0.00 | 1019.99 |
| 34 | ಉದ್ಯೋಗ ಮತ್ತು ತರಬೇತಿ | 0.69 | 0.51 | 1.20 | 2.94 | 1.71 | 4.65 |
| 35 | ವಿಕಲಾಂಗರ ಮತ್ತು ಹಿರಿಯ ನಾಗರೀಕರ ಕಲ್ಯಾಣ | 8.14 | | 8.14 | 10.49 | 0.00 | 10.49 |
| 36 | ಜಲಾನಯನ ಅಭಿವೃದ್ಧಿ | 35.63 | 144.32 | 179.95 | 150.00 | 0.00 | 150.00 |
| 37 | ಕೃಷಿ ಮಾರುಕಟ್ಟೆ | 2.05 | | 2.05 | 2.52 | 0.00 | 2.52 |
| 38 | ಅಲ್ಪಸಂಖ್ಯಾತರ ಕಲ್ಯಾಣ | 18.09 | | 18.09 | 21.16 | 0.00 | 21.16 |
| **ಒಟ್ಟು** | | **4650.00** | **4080.18** | **8730.18** | **9676.07** | **804.63** | **10480.70** |

## 6. ಯೋಜನಾ ಸಂಯೋಜನೆ ಮತ್ತು ಮಾಹಿತಿ ವಿಭಾಗ

### ಮುಖ್ಯ ಕಾರ್ಯಚಟುವಟಿಕೆಗಳು

ಯೋಜನಾ ಸಂಯೋಜನೆ ಮತ್ತು ಮಾಹಿತಿ (ಪಿಎಂಐ) ವಿಭಾಗವು ರಾಜ್ಯದಲ್ಲಿನ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದ ಪ್ರಗತಿಯ ಉಸ್ತುವಾರಿಯನ್ನು ಯೋಜಿತ ರೀತಿಯಲ್ಲಿ ನಿರ್ವಹಿಸುತ್ತಿದೆ. ವಿಭಾಗವು ರೂಪಿಸಿರುವ ವ್ಯವಸ್ಥೆಯನ್ನು ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಅಳವಡಿಸಿಕೊಳ್ಳಲಾಗಿದೆ.

### ಯೋಜನಾ ಸಂಯೋಜನೆ ಮತ್ತು ಮಾಹಿತಿ ವಿಭಾಗದ ರಚನೆ



**ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (ಇಪ್ಪತ್ತು ಅಂಶಗಳ ಕಾರ್ಯಕ್ರಮವೂ ಸೇರಿದಂತೆ) ಪರಿಶೀಲನೆ:–**

ಪ್ರತಿ ತಿಂಗಳೂ ಸಾಮಾನ್ಯವಾಗಿ ಮೊದಲೇ ಗೊತ್ತುಪಡಿಸಿರುವ ಮಾಸಿಕ ಗುರಿಗಳನ್ವಯ ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲಿಸಲಾಗುತ್ತಿದೆ. ಈ ವಿಭಾಗವು ರಾಜ್ಯ ಮಟ್ಟದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳನ್ನೊಳಗೊಂಡ ಪ್ರಗತಿ ಪರಿಶೀಲನಾ ಸಭೆಗಳನ್ನು ಮೂರು ತಿಂಗಳಿಗೊಮ್ಮೆ ನಡೆಸಿ ನಿರ್ಧಾರಗಳನ್ನು ಕೈಗೊಳ್ಳುತ್ತದೆ.

ವರದಿ ವರ್ಷದಲ್ಲಿ ಒಟ್ಟು ಮೂರು ಕೆ.ಡಿ.ಪಿ. ಸಭೆಗಳನ್ನು ನಡೆಸಲಾಗಿದೆ. ಈ ಸಭೆಗಳಲ್ಲಿ ಇಲಾಖೆಗಳ ಯೋಜನಾ ವೆಚ್ಚದ ಪರಿಶೀಲನೆ, ಮುಂದುವರೆದ ಹಾಗೂ ಹೊಸ ಕಾರ್ಯಕ್ರಮಗಳ ಮಂಜೂರಾತಿಯ ಹಂತ, ಪ್ರಮುಖ ಕಾರ್ಯಕ್ರಮಗಳಡಿ ಅಂದರೆ ಮಹತ್ವಾಕಾಂಕ್ಷೆಯ ಕಾರ್ಯಕ್ರಮಗಳು, ವಿಶೇಷ ಅಭಿವೃದ್ಧಿ ಕಾರ್ಯಕ್ರಮ, ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆ, ಬಾಹ್ಯಾನುಧಾರಿತ ಯೋಜನೆಗಳು, 12ನೇ ಪಂಚವಾರ್ಷಿಕ ಯೋಜನೆ ಹಾಗೂ ಫಲಿತಾಂಶ ಚೌಕಟ್ಟು ದಾಖಲೆ ಮತ್ತು ಮೌಲ್ಯಮಾಪನ ಅಧ್ಯಯನಗಳ ಪ್ರಗತಿ ಕುರಿತಂತೆ ಪರಿಶೀಲಿಸಿ ನಿರ್ಧಾರ ಕೈಗೊಳ್ಳಲಾಗಿದೆ.

1. **ಯೋಜನಾ ಕಾರ್ಯಕ್ರಮಗಳ ವಿವಿಧ ಹಂತದ ಮಾಸಿಕ ಪರಿಶೀಲನೆ (ಎಂಎಂಆರ್):–**

   ಈ ಪರಿಶೀಲನಾ ಪದ್ಧತಿಯನ್ವಯ ರಾಜ್ಯ ಮತ್ತು ಜಿಲ್ಲಾ ವಲಯದ ಯೋಜನಾ ಕಾರ್ಯಕ್ರಮಗಳ ಪ್ರಗತಿಯನ್ನು ಪ್ರತಿ ತಿಂಗಳು ಪರಿಶೀಲಿಸಲಾಗುತ್ತಿದೆ. ರಾಜ್ಯ ಮಟ್ಟದಲ್ಲಿ ಆಡಳಿತ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು ತಮಗೆ ಸಂಬಂಧಿಸಿದ ಇಲಾಖಾ ಮುಖ್ಯಸ್ಥರುಗಳ ಹಾಗೂ ಯೋಜನಾ ಮತ್ತು ಆರ್ಥಿಕ ಇಲಾಖೆಗಳ ನೋಡಲ್ ಅಧಿಕಾರಿಗಳ ಸಮಕ್ಷಮದಲ್ಲಿ ಯೋಜನಾ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲಿಸುವರು. ಈ ಸಮನ್ವಯ ಕಾರ್ಯವನ್ನು ಪೂರ್ಣವಾಗಿ ಈ ವಿಭಾಗವು ನಿರ್ವಹಿಸುತ್ತಿದೆ.

   ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ವಲಯ ಯೋಜನೆಗಳ ಪ್ರಗತಿಯ ಮಾಸಿಕ ಪರಿಶೀಲನೆಯು ಜಿಲ್ಲಾ ಮಟ್ಟದ ಇಲಾಖಾ ಮುಖ್ಯಸ್ಥರುಗಳಿಂದ ಅವರಿಗೆ ಸಂಬಂಧಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿಗಳೊಡನೆ ನಡೆಯುವುದು.

   ಈ ವಿಭಾಗವು ಎಂಪಿಕ್ ವರದಿಗಳಲ್ಲಿ ನೀಡಲಾಗಿರುವ ವಿವರಗಳನ್ನು ಆಧ್ರರಿಸಿ ಯೋಜನಾ ವೆಚ್ಚವನ್ನು ಇಲಾಖಾವಾರು ಕ್ರೋಢೀಕರಿಸಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆಯುವ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಪರಿಶೀಲನೆಗೆ ಒಳಪಡಿಸುತ್ತಿದೆ.

2. **ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ವಲಯ ಯೋಜನೆಗಳು**

   ಈ ವಿಭಾಗವು ವಿವಿಧ ಇಲಾಖೆಗಳು ಅನುಷ್ಠಾನಗೊಳಿಸುವ ಕೇಂದ್ರ ಪುರಸ್ಕೃತ ಮತ್ತು ಕೇಂದ್ರ ವಲಯ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆಯನ್ನು ಪ್ರತಿ ತಿಂಗಳು (ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಒಳಗೊಂಡಂತೆ) ಕೈಗೊಂಡು ಅದರ ಫಲಿತಾಂಶಗಳನ್ನು ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಕೆ.ಡಿ.ಪಿ. ಸಭೆಯ ಪರಿಶೀಲನೆಗೆ ಮಂಡಿಸಲಾಗುತ್ತದೆ.

## 3. ಪರಿಷ್ಕೃತ 20 ಅಂಶ ಕಾರ್ಯಕ್ರಮ – 2006

ವಿವಿಧ ಇಲಾಖೆಗಳು ಅನುಷ್ಠಾನಗೊಳಿಸುವ ಕೇಂದ್ರ ಸರ್ಕಾರದ ಪರಿಷ್ಕೃತ 20 ಅಂಶಗಳ ಕಾರ್ಯಕ್ರಮಗಳ ಪ್ರಗತಿ ವರದಿಯನ್ನು ಪ್ರತಿ ತಿಂಗಳು ತಯಾರಿಸಿ ಕಾರ್ಯಕ್ರಮ ಅನುಷ್ಠಾನ ಮತ್ತು ಸಾಂಖ್ಯಿಕ ಮಂತ್ರಾಲಯ ಭಾರತ ಸರ್ಕಾರ, ನವದೆಹಲಿ ಇವರಿಗೆ ನಿಯಮಿತವಾಗಿ ಸಲ್ಲಿಸುವ ಕಾರ್ಯವು ಈ ವಿಭಾಗದ ಜವಾಬ್ದಾರಿಯಾಗಿರುತ್ತದೆ.

## 4. ಫಲಿತಾಂಶ ಚೌಕಟ್ಟು ದಾಖಲೆ

ಭಾರತ ಸರ್ಕಾರವು ಸಾಧನಾ ನಿರ್ವಹಣೆ ಮತ್ತು ಮೌಲ್ಯ ಮಾಪನ ವ್ಯವಸ್ಥೆಯ ಮೇಲೆ ಈಗಾಗಲೇ ಸಾರ್ವತ್ರಿಕ ಫಲಿತಾಂಶ ಚೌಕಟ್ಟು ದಾಖಲೆ (ಆರ್‌ಎಫ್‌ಡಿ) ಜಾರಿಗೊಳಿಸುವ ರೀತಿಯಲ್ಲಿಯೇ ಆರ್.ಎಫ್.ಡಿ ಯನ್ನು ರಾಜ್ಯದ ಆಡಳಿತ್ಮಾಕ ಇಲಾಖೆಗಳು ಇನ್ಪುಟ್ ಚಾಲಿತ ವಿಧಾನವನ್ನು ಸಕ್ರೀಯಗೊಳಿಸುವ ದೃಷ್ಟಿಕೋನದೊಂದಿಗೆ ಕರ್ನಾಟಕ ಸರ್ಕಾರವು ಆರ್.ಎಫ್.ಡಿ ಯನ್ನು ರಾಜ್ಯದಲ್ಲಿ 2011–12 ರಿಂದ ಜಾರಿಗೊಳಿಸಿದೆ.

ಈ ಉದ್ದೇಶಕ್ಕಾಗಿ ಆಡಳಿತ್ಮಾಕ ಇಲಾಖೆಗಳ 19 ಗುಂಪುಗಳನ್ನಾಗಿ ವಿಂಗಡಿಸಲಾಗಿದೆ ಹಾಗೂ ಪ್ರತಿ ಗುಂಪಿಗೂ ಒಂದು ಎಟಿಎಫ್ ತಜ್ಞ ಗುಂಪನ್ನು ಸರ್ಕಾರದ ಮಾಜಿ ಮುಖ್ಯ ಕಾರ್ಯದರ್ಶಿಗಳು/ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆ ಹಾಗೂ ಡೊ ಮೇನ್ ತಜ್ಞರ ಸದಸ್ಯತ್ವದಲ್ಲಿ ರಚಿಸಲಾಗಿದೆ. (ಸ.ಆ.ಸಂ. ಪಿಡಿ 2 ಪಿಎಂಐ 2012 (ಪಿ–1) ದಿನಾಂಕ: 27–07–2012).

ಆರ್.ಎಫ್.ಡಿಯು ಪ್ರಸಕ್ತತೆಯನ್ನು ಕಾಲಕಾಲಕ್ಕೆ ಪರಿಶೀಲಿಸಲು ಅಳವಡಿಸಬೇಕಾದ ಯಾಂತ್ರಿಕತೆಯನ್ನು ಸೂಚಿಸಲು ಸಲಹಾ ಸಮಿತಿಯನ್ನು ಸಹ ಸರ್ಕಾರಿ ಆದೇಶ ಸಂಖ್ಯೆ: ಪಿಡಿ 2 ಪಿಎಂಐ 2012 (ಪಿ–3) ರಲ್ಲಿ ರಚಿಸಲಾಗಿದೆ ಹಾಗೂ ಆರ್.ಎಫ್.ಡಿ. ಮಾರ್ಗದರ್ಶನಗಳನ್ನು ಬದಲಾವಣೆ ಮಾಡಲು ಶಿಫಾರಸ್ಸನ್ನು ದಿ:15–04–2013 ರ ವರದಿಯಲ್ಲಿ ಸಲ್ಲಿಸಿದೆ. ಶಿಫಾರಸ್ಸಿನ ಆಧಾರದ ಮೇಲೆ ಪರಿಷ್ಕೃತ ಮಾರ್ಗ ಸೂಚಿಗಳನ್ನು ಜುಲೈ 2013 ರಲ್ಲಿ ಹೊರಡಿಸಲಾಗಿದೆ.

2013–14 ರಲ್ಲಿ, ವಿವಿಧ ಎಟಿಎಫ್ ತಜ್ಞರ ಗುಂಪುಗಳು 31 ಸಭೆಗಳನ್ನು ನಡೆಸಿದೆ ಹಾಗೂ 35 ಆಡಳಿತ್ಮಾಕ ಇಲಾಖೆಗಳ 41 ಅಧೀನ ಇಲಾಖೆಗಳು 2012–13 ರ ಅಂತಿಮ ಫಲಿತಾಂಶ ಚೌಕಟ್ಟು ದಾಖಲೆಗಳನ್ನು ಹಾಗೂ 2013–14 ರ ಗುರಿಗಳನ್ನು ಉಸ್ತುವಾರಿ ವ್ಯವಸ್ಥೆ ಅಡಿ ಆನ್‌ಲೈನ್‌ನಲ್ಲಿ ದಾಖಲಿಸಿರುತ್ತವೆ 2013–14ನೇ ಸಾಲಿನ ಫಲಿತಾಂಶ ಚೌಕಟ್ಟು ದಾಖಲೆಗಳ ಮಧ್ಯಂತರ ಪರಿಶೀಲನಾ ಸಭೆಗಳನ್ನು 2014ನೇ ಜನವರಿ–ಫೆಬ್ರವರಿ ತಿಂಗಳುಗಳಲ್ಲಿ ಆಯೋಜಿಸಲಾಗಿದ್ದು, ವಿವಿಧ ಇಲಾಖೆಗಳ 39 ಪರಿಶೀಲನಾ ಸಭೆಗಳನ್ನು ನಡೆಸಲಾಗಿದೆ.

## 5. ವಿಭಾಗದಲ್ಲಿ ವರದಿಯ ವರ್ಷದಲ್ಲಿ ಕೆಳಕಂಡ ಕಾರ್ಯಗಳನ್ನು ನಿರ್ವಹಿಸಲಾಯಿತು.

i. ಈ ವಿಭಾಗವು ಸಮಾಜ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಮತ್ತು

ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗಳ ನೋಡಲ್ ವಿಭಾಗವಾಗಿ ಕರ್ತವ್ಯ ನಿರ್ವಹಿಸಿ ಆಯಾ ಇಲಾಖೆಗಳಿಗೆ ಸಂಬಂಧಿಸಿದ ಯೋಜನಾ ಕಾರ್ಯಕ್ರಮಗಳ ಕಡತಗಳಿಗೆ ಅಭಿಪ್ರಾಯವನ್ನು ನೀಡುತ್ತಿದೆ. ಪ್ರಸಕ್ತ ವರ್ಷದಲ್ಲಿ ಒಟ್ಟು 22 ಕಡತಗಳನ್ನು ಸ್ವೀಕರಿಸಿ ಅಭಿಪ್ರಾಯ ನೀಡಲಾಯಿತು.

ii. ಈ ವಿಭಾಗವು ಸಮಾಜ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಗಳ ವ್ಯಾಪ್ತಿಯಲ್ಲಿ ಬರುವ ವಲಯಗಳಿಗೆ 2013–14ರ ವಾರ್ಷಿಕ ಯೋಜನೆ ತಯಾರಿಕೆಗೆ ಅಗತ್ಯವಿರುವ ಮಾಹಿತಿಯನ್ನು ಒದಗಿಸಿದೆ.

iii. ಈ ವಿಭಾಗವು ಯೋಜನಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ, ಪ್ರತಿ ತಿಂಗಳು ನಡೆಯುವ ಎಂಎಂಆರ್ ಸಭೆಗಳನ್ನು ಏರ್ಪಡಿಸುವ ವ್ಯವಸ್ಥೆಯನ್ನು ಮಾಡುತ್ತದೆ. ಈ ವರ್ಷದಲ್ಲಿ 5 ಪರಿಶೀಲನಾ ಸಭೆಗಳನ್ನು ನಡೆಸಿ ಪ್ರಾದೇಶಿಕ ಅಭಿವೃದ್ಧಿ ಮಂಡಳಿಗಳ, ಯೋಜನಾ ಇಲಾಖೆ ಹಾಗೂ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಪರಿಶೀಲಿಸಲಾಗಿದೆ.

iv. ಈ ವಿಭಾಗವು ಎಲ್ಲಾ ಆಡಳಿತ ಇಲಾಖೆಗಳಿಗೆ ಎಂಎಂಆರ್ ಸಭೆಗಳನ್ನು ನಡೆಸುವ ದಿನಾಂಕ ಪಟ್ಟಿಯನ್ನು ಬಿಡುಗಡೆ ಮಾಡಿದೆ.

v. ಹೊಸ ಯೋಜನೆಗಳು, ಮುಂದುವರೆದ ಯೋಜನೆಗಳು ಹಾಗೂ ಪರಿಷ್ಕೃತ ಯೋಜನೆಗಳ ಮಂಜೂರಾತಿಯು ಸಕಾಲದಲ್ಲಿ ಆಗುವ ನಿಟ್ಟಿನಲ್ಲಿ ಎಲ್ಲಾ ಇಲಾಖೆಗಳಿಗೆ ಈ ವಿಭಾಗವು ಕಾಲಮಿತಿಯನ್ನು ವಿಧಿಸಿ ಯೋಜನೆಗಳ ಮಂಜೂರಾತಿಯ ಪ್ರಕ್ರಿಯೆಯ ಮೇಲೆ ನಿಗಾ ಇರಿಸಿದೆ, ಹಾಗೂ ಪ್ರತಿ ಕೆ.ಡಿ.ಪಿ. ಸಭೆಯಲ್ಲಿ ಇದನ್ನು ಚರ್ಚಿಸಲಾಗುತ್ತದೆ.

vi. 2013–14ನೇ ಸಾಲಿನ ಆರ್ಥಿಕ ಸಮೀಕ್ಷೆಗೆ ಲಿಂಗ ಮತ್ತು ಸಾಮಾಜಿಕ ಸಮಾನತೆ, ಆಹಾರ ಭದ್ರತೆ ಹಾಗೂ ನಗರಾಭಿವೃದ್ದಿಯ ಅಧ್ಯಯನಗಳಿಗೆ ಸಂಬಂಧಿಸಿದ ವರದಿ ತಯಾರಿಸುವ ಕಾರ್ಯವನ್ನು ಈ ವಿಭಾಗವು ಸಮನ್ವಯಿಸುತ್ತದೆ.

**ಡಿಸಿಷನ್ ಸಪೋರ್ಟ್ ಸಿಸ್ಟಂ (ಡಿಎಸ್ಎಸ್):**

ಸೆಂಟರ್ ಫಾರ್ ಇ–ಗವರ್ನೆನ್ಸ್, ಇ–ಆಡಳಿತ ಇಲಾಖೆ ಇವರ ಸಹಯೋಗದೊಂದಿಗೆ ಯೋಜನಾ ಇಲಾಖೆಗೆ ಅಗತ್ಯವಿರುವ "ಡಿಸಿಷನ್ ಸಪೋರ್ಟ್ ಸಿಸ್ಟಂ", ಎಂದು ಕರೆಯುವ ಸಮಗ್ರ ನಿರ್ವಹಣಾ ಮಾಹಿತಿ ವ್ಯವಸ್ಥೆ(ಎಂ.ಐ.ಎಸ್) ಅನ್ನು ಜಾರಿಗೆ ತರಲು ಈ ವಿಭಾಗವು ಕಾರ್ಯೋನ್ಮುಖವಾಗಿದೆ. ಈ ಯೋಜನೆಯ ಮೂಲ ಉದ್ದೇಶವು ಕರ್ನಾಟಕದ ಯೋಜನೆ ಮತ್ತು ಉಸ್ತುವಾರಿಯ ಚಿತ್ರಣವನ್ನು ಬದಲಾಯಿಸುವುದು, ಸರ್ಕಾರದ ಖರ್ಚಿನ ಹೊರೆಯನ್ನು ಕಡಿಮೆ ಮಾಡುವುದು, ವಿವಿಧ ಹಂತಗಳಲ್ಲಿ ಪಾರದರ್ಶಕತೆಯನ್ನು ತರುವುದು ಹಾಗೂ ಸರ್ಕಾರಿ ನೌಕರರ ಹೊಣೆಗಾರಿಕೆಯನ್ನು ಹೆಚ್ಚಿಸುವುದು ಆಗಿರುತ್ತದೆ.

ಮೊದಲನೇ ಸುತ್ತಿನಲ್ಲಿ ಈ ಕಾರ್ಯ ಕೈಗೊಳ್ಳಲು ಮೀನುಗಾರಿಕೆ, ರೇಷ್ಮೆ, ತೋಟಗಾರಿಕೆ, ಪಶುಸಂಗೋಪನೆ, ಅರಣ್ಯ ಮತ್ತು ಶಿಕ್ಷಣ ಇಲಾಖೆಗಳನ್ನು ಆಯ್ಕೆ ಮಾಡಲಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಸಮಾಜ ಕಲ್ಯಾಣ, ಕೃಷಿ, ಗ್ರಾಮೀಣಾ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಗಳು ಈ ಕಾರ್ಯ ಅನುಷ್ಠಾನಗೊಳಿಸಲು 2ನೇ ಸುತ್ತಿನಲ್ಲಿ ಆಯ್ಕೆ ಮಾಡಲಾಗಿದೆ. ಮೇಲಿನ ಎಲ್ಲಾ ಇಲಾಖೆಗಳು ಮೇ 2014ರ ಎಂಪಿಕ್‌ನ್ನು ಆನ್‌ಲೈನ್ ಮುಖಾಂತರ ತಯಾರಿಸುವ ಗುರಿ ಹೊಂದಿವೆ. ಅಲ್ಲದೇ ಇತರೇ ಆಡಳಿತಾತ್ಮಕ ಇಲಾಖೆಗಳಲ್ಲಿಯೂ ಡಿಎಸ್‌ಎಸ್ ಅಳವಡಿಕೆಗೆ ಬೇಕಾಗಿರುವ ಬೋರ್ಡಿಂಗ್ ವೇಳಾ ಪಟ್ಟಿಯ ಕಾರ್ಯಕ್ರಮವನ್ನು ವಿನ್ಯಾಸ ಮಾಡಲಾಗಿದ್ದು, ಆನ್ ಲೈನ್ ಎಂಪಿಕ್ ಮಾಡುವ ಕಾರ್ಯ ಪ್ರಗತಿಯಲ್ಲಿದೆ.

2012–13ನೇ ಸಾಲಿನ ರಾಜ್ಯದ ಒಟ್ಟಾರೆ ಪರಿಷ್ಕೃತ ಯೋಜನಾ ಗಾತ್ರವು ರೂ. 48,450.00 ಕೋಟಿಗಳಾಗಿರುತ್ತದೆ. ವಿವಿಧ ಇಲಾಖೆಗಳು ವರದಿ ಮಾಡಿರುವ ಪ್ರಕಾರ 2013–14ರ ಸಾಲಿನ ರೂ. 43,296.26 ಕೋಟಿ ವೆಚ್ಚವಾಗಿದ್ದು ಇದು ಒಟ್ಟು ಅನುದಾನಕ್ಕೆ ಶೇಕಡ 89.00 ರಷ್ಟು ಇರುತ್ತದೆ.

**ಸಿಬ್ಬಂದಿ ನಮೂನೆ**

**ಅ) ಪಿ.ಎಂ.ಐ ವಿಭಾಗಕ್ಕೆ ಮಂಜೂರಾದ ಸಿಬ್ಬಂದಿ ವಿವರ (ದಿನಾಂಕ 31.03.2014 ರಂದು ಇದ್ದಂತೆ)**

| ಗುಂಪು | ಒಟ್ಟು ಹುದ್ದೆಗಳು | ಭರ್ತಿ ಮಾಡಲ್ಪಟ್ಟ ಹುದ್ದೆಗಳು | | | ಪರಿಶಿಷ್ಟ ಜಾತಿ | | | ಪರಿಶಿಷ್ಟ ಪಂಗಡ | | |
|---|---|---|---|---|---|---|---|---|---|---|
| | | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು | ಪುರುಷ | ಮಹಿಳೆ | ಒಟ್ಟು |
| ಎ | 6 | - | 1 | 1 | - | - | 0 | - | - | - |
| ಬಿ | 5 | 1 | 2 | 3 | - | 1 | 1 | - | - | - |
| ಸಿ | 11 | 2 | 6 | 8 | - | 1 | 1 | - | - | - |
| ಡಿ | 3 | - | 1 | 1 | - | 1 | 1 | - | - | - |
| ಒಟ್ಟು | **25** | **3** | **10** | **13** | **-** | **3** | **3** | **-** | **-** | **-** |

**ಆ) ಖಾಲಿ ಹುದ್ದೆಗಳು ಮತ್ತು ನಿವೃತ್ತಿ ಹೊಂದಲಿರುವವರ ವಿವರ**

| ಗುಂಪು | ಒಟ್ಟು ಹುದ್ದೆಗಳು | ಖಾಲಿ ಹುದ್ದೆಗಳು | ನಿವೃತ್ತಿ ಹೊಂದಲಿರುವವರು |
|---|---|---|---|
| ಎ | 6 | 5 | - |
| ಬಿ | 5 | 2 | - |
| ಸಿ | 11 | 3 | - |
| ಡಿ | 3 | 2 | - |
| ಒಟ್ಟು | 25 | 12 | - |

## 7. ಪರಿಯೋಜನಾ ರಚನಾ ವಿಭಾಗ

ರಾಜ್ಯ ಪ್ರಮುಖ ಬಂಡವಾಳ ಹೂಡುವ ಬಾಹ್ಯಾಧಾರಿತ ಯೋಜನೆಗಳಿಗೆ ಮತ್ತು ಇತರೆ ಪ್ರಸ್ತಾವನೆಗಳಿಗೆ ಪರಿಯೋಜನಾ ರಚನಾ ವಿಭಾಗವು ಪ್ರಧಾನ ಪಾತ್ರವಹಿಸುತ್ತದೆ. ವಿವಿಧ ಆಡಳಿತ ಇಲಾಖೆಗಳಿಂದ ಬಾಹ್ಯಾಧಾರಿತ ಯೋಜನೆಗಳ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಅವುಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಮನ್ವಯ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲಾಗುವುದು. ಪರಿಯೋಜನಾ ರಚನಾ ವಿಭಾಗದ ನಿರ್ದೇಶಕರು ಈ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

ನಿರ್ದೇಶಕರು ಫಲಿತಾಂಶ ದಾಖಲೆಗಳ ಚೌಕಟ್ಟುಗೆ (RFD) ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಪಶುಸಂಗೋಪನೆ, ಮೀನುಗಾರಿಕೆ ಹಾಗೂ ಸಹಕಾರ ಇಲಾಖೆಗಳ ಫಲಿತಾಂಶ ದಾಖಲೆಗಳ ಚೌಕಟ್ಟು ತಯಾರಿಸುವ ಕೆಲಸಗಳಲ್ಲಿ ಆಯಾಯ ಇಲಾಖೆಗಳ ತದುದ್ದೇಶಿತ ಟಾಸ್ಕ್ ಫೋರ್ಸ್ ಪರಿಣಿತ ಸಮಿತಿಗಳೊಡನೆ ಸಮನ್ವತಿಯನ್ನು ಕಾಪಾಡುವ ಕಾರ್ಯವನ್ನು ಸಹ ಈ ವಿಭಾಗಕ್ಕೆ ಒಪ್ಪಿಸಲಾಗಿದೆ.

2013–14ನೇ ಸಾಲಿಗೆ ಈ ಕೆಳಕಂಡ ಬಾಹ್ಯಧಾರಿತ ನೆರವಿನ ಯೋಜನೆಯನ್ನು  ರಾಜ್ಯ ಮಟ್ಟದ ಸಮನ್ವಯ ಸಮಿತಿಯು ಉಸ್ತುವಾರಿ ಮಾಡಲಾಗಿದೆ.

1. ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವ ವೈವಿಧ್ಯ ಸಂರಕ್ಷಣಾ ಯೋಜನೆ (KSFMBC) 3ನೇ ಹಂತ ಯೋಜನೆ.
2. ಕರ್ನಾಟಕ ರಾಜ್ಯದಲ್ಲಿ ವ್ಯಾಪಕ ಪೌಷ್ಠಿಕ ಘನೋದ್ದೇಶ ಹಾಗೂ ಆಹಾರ ಬೆಲೆಗಳ ಬಿಕ್ಕಟ್ಟು ತ್ವರಿತಗತಿ ಪ್ರತಿಕ್ರಿಯೆ ಅಪೌಷ್ಠಿಕತೆ (ಜಪಾನಿ ನೆರವು ಸಾಮಾಜಿಕ ಅಭಿವೃದ್ಧಿ ನಿಧಿ (JSDF).
3. ಕರ್ನಾಟಕ ಗ್ರಾಮೀಣ ರಸ್ತೆ ಸುಧಾರಣಾ ಯೋಜನೆ.
4. ಗ್ರಾಮ ಸ್ವರಾಜ ಕರ್ನಾಟಕ ಪಂಚಾಯತ್ ಬಲವರ್ದನೆ 2ನೇ ಹಂತ ಯೋಜನೆ.

ಈ ವಿಭಾಗವು ಕೆಳಗಿನ ಇಲಾಖೆಗಳಿಗೆ ನೋಡಲ್ ವಿಭಾಗವಾಗಿ ಕೆಲಸ ಮಾಡುತ್ತಿದೆ.

1. ಕೃಷಿ, ಜಲಾನಯನ ಅಭಿವೃದ್ಧಿ ಮತ್ತು ತೋಟಗಾರಿಕೆ.
2. ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ,
3. ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ,
4. ಕಂದಾಯ ಇಲಾಖೆ.
5. ಸಾರ್ವಜನಿಕ ಉದ್ದಿಮೆಗಳ ಇಲಾಖೆ,
6. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
7. ಇ–ಆಡಳಿತ.

ಈ ವಿಭಾಗವು ಮೇಲ್ಕಂಡ ಇಲಾಖೆಗಳ ಪ್ರಮುಖ ವಲಯಗಳಲ್ಲಿನ ಚಟುವಟಿಕೆಗಳ ಬಗ್ಗೆ ಉಸ್ತುವಾರಿ ಗುರಿಗಳನ್ನೊಳಗೊಂಡ ಅಭಿವೃದ್ಧಿ ಕಾರ್ಯನೀತಿ ಮತ್ತು ಯೋಜನಾ ಕಾರ್ಯಕ್ರಮಗಳಿಗೆ ನೆರವು ನೀಡುತ್ತದೆ. ಹಾಗೂ ಈ ಇಲಾಖೆಗಳ ಯೋಜನಾ ಕಾರ್ಯಕ್ರಮಗಳಿಗೆ ಅಭಿಪ್ರಾಯಗಳನ್ನು ನೀಡುತ್ತದೆ.

ನೋಡಲ್ ಇಲಾಖೆಗಳಿಗೆ ವಾರ್ಷಿಕ, ಪಂಚವಾರ್ಷಿಕ ಯೋಜನೆ ಮತ್ತು ಆರ್ಥಿಕ ಸಮೀಕ್ಷೆ ತಯಾರಿಸಲು ನೆರವು ನೀಡುತ್ತದೆ.

| ಪ್ರವರ್ಗ | ಒಟ್ಟು ಮಂಜೂರಾತಿ | ಭರ್ತಿ ಮಾಡಿದ ಹುದ್ದೆಗಳು | | | ಪ.ಜಾ | | | ಪ.ಪಂ | | | ಖಾಲಿ | ನಿವೃತ್ತಿ / ಬಡ್ತಿ |
|---|---|---|---|---|---|---|---|---|---|---|---|---|
| | | ಪು | ಮ | ಒಟ್ಟು | ಪು | ಮ | ಒಟ್ಟು | ಪು | ಮ | ಒಟ್ಟು | | |
| ಎ | 3 | 2 | 1 | 3 | 1 | - | 1 | 1 | - | 1 | 0 | |
| ಬಿ | 7 | 1 | 3 | 4 | - | - | 0 | - | - | - | 3 | |
| ಸಿ | 13 | 1 | 5 | 6 | - | - | 0 | - | - | - | 7 | |
| ಡಿ | 5 | - | 1 | 1 | - | - | 0 | - | - | - | 4 | |
| **ಒಟ್ಟು** | **28** | **4** | **10** | **14** | **1** | **-** | **1** | **1** | **-** | **1** | **14** | |

## 8. ಜನಶಕ್ತಿ ಮತ್ತು ಉದ್ಯೋಗ ವಿಭಾಗ

### ವಿಭಾಗದ ಚಟುವಟಿಕೆಗಳು

ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ಪ್ರವಾಹ ನಿಯಂತ್ರಣ, ಅಚ್ಚುಕಟ್ಟು ಪ್ರದೇಶಾಬಿವೃದ್ಧಿ ಪ್ರಾಧಿಕಾರ (ಖಾಡಾ), ರಸ್ತೆ ಮತ್ತು ಸೇತುವೆ ಹಾಗೂ ಕಟ್ಟಡಗಳು, ಸುಜಲ ಜಲಾನಯನ ಯೋಜನೆ (ಜಲಾನಯನ ಅಭಿವೃದ್ಧಿ) ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆ ಯೋಜನೆ (MGNREGS) ಇಲಾಖೆಗಳಿಗೆ ಸಂಬಂಧಿಸಿದಂತೆ, ರಾಜ್ಯದಲ್ಲಿ ಉದ್ಯೋಗ ಉತ್ಪತ್ತಿ ಸನ್ನಿವೇಶದ ವರದಿಯನ್ನು ತರಿಸಿಕೊಳ್ಳುವುದು, ಕ್ರೋಢೀಕರಿಸಿ, ಪ್ರಕಟಣೆ ಮಾಡುವುದು ಈ ವಿಭಾಗದ ಪ್ರಮುಖ ಚಟುವಟಿಕೆಯಾಗಿದೆ ಹಾಗೂ ಈ ಮಾಹಿತಿಯನ್ನು ಕರ್ನಾಟಕ ಆರ್ಥಿಕ ಸಮೀಕ್ಷೆಯ ಸಂಬಂಧಪಟ್ಟ ಅಧ್ಯಾಯದಲ್ಲಿ ಪ್ರತಿವರ್ಷ ಪ್ರಕಟಿಸಲಾಗುವುದು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಉನ್ನತ ಶಿಕ್ಷಣ, ಕಾರ್ಮಿಕ ಮತ್ತು ಉದ್ಯೋಗ, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ, ಪ್ರವಾಸೋದ್ಯಮ, ಯುವಜನ ಸೇವಾ ಮತ್ತು ಕ್ರೀಡಾ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳಿಗೆ ಸಂಬಂಧಿಸಿದಂತೆ, ಈ ವಿಭಾಗವು ನೋಡಲ್ ವಿಭಾಗವಾಗಿ ಈ ಇಲಾಖೆಗಳ ಸಹಯೋಗದೊಂದಿಗೆ ಪಂಚವಾರ್ಷಿಕ ಹಾಗೂ ವಾರ್ಷಿಕ ಯೋಜನೆಗಳನ್ನು ತಯಾರಿಸುವುದು.

ಈ ವಿಭಾಗವು ನೋಡಲ್ ವಿಭಾಗವಾಗಿ ಶಿಕ್ಷಣ, ಆರೋಗ್ಯ, ಕಾರ್ಮಿಕ ಮತ್ತು ಉದ್ಯೋಗ, ಇಲಾಖೆಗಳ ಕರ್ನಾಟಕ ಆರ್ಥಿಕ ಸಮೀಕ್ಷೆಯ ಸಂಬಂಧಪಟ್ಟ ಅಧ್ಯಾಯ ತಯಾರಿಸುವಲ್ಲಿ ಸಹಯೋಗ ಹೊಂದಿದೆ.

ಈ ವಿಭಾಗವು ಶಿಕ್ಷಣ (ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ, ಕಾರ್ಮಿಕ ಮತ್ತು ಉದ್ಯೋಗ, ಕನ್ನಡ ಮತ್ತು ಸಂಸ್ಕೃತಿ, ಕ್ರೀಡಾ ಮತ್ತು ಯುವಜನಸೇವಾ, ಮಾಹಿತಿ ಮತ್ತು ತಂತ್ರಜ್ಞಾನ, ಪ್ರವಾಸೋದ್ಯಮ ಇಲಾಖೆಗಳಿಗೆ, ಯೋಜನಾ ಇಲಾಖೆಯ ನೋಡಲ್ ವಿಭಾಗವಾಗಿದೆ. ಈ ಇಲಾಖೆಗಳು ನಡೆಸುವ ವಿವಿಧ ಸಭೆಗಳಾದ ಮಾಸಿಕ ವಿವಿಧ ಹಂತದ ಪರಿಶೀಲನಾ ಸಭೆ (MMR), ಟೆಕ್ನಿಕಲ್ ಅಡ್ವೇಸರ್ ಪ್ಯಾನಲ್ (TAP), ಸರ್ವಶಿಕ್ಷಣ ಅಭಿಯಾನ, ಎಕ್ಸಿಕ್ಯೂಟೀವ್ ಕಮಿಟಿ ಸಭೆಗಳು ಮತ್ತು ವಿಶ್ವವಿದ್ಯಾಲಯಗಳ ತ್ರೈಮಾಸಿಕ ಹಣಕಾಸು ಸಮಿತಿ ಸಭೆಗಳಿಗೆ ಸಹಯೋಗ ಹೊಂದಿದೆ. ವಿಶ್ವವಿದ್ಯಾಲಯಗಳು ವರ್ಷದಲ್ಲಿ ಕನಿಷ್ಠ ತ್ರೈಮಾಸಿಕ ಆಧಾರದ ಮೇಲೆ ಸಭೆ ನಡೆಸುತ್ತವೆ.

**ಜನಶಕ್ತಿ ಮತ್ತು ಉದ್ಯೋಗ ವಿಭಾಗ**

**ಕಾರ್ಯಹಂಚಿಕೆ ಪಟ್ಟಿ (Work Distribution)**

| ಮಂಜೂರಾದ ಹುದ್ದೆಗಳ ಪದನಾಮ | ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಹೆಸರು | ಕರ್ತವ್ಯದ ಸಂಕ್ಷಿಪ್ತ ವಿವರ |
|---|---|---|
| ನಿರ್ದೇಶಕರು | ತೆರವಾಯಿ | ಈ ವಿಭಾಗದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದು, ಕಾರ್ಯದರ್ಶಿಯವರ ಅನುಮೋದನೆ ಮೇರೆಗೆ ಜನಶಕ್ತಿ ಮತ್ತು ಉದ್ಯೋಗ ವಿಭಾಗದ ಯೋಜನಾ ಚಟುವಟಿಕೆಗಳ ಉಸ್ತುವಾರಿ, ಯೋಜನೆಗಳ ರೂಪಿಸುವಿಕೆ, ನೋಡಲ್ ಇಲಾಖೆಗಳ ವಾರ್ಷಿಕ ಯೋಜನೆಗಳ ರೂಪಿಸುವಿಕೆ ಹಾಗೂ ವಿಭಾಗದ ಎಲ್ಲಾ ಅಧಿಕಾರಿಗಳ ಹಾಗೂ ಕಾರ್ಯಕಲಾಪಗಳ ನಿರ್ವಹಣೆಯಲ್ಲಿ ಮುಖ್ಯ ಮೇಲುಸ್ತುವಾರಿ ಅಧಿಕಾರಿಯಾಗಿ ಕರ್ತವ್ಯವನ್ನು ನಿರ್ವಹಿಸುತ್ತಾರೆ. |


| ಮಂಜೂರಾದ ಹುದ್ದೆಗಳ ಪದನಾಮ | ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಹೆಸರು | ಕರ್ತವ್ಯದ ಸಂಕ್ಷಿಪ್ತ ವಿವರ |
|---|---|---|
| ಉಪ ನಿರ್ದೇಶಕರು | ಖಾಲಿ | 1) ನೋಡಲ್ ಇಲಾಖೆಗಳ ವಾರ್ಷಿಕ ಮತ್ತು ಪಂಚ ವಾರ್ಷಿಕ ಯೋಜನೆಗಳಿಗೆ ಸಂಬಂಧಿಸಿದ ಕೆಲಸಗಳು<br>2) ವಿಭಾಗಕ್ಕೆ ನಿಗದಿಪಡಿಸುವ ಆರ್ಥಿಕ ಸಮೀಕ್ಷೆಯ ಅಧ್ಯಾಯಗಳನ್ನು ತಯಾರಿಸುವುದು.<br>3) ಸಹಾಯಕ ಸಾಂಖ್ಯಿಕ ಅಧಿಕಾರಿ–2 ಮಂಡಿಸಿದ ದಿನಗೂಲಿ ಉದ್ಯೋಗ ಉತ್ಪತ್ತಿ ಮತ್ತು ಉದ್ಯೋಗ ವಿನಿಮಯ ಕೇಂದ್ರಗಳ ಜೀವಂತ ದಾಖಲೆ ಆಧಾರಿತ ವರದಿಗಳನ್ನು ಪರಿಶೀಲಿಸುವುದು.<br>4) ವಿಭಾಗದಿಂದ ತೆಗೆದುಕೊಳ್ಳುವ ಅಧ್ಯಯನ ಮತ್ತು ಪ್ರಕಟಣೆಗಳಿಗೆ ಸಂಬಂಧಿಸಿದ ಕೆಲಸಗಳು |
| ಸಹಾಯಕ ನಿರ್ದೇಶಕರು | ಶ್ರೀ ರಾಮಚಂದ್ರ ಹೆಗಡೆ | 1) ವಾರ್ಷಿಕ ಯೋಜನೆ, ಆರ್ಥಿಕ ಸಮೀಕ್ಷೆ ಹಾಗೂ ವಿಭಾಗದಲ್ಲಿ ನಿರ್ವಹಿಸುವ ಇನ್ನಿತರ ಅಧ್ಯಯನಗಳಿಗೆ ಸಂಬಂಧಿಸಿದ ಮಾಹಿತಿಯ ಸಂಗ್ರಹಣೆ ಹಾಗೂ ಅವುಗಳ ಕ್ರಮಬದ್ದತೆಯ ಪರಿಶೀಲನೆ<br>2) ವಿಭಾಗದ ಆಡಳಿತ ವಿಷಯಗಳ ನಿರ್ವಹಣೆ<br>3) ವಿಭಾಗದ ಕಾರ್ಯಗಳ ನಿರ್ವಹಣೆಯಲ್ಲಿ ಇತರ ಮೇಲಾಧಿಕಾರಿಗಳಿಗೆ ನೆರವು. |
| ಸಹಾಯಕ ಸಾಂಖ್ಯಿಕ ಅಧಿಕಾರಿ–3 | 1) ಶ್ರೀ ಎಸ್. ಅಪ್ಪಣ್ಣ<br>2) ಶ್ರೀಮತಿವಿಜಯಲಕ್ಷ್ಮಿ (ನಿಯೋಜನೆ ಮೇಲೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ).<br>3) ಖಾಲಿ | 1) ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ, ಪ್ರವಾಸೋದ್ಯಮ, ವಿಜ್ಞಾನ ಮತ್ತು ತಂತ್ರಜ್ಞಾನ, ಯುವಜನಸೇವಾ ಮತ್ತು ಕಾರ್ಮಿಕ, ಉನ್ನತ ಶಿಕ್ಷಣ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗಳಿಗೆ ಸಂಬಂಧಿಸಿದಂತೆ ಅಭಿಪ್ರಾಯ ಕಡತಗಳ ಪರಿಶೀಲನೆ/ನಿರ್ವಹಣೆ<br>2) ಮೇಲ್ಕಂಡ ಇಲಾಖೆಗಳಿಗೆ ಸಂಬಂಧಿಸಿದಂತೆ ಎಂಎಂಆರ್ ಸಭೆಗೆ ಮಾಹಿತಿ ಪರಿಶೀಲನೆ/ ನಿರ್ವಹಣೆ<br>3) ಮೇಲ್ಕಂಡ ಇಲಾಖೆಗಳಿಗೆ ಸಂಬಂಧಿಸಿದಂತೆ ಪಂಚವಾರ್ಷಿಕ ಯೋಜನೆ ಮತ್ತು ವಾರ್ಷಿಕ ಯೋಜನೆ ಕಾರ್ಯಕ್ರಮಗಳ ಮಾಹಿತಿ ಪರಿಶೀಲನೆ/ನಿರ್ವಹಣೆ<br>4) ಮೇಲ್ಕಂಡ ಇಲಾಖೆಗಳಿಗೆ ಸಂಬಂಧಿಸಿದಂತೆ ಆರ್ಥಿಕ ಸಮೀಕ್ಷೆಗೆ ಸಂಬಂಧ ಪಟ್ಟ ಮಾಹಿತಿಯನ್ನು ಪಡೆಯುವುದು. |
| ಶೀಘ್ರಲಿಪಿಗಾರರು–2 | 1) ಖಾಲಿ<br>2) ಖಾಲಿ | – |
| ಬೆರಳಚ್ಚುಗಾರರು–2 | 1)ಕುಮಾರಿ ಸ್ಹನಾ.ಎಸ್<br>2) ಖಾಲಿ | ವಿಭಾಗದ ಎಲ್ಲಾ ಬೆರಳಚ್ಚು ಕೆಲಸ ನಿರ್ವಹಿಸುವುದು. |
| ಸಹಾಯಕರು–1 | ಖಾಲಿ | – |
| ದಲಾಯತ್–2 | 1) ಶ್ರೀಮತಿ ಕೃಷ್ಣಬಾಯಿ<br>2) ಖಾಲಿ | 1) ಕಚೇರಿಯನ್ನು ಸ್ವಚ್ಛವಾಗಿಡುವುದು.<br>2) ಕಡತ ಹಾಗೂ ಟಪಾಲುಗಳನ್ನು ಇತರೆ ಇಲಾಖೆಗಳಿಗೆ/ಶಾಖೆಗಳಿಗೆ ವಿತರಿಸುವ ಕಾರ್ಯ ನಿರ್ವಹಿಸುವುದು.<br>3) ಸಚಿವಾಲಯ ಕೈಪಿಡಿ ಮೇರೆಗೆ ಇತರೆ ಕೆಲಸಗಳು. |

## ಜನಶಕ್ತಿ ಮತ್ತು ಉದ್ಯೋಗ ವಿಭಾಗದ ಸಿಬ್ಬಂದಿ ವಿವರ

| ವೃಂದ | ಒಟ್ಟು ಹುದ್ದೆಗಳು | ಭರ್ತಿಯಾದ ಹುದ್ದೆಗಳು | | | ಖಾಲಿ | ಪ.ಜಾ | | | ಪ.ಪಂ | | | ನಿವೃತ್ತಿ/ ಪದೋನ್ನತಿ |
|---|---|---|---|---|---|---|---|---|---|---|---|---|
| | | ಪು | ಮ | ಒ | | ಪು | ಮ | ಒ | ಪು | ಮ | ಒ | |
| ನಿರ್ದೇಶಕರು | 1 | – | – | – | 1 | – | – | – | – | – | – | – |
| ಉಪ ನಿರ್ದೇಶಕರು | 1 | – | – | – | 1 | – | – | – | – | – | – | – |
| ಸಹಾಯಕ ನಿರ್ದೇಶಕರು | 1 | 1 | – | 1 | – | – | – | – | – | – | – | – |
| ಸಹಾಯಕ ಸಾಂಖ್ಯಿಕ ಅಧಿಕಾರಿ–3 | 3 | 1 | 1* | 2 | 1 | – | – | – | – | – | – | – |
| ಶೀಘ್ರಲಿಪಿಗಾರರು–2 | 2 | – | – | – | 2 | – | – | – | – | – | – | – |
| ಬೆರಳಚ್ಚುಗಾರರು–2 | 2 | – | 1 | 1 | 1 | – | – | – | – | – | – | – |
| ಸಹಾಯಕರು–1 | 1 | – | – | – | 1 | – | – | – | – | – | – | – |
| ದಲಾಯತ್–2 | 2 | – | 1 | 1 | 1 | – | – | – | – | – | – | – |
| **ಒಟ್ಟು** | **13** | **2** | **3** | **5** | **8** | **–** | **–** | **–** | **–** | **–** | **–** | **–** |

* ಒಬ್ಬರು ಸಹಾಯಕ ಸಾಂಖ್ಯಿಕ ಅಧಿಕಾರಿ ಅನ್ಯ ಕರ್ತವ್ಯದ ಮೇರೆಗೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಣೆ.

## ಜನಶಕ್ತಿ ಮತ್ತು ಉದ್ಯೋಗ ವಿಭಾಗ
## ಸಂಸ್ಥಾಪಟ (Organisation Chart)



## 9. ಮಾನವ ಅಭಿವೃದ್ಧಿ ವಿಭಾಗ

- ಮಾನವ ಅಭಿವೃದ್ಧಿ ವಿಭಾಗವು ಯೋಜನಾ ಇಲಾಖೆಯ ಭಾಗವಾಗಿದ್ದು, ನಿಗದಿಪಡಿಸಿದ ಬಡತನ ಹಾಗೂ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಅಧಿಕೃತ ಮೂಲಗಳಾದ ಜನಗಣತಿ, ಎನ್‌ಎಸ್‌ಎಸ್‌ಓ, ಯೋಜನಾ ಆಯೋಗ, ರಾಷ್ಟ್ರೀಯ ಕುಟುಂಬ ಮತ್ತು ಆರೋಗ್ಯ ಸಮೀಕ್ಷೆ, ಜಿಲ್ಲಾ ಮಟ್ಟದ ಆರೋಗ್ಯ ಸಮೀಕ್ಷೆ, ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ವಿಶೇಷ ಸಮೀಕ್ಷೆಗಳು ಹಾಗೂ ವಿವಿಧ ವಿಭಾಗಗಳ ಮೂಲಗಳಿಂದ ನಿಯಮಿತವಾಗಿ ಕ್ರೋಢೀಕರಿಸುತ್ತದೆ.

- ಜಿಲ್ಲಾ ಮಾನವ ಅಭಿವೃದ್ಧಿ ವರದಿ ಪ್ರಗತಿ ಪರಿಶೀಲನೆಗೆ ಹಾಗೂ ಮಾರ್ಗದರ್ಶನ ನೀಡಲು ಗುಣಮಟ್ಟ ಮೇಲ್ವಿಚಾರಣಾ ತಂಡವನ್ನು ದಿನಾಂಕ: 19-08-2013 ರಂದು ರಚಿಸಲಾಗಿದೆ.

- ಒಂದೇ ಮಾದರಿಯ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳನ್ನು ತಯಾರಿಸಲು ಸಹಾಯವಾಗುವಂತೆ ಏಕರೂಪ ಸೂಚಿಗಳನ್ನೊಳಗೊಂಡ ಜಿಲ್ಲಾ ಮಾನವ ಅಭಿವೃದ್ಧಿ ವರದಿ ಸಮಗ್ರ ಮಾರ್ಗಸೂಚಿಯನ್ನು ತಯಾರಿಸಲಾಗಿದ್ದು, ದಿನಾಂಕ: 29-10-2013 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರು ಬಿಡುಗಡೆ ಮಾಡಿರುತ್ತಾರೆ.

- ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳ ಸೂಚ್ಯಂಕಗಳ ಮೌಲ್ಯೀಕರಣ ನಡೆಯುತ್ತಿದ್ದು, ಪ್ರಗತಿಯನ್ನು ಪರಿಶೀಲಿಸಲು ಮೂರು ದಿನಗಳ ಸಭೆಗಳನ್ನು ದಿನಾಂಕ 26-03-2014 ರಿಂದ ದಿನಾಂಕ: 28-03-2014 ವರೆಗೆ ಹಮ್ಮಿಕೊಳ್ಳಲಿದ್ದು, ಸದರಿ ಸಭೆಗಳಿಗೆ ಎಲ್ಲಾ ಜಿಲ್ಲೆಗಳ ಮುಖ್ಯ ಯೋಜನಾಧಿಕಾರಿಗಳು, ಲೀಡ್ ಏಜೆನ್ಸಿ ಪ್ರತಿನಿಧಿಗಳು ಮತ್ತು ಗುಣ ಮಟ್ಟ ಮೇಲ್ವಿಚಾರಣಾ ತಂಡದ ಸದಸ್ಯರುಗಳು ಭಾಗವಹಿಸಲಿದ್ದಾರೆ.

- ದಿನಾಂಕ: 29-03-2014 ರಂದು ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆ ಸಂಸ್ಥೆ, ಬೆಂಗಳೂರು ಇಲ್ಲಿ ರಾಜ್ಯ ಮಾನವ ಅಭಿವೃದ್ಧಿ ವರದಿಯ ತಯಾರಿಕೆಗಾಗಿ ಕಾರ್ಯಾಗಾರ ನಡೆಯಲಿದೆ.

- ಕರ್ನಾಟಕ ರಾಜ್ಯ ಆರ್ಥಿಕ ಸಮೀಕ್ಷೆ 2014-15ರ ಮಾನವ ಅಭಿವೃದ್ಧಿ ಅಧ್ಯಾಯವನ್ನು ವಿಭಾಗದಲ್ಲಿ ತಯಾರಿಸಲಾಗಿದೆ.

- ವಾರ್ಷಿಕ ಯೋಜನೆ 2014-15ರ ಬಡತನ ಹಾಗೂ ಮಾನವ ಅಭಿವೃದ್ಧಿ ಅಧ್ಯಾಯವನ್ನು ತಯಾರಿಸಲಾಗಿದೆ.

## 10. ಸಂಪೂರ್ಣ ಯೋಜನಾ ವಿಭಾಗ

ಸಂಪೂರ್ಣ ಯೋಜನಾ ವಿಭಾಗದ ಪ್ರಮುಖ ಕರ್ತವ್ಯವು ಮಧ್ಯಮ ಮತ್ತು ಧೀರ್ಘಾವಧಿ ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಪಟ್ಟಂತೆ ವಿಶ್ಲೇಷಣೆ, ನಿರ್ಧರಣೆ ಹಾಗೂ ಅಂದಾಜುಗಳ ಬಗ್ಗೆ ಯೋಜನೆ ತಯಾರಿಸುವುದಾಗಿರುತ್ತದೆ. ಈ ಯೋಜನೆಗಳ ಬಗ್ಗೆ ಕೈಗೊಂಡ ಪರಿಮಾಣ ಸಂಬಂಧಿ ಆಯಾಮಗಳಿಗೆ ವಿವಿಧ ಯೋಜನೆಯ ವಲಯಗಳ ನಡುವೆ ಹಾಗೂ ಅನೇಕ ಮ್ಯಾಕ್ರೋ ಆರ್ಥಿಕ ಅಂಶಗಳನ್ನು ಒಟ್ಟುಗೂಡಿಸಿ ದೃಡತೆ ನೀಡುವುದಾಗಿರುತ್ತದೆ.

### ಸಂಪೂರ್ಣ ಯೋಜನಾ ವಿಭಾಗದ ಕಾರ್ಯ ಚಟುವಟಿಕೆಗಳು:

ಅ) ಈ ವಿಭಾಗವು 2014-15ರ ವಾರ್ಷಿಕ ಯೋಜನೆಯನ್ನು ತಯಾರಿಸಲು ತನಗೆ ವಹಿಸಿದ ಇಲಾಖೆಗಳ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅವಶ್ಯ ಮಾಹಿತಿಗಳನ್ನು ಒದಗಿಸಿರುತ್ತದೆ. ಈ ವಿಭಾಗವು 2014-15ರ ವಾರ್ಷಿಕ ಯೋಜನೆಗಾಗಿ ಸದರಿ ಇಲಾಖೆಗಳ ಅಧ್ಯಾಯ ಮತ್ತುಅಂಕಿ ಅಂಶ ವಿವರಣಾ ಪಟ್ಟಿಗಳಿಗೆ ಅವಶ್ಯ ಮಾಹಿತಿಗಳನ್ನು ತಯಾರಿಸಿರುತ್ತದೆ.

ಆ) 'ಆರ್ಥಿಕ ಮೂಲಭೂತ ಸೌಕರ್ಯಗಳು' ಮತ್ತು 'ಸ್ವಾಭಾವಿಕ ಸಂಪನ್ಮೂಲಗಳು'

ಇ) ಈ ಅಧ್ಯಾಯಗಳನ್ನು ಆರ್ಥಿಕ ಸಮೀಕ್ಷೆ, 2013–14ರಲ್ಲಿ ಅಳವಡಿಸಲು ಈ ವಿಭಾಗವು ಸಹಕರಿಸುವ ಕಾರ್ಯ ನಿರ್ವಹಿಸಿರುತ್ತದೆ.

ಈ) ಇಂಧನ ಇಲಾಖೆಯ ಫಲಿತಾಂಶ ಚೌಕಟ್ಟು ದಾಖಲೆಯ ಪರಿಶೀಲನೆಗಾಗಿ ಪರಿಣಿತಿ ಗುಂಪಿನ ಸಭೆಗಳನ್ನು ನಡೆಸಲು ಈ ವಿಭಾಗವು ಸಹಕರಿಸಿರುತ್ತದೆ.

ಉ) ಸಂಪೂರ್ಣ ಯೋಜನಾ ವಿಭಾಗವು ನೋಡೆಲ್ ಇಲಾಖೆಗಳಾದ ಜಲಸಂಪನ್ಮೂಲ, ಕಾನೂನು,ಸಾರಿಗೆ, ಇಂಧನ ಮತ್ತು ಲೋಕೋಪಯೋಗಿ ಇಲಾಖೆಗಳ ಯೋಜನೆಗಳಿಗೆ ಸಂಬಂಧಿಸಿದ ಅಭಿಪ್ರಾಯ ಕಡತಗಳಿಗೆ ಹಾಗೂ ಸಚಿವ ಸಂಪುಟದ ಟಿಪ್ಪಣಿ ಕಡತಗಳಿಗೆ ಅಭಿಪ್ರಾಯ ಕೊಡಲಾಗಿರುತ್ತದೆ.

**ಈ ವಿಭಾಗವು ಈ ಕೆಳಕಂಡ ಇಲಾಖೆಗಳ ನೋಡಲ್ ವಿಭಾಗವಾಗಿರುತ್ತದೆ.**

1) ಜಲ ಸಂಪನ್ಮೂಲ ಇಲಾಖೆ: ಭಾರಿ ಮತ್ತು ಮಧ್ಯಮ ನೀರಾವರಿ, ಕಾಡಾ, ಸಣ್ಣ ನೀರಾವರಿ.

2) ಇಂಧನ ಇಲಾಖೆ: ಕರ್ನಾಟಕ ವಿದ್ಯುತ್ ನಿಗಮ ನಿಯಮಿತ,ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ಅಭಿವೃದ್ಧಿ ನಿಯಮಿತ, ನವೀಕರಿಸಬಹುದಾದ ಇಂಧನ ಅಭಿವೃದ್ದಿ ನಿಯಮಿತ.

3) ಸಾರಿಗೆ ಇಲಾಖೆ : ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಮತ್ತು ಬೆಂಗಳೂರು ಮಹಾನಗರ ರಸ್ತೆ ಸಾರಿಗೆ ಸಂಸ್ಥೆ.

4) ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ.

5) ಕಾನೂನು ಇಲಾಖೆ.

**ಸಂಪೂರ್ಣ ಯೋಜನಾ ವಿಭಾಗದ ಸಿಬ್ಬಂದಿ ವಿವರ (ದಿನಾಂಕ 31–03–2014):**

| ಗುಂಪು | ಒಟ್ಟು ಮಂಜೂರಾದ ಹುದ್ದೆಗಳು | ಭರ್ತಿ ಮಾಡಲ್ಪಟ್ಟ ಹುದ್ದೆಗಳು | | | ಪರಶಿಷ್ಟ ಜಾತಿ | | | ಪರಿಶಿಷ್ಟ ಪಂಗಡ | | | ಖಾಲಿ ಹುದ್ದೆ | ನಿವೃತ್ತಿ ಹೊಂದಲಿರುವವರು |
|---|---|---|---|---|---|---|---|---|---|---|---|---|
| | | ಪುರುಷ | ಮಹಿಳೆ | ಒಟ್ಟು | ಪು | ಮ | ಒಟ್ಟು | ಪು. | ಮ | ಒಟ್ಟು | | |
| ಎ | 3 | 2 | 1 | 3 | - | - | - | 1 | - | 1 | - | - |
| ಬಿ | 2 | - | - | - | - | - | - | - | - | - | 2 | - |
| ಸಿ | 5 | 1 | 2 | 3 | - | 1 | 1 | - | - | - | 2 | - |
| ಡಿ | 2 | - | - | - | - | - | - | - | - | - | 2 | - |
| **ಒಟ್ಟು** | **12** | **3** | **3** | **6** | **-** | **1** | **1** | **1** | **-** | **1** | **6** | **-** |

## 11. ವಿಶೇಷ ಕೋಶ

ಡಾ|| ಡಿ.ಎಂ.ನಂಜುಂಡಪ್ಪನವರ ವರದಿಯ ಶಿಫಾರಸ್ಸುಗಳ ಅನುಷ್ಠಾನದ ಉಸ್ತುವಾರಿಗಾಗಿ ದಿನಾಂಕ:14.10.2008 ರಚಿಸಲಾದ ಉನ್ನತಾಧಿಕಾರ ಸಮಿತಿಗೆ ಹಾಗೂ ಸರ್ಕಾರಕ್ಕೆ ಅಗತ್ಯವಾದ ಮಾಹಿತಿಯನ್ನು ಒದಗಿಸಲು ಯೋಜನಾ ಇಲಾಖೆಯಲ್ಲಿ ವಿಶೇಷ ಕೋಶವನ್ನು ರಚಿಸಲಾಗಿದೆ. ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ರಚಿಸಲಾಗಿದ್ದ, ಉನ್ನತಾಧಿಕಾರ ಸಮಿತಿಯ ಶಿಫಾರಸಿನಂತೆ ವಿಶೇಷ ಅಭಿವೃದ್ಧಿ ಯೋಜನೆಯ ಅನುಷ್ಠಾನವನ್ನು 2007–08ನೇ ಸಾಲಿನಿಂದ ಪ್ರಾರಂಭಿಸಲಾಗಿದೆ.

ವಿಶೇಷ ಕೋಶವು ಡಾ|| ನಂಜುಂಡಪ್ಪ ವರದಿಯಲ್ಲಿ ಗುರುತಿಸಲಾದ ರಾಜ್ಯದ ಹಿಂದುಳಿದ ಒಟ್ಟು 114 ತಾಲೂಕುಗಳಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸುವ ವಿವಿಧ ಇಲಾಖೆಗಳಿಂದ ಆರ್ಥಿಕ ಮತ್ತು ಭೌತಿಕ ಪ್ರಗತಿಯ ಮಾಹಿತಿಯನ್ನು ಕ್ರೋಢೀಕರಿಸಿ ಸರ್ಕಾರಕ್ಕೆ ಹಾಗೂ ಉನ್ನತಾಧಿಕಾರ ಸಮಿತಿಗೆ ಒದಗಿಸುತ್ತಿದೆ. ಈ ವಿಶೇಷ ಕೋಶಕ್ಕೆ ನೇಮಿಸಲಾದ ಸರ್ಕಾರದ ಜಂಟಿ ಕಾರ್ಯದರ್ಶಿಯವರು ಉನ್ನತಾಧಿಕಾರ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.

ವಿಶೇಷ ಅಭಿವೃದ್ಧಿ ಯೋಜನೆಯಡಿ ಸಾಧಿಸಲಾದ ಪ್ರಗತಿಯನ್ನು ನಿಯಮಿತವಾಗಿ ರಾಜ್ಯ/ಜಿಲ್ಲಾ ಮಟ್ಟದ ಕೆಡಿಪಿ ಸಭೆಗಳಲ್ಲಿ ಪರಿಶೀಲಿಸಲಾಗುತ್ತಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಸೂಚನೆಯಂತೆ ಸರ್ಕಾರಿ ಆದೇಶವನ್ನು ಹೊರಡಿಸಲಾಗಿದ್ದು, ಅದರಲ್ಲಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ನೋಡಲ್ ಅಧಿಕಾರಿಯಾಗಿ ಹಾಗೂ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನು ಹೆಚ್ಚುವರಿ ನೋಡಲ್ ಅಧಿಕಾರಿಯಾಗಿ ನೇಮಕ ಮಾಡಲಾಗಿದೆ.

2013–14ನೇ ಸಾಲಿನಲ್ಲಿ ನಿಗದಿಪಡಿಸಲಾದ ಅನುದಾನವನ್ನಾಧರಿಸಿ ಪ್ರತಿ ಅನುಷ್ಠಾನ ಇಲಾಖೆಗಳು ತಮ್ಮ ಇಲಾಖೆಯ ಕಾರ್ಯಕ್ರಮಗಳ ಅನುದಾನಕ್ಕೆ ತಾಲ್ಲೂಕುವಾರು ಕ್ರಿಯಾಯೋಜನೆಯನ್ನು ಯೋಜನಾ ಇಲಾಖೆಗೆ ಸಲ್ಲಿಸಿದ್ದು, ಅವುಗಳನ್ನು ವಿಶೇಷ ಕೋಶವು ಡಾ|| ನಂಜುಂಡಪ್ಪ ವರದಿ ಹಿನ್ನಲೆಯಲ್ಲಿ ಪರಿಶೀಲನೆ ಮಾಡಿ ಅನುಮೋದನೆ ನೀಡಲಾಗಿದೆ. ಹೀಗೆ ಅನುಮೋದಿಸಲಾದ ಕ್ರಿಯಾ ಯೋಜನೆಗಳನ್ನು ರಾಜ್ಯ ಮಟ್ಟದಲ್ಲಿ ಎಲ್ಲಾ ಅನುಷ್ಠಾನ ಇಲಾಖೆಗಳಿಗೆ ಕಳುಹಿಸಲಾಗಿದೆ.

ವಿಶೇಷ ಅಭಿವೃದ್ಧಿ ಯೋಜನೆಯಡಿ 2013–14ನೇ ಸಾಲಿನಲ್ಲಿ ರೂ.2925.60 ಕೋಟಿಗಳನ್ನು ಒದಗಿಸಲಾಗಿದ್ದು, ಅನುಷ್ಠಾನ ಇಲಾಖೆಗಳು ಒದಗಿಸಿರುವ ಪ್ರಗತಿ ವರದಿಯಂತೆ ಫೆಬ್ರವರಿ 2014 ಅಂತ್ಯದವರೆಗೆ ರೂ.1657.28 ಕೋಟಿಗಳ ವೆಚ್ಚವಾಗಿರುತ್ತದೆ.

## 12. ರಾಜ್ಯ ಯೋಜನಾ ಮಂಡಳಿ

ವಾರ್ಷಿಕ ಮತ್ತು ಪಂಚವಾರ್ಷಿಕ ಯೋಜನೆಗಳು, ಅಭಿವೃದ್ಧಿ ಕಾರ್ಯಕ್ರಮಗಳ/ಯೋಜನೆಗಳ ಸಿದ್ದತೆಗಳನ್ನು ಮಾಡಿಕೊಳ್ಳುವುದು ರಾಜ್ಯದ ಅದ್ಯತೆಯಾಗಿದ್ದು ಈ ಸಂಬಂಧವಾಗಿ ಸಲಹೆ ನೀಡಲು ರಾಜ್ಯ ಯೋಜನಾ ಮಂಡಳಿಯನ್ನು 1993ರಲ್ಲಿ ರಚಿಸಲಾಗಿರುತ್ತದೆ.

**ರಾಜ್ಯ ಯೋಜನಾ ಮಂಡಳಿಯ ಕಾರ್ಯರಚನೆ**

ಅಧ್ಯಕ್ಷರು
(ಮಾನ್ಯ ಮುಖ್ಯ ಮಂತ್ರಿಗಳು)

ಉಪಾಧ್ಯಕ್ಷರು
(ಸರ್ಕಾರದಿಂದ ನಾಮನಿರ್ದೇಶಿತ)

ಸದಸ್ಯರು | ಆಪ್ತಶಾಖೆ

ಅಧಿಕಾರಿ | ಅಧಿಕಾರೇತರ (ಸರ್ಕಾರದಿಂದ ನಾಮ ನಿರ್ದೇಶಿತ)

1. ಮಾನ್ಯ ಯೋಜನಾ ಸಚಿವರು
2. ಮುಖ್ಯ ಕಾರ್ಯದರ್ಶಿಗಳು
3. ಅಪರ ಮುಖ್ಯ ಕಾರ್ಯದರ್ಶಿಗಳು
4. ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು
5. ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ
6. ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಮತ್ತು ಪದನಿಮಿತ್ತ ಸದಸ್ಯ ಕಾಯದರ್ಶಿ, ರಾಜ್ಯ ಯೋಜನಾ ಮಂಡಳಿ
7. ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಆಪ್ತ ಕಾರ್ಯದರ್ಶಿ– 1
ಆಪ್ತ ಸಹಾಯಕರು– 4
ಕನ್ನಡ ಶೀಘ್ರಲಿಪಿಗಾರ 1
ಗ್ರೂಪ್ ಡಿ – 6
ವಾಹನ ಚಾಲಕರು – 3
ಸಂಶೋಧನಾ ಸಮಾಲೋಚಕರು – 2
ಕಂಪ್ಯೂಟರ್ ಪ್ರೋಗ್ರಾಮರ್ – 1

ಸಂಶೋಧನಾ ಸಮಾಲೋಚಕರು ಮತ್ತು ಅಪರ ಕಾರ್ಯದರ್ಶಿ

ಸಂಶೋಧಾನಾ ಸಮಾಲೋಚಕರು | ಆಪ್ತ ಸಹಾಯಕರು, ವಾಹನ ಚಾಲಕರು, ಗ್ರೂಪ್–ಡಿ | ಸಹಾಯಕ ಲೆಕ್ಕಾಧಿಕಾರಿ

**ಎಸ್–3 ಶಾಖೆಯ ಕಾರ್ಯರಚನೆ**

ಸಂಶೋಧನಾ ಸಮಾಲೋಚಕರು ಮತ್ತು ಅಪರ ಕಾರ್ಯದರ್ಶಿ

ಅಧೀನ ಕಾರ್ಯದರ್ಶಿ

ಆಪ್ತ ಸಹಾಯಕರು | ಶಾಖಾಧಿಕಾರಿ

1. ಹಿರಿಯ ಸಹಾಯಕರು –2
2. ಕಿರಿಯ ಸಹಾಯುಕರು –1
3. ಗ್ರೂಪ್ ಡಿ –1

## ರಾಜ್ಯ ಯೋಜನಾ ಮಂಡಳಿಯ ಪ್ರಕಾರ್ಯಗಳು

(i) ಪಂಚವಾರ್ಷಿಕ ಹಾಗೂ ವಾರ್ಷಿಕ ಯೋಜನೆಗಳ ತಯಾರಿಕೆ ಹಾಗೂ ಅವುಗಳ ಅನುಷ್ಠಾನದಲ್ಲಿ ಒಟ್ಟಾರೆ ಮಾರ್ಗದರ್ಶನ ನೀಡುವುದು

(ii) ಸ್ವಾಭಾವಿಕ ಮತ್ತು ಮಾನವ ಸಂಪನ್ಮೂಲಗಳ ಗರಿಷ್ಠ ಬಳಕೆಗಾಗಿ ನೀತಿಗಳನ್ನು ರೂಪಿಸಿ ಸಲಹೆ ನೀಡುವುದು.

(iii) ರಾಜ್ಯದಲ್ಲಿ ಪ್ರಾದೇಶಿಕ ಅಸಮತೋಲನವನ್ನು ತಗ್ಗಿಸುವಲ್ಲಿ ಸೂಕ್ತವಾದ ನೀತಿ ಹಾಗೂ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಸಲಹೆ ನೀಡುವುದು.

(iv) ಆರ್ಥಿಕ ಸುಧಾರಣಾ ಕಾರ್ಯಕ್ರಮಗಳಿಗೆ ಅನುಸಾರವಾಗಿ ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಬಂಡವಾಳ ಹೂಡಿಕೆ ಸ್ಥಿತಿ ಸುಧಾರಣೆಗೆ ಕ್ರಮಗಳ ಸಲಹೆ ಮಾಡುವುದು.

(v) ಯೋಜನೆಯಡಿ ಅಗತ್ಯವಿರುವ ಬಂಡವಾಳ ಮಟ್ಟ ಹಾಗೂ ಅದಕ್ಕೆ ಬೇಕಾದ ಸಂಪನ್ಮೂಲಗಳ ಹರಿವು – ಕುರಿತು ಸಲಹೆ ಮಾಡುವುದು

(vi) ರಾಷ್ಟ್ರೀಯ ಯೋಜನೆಯ ಚೌಕಟ್ಟಿನೊಳಗೆ ರಾಜ್ಯ ಯೋಜನೆಗೆ ಸೂಕ್ತವಾದ ಕಾರ್ಯತಂತ್ರಗಳ ಸಲಹೆ ಮಾಡುವುದು.

(vii) ಯೋಜನಾ ಕಾರ್ಯಕ್ರಮಗಳು: ಯೋಜನೆಗಳ ಕಾರ್ಯಗತಗೊಳಿಸುವಿಕೆ ಪರಿಶೀಲನೆ ಹಾಗೂ ಅವುಗಳ ಕಾರ್ಯಗತಕ್ಕಾಗಿ ಸೂಕ್ತ ಉಪಾಯಗಳನ್ನು ಶಿಫಾರಸು ಮಾಡುವುದು

(viii) ವಿಕೇಂದ್ರೀಕೃತ ಯೋಜನೆಯನ್ನು ಅಭಿವೃದ್ಧಿ ಪಡಿಸಲು ಕ್ರಮಗಳನ್ನು ಸೂಚಿಸುವುದು ಮತ್ತು ವಿಶೇಷವಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾರ್ಯಗತಗೊಳಿಸುವಿಕೆ ಹಾಗೂ ಈ ಯೋಜನೆಗಳನ್ನು ರಾಜ್ಯ ವಲಯಗಳಲ್ಲಿ ವಿಲೀನಗೊಳಿಸಲು ಕ್ರಮ ವಹಿಸುವ ಸಲುವಾಗಿ ಶಿಫಾರಸು ಮಾಡುವುದು

(ix) ಸರ್ಕಾರವು ಮಂಡಳಿಗೆ ಕಾಲಕಾಲಕ್ಕೆ ವಹಿಸುವ ವಿಷಯಗಳ ಬಗ್ಗೆ ಅಧ್ಯಯಿಸಿ ಸಲಹೆ ನೀಡುವುದು

(x) ಸರ್ಕಾರದ ಹೊರಗಿನಿಂದ ವಿಶ್ವವಿದ್ಯಾಲಯಗಳಲ್ಲಿ ಅಥವಾ ಇನ್ನಿತರ ಸಂಶೋಧನಾ ಸಂಸ್ಥೆಗಳಲ್ಲಿ ರಾಜ್ಯ ಯೋಜನಾ ಮಂಡಳಿಯ ಕೆಲಸ ಕಾರ್ಯಗಳಿಗೆ ಬೇಕಾದಂತಹ ಸಂಶೋಧನಾ ಅಧ್ಯಯನಗಳನ್ನು ಹಾಗೂ ವಿಚಾರ ಸಂಕಿರಣಗಳನ್ನು ಏರ್ಪಡಿಸುವುದು.

ಪ್ರಸುತ್ತ ರಾಜ್ಯ ಸರ್ಕಾರದ ಯೋಜನಾ ಮಂಡಳಿಯು ಪುನರ್ ರಚನೆಗೊಂಡಿರುವುದಿಲ್ಲ.

12ನೇ ಪಂಚವಾರ್ಷಿಕ ಯೋಜನೆಯ ಅಪ್ರೋಚ್ ಪೇಪರ್ ದಾಖಲೆಗಳಾದ, ಸೂಕ್ಷ್ಮಾತಿಸೂಕ್ಷ್ಮ ಆರ್ಥಿಕ ವಿಶ್ಲೇಷಣೆ, ಕೃಷಿ ವಲಯ, ಉತ್ಪಾದನಾ ವಲಯ, ಸೇವೆಗಳು, ಪ್ರವಾಸ, ಆತಿಥ್ಯ ಮತ್ತು ನಿರ್ಮಾಣ, ಆರೋಗ್ಯ ರಕ್ಷಣೆ, ಶಾಲಾ ಶಿಕ್ಷಣ, ಪ್ರೌಢ ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ, ಸಾಮಾಜಿಕ ಸಮಾನತೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ನೈಸರ್ಗಿಕ ಸಂಪನ್ಮೂಲಗಳ ಸೂಕ್ತ ನಿರ್ವಹಣೆ, ಗ್ರಾಮೀಣಾಭಿವೃದ್ಧಿ, ನಗರಾಭಿವೃದ್ಧಿ, ಇಂಧನ, ಸಾರಿಗೆ, ಆಡಳಿತ ಮತ್ತು ಅನ್ವೇಷಣೆ, ಸಂಪನ್ಮೂಲಗಳ ಹಂಚಿಕೆಗೆ ಸಂಬಂಧಪಟ್ಟಂತೆ ಮುಕ್ತಾಯಗೊಂಡಿರುತ್ತದೆ. ಈ ದಾಖಲೆಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ – (i) ಸೂಕ್ಷ್ಮಾತಿಸೂಕ್ಷ್ಮ ಚೌಕಟ್ಟು, (ii) ಆರ್ಥಿಕ ವಲಯ, (iii) ಸಾಮಾಜಿಕ ವಲಯ, (iv) ಮೂಲ ಸೌಕರ್ಯ ವಲಯ. ಈ ಸಂಪುಟಗಳು ಮುದ್ರಣವಾಗಬೇಕಿದೆ.

**ರಾಜ್ಯ ಯೋಜನಾ ಮಂಡಳಿಯಲ್ಲಿ ತೆಗೆದುಕೊಂಡಿರುವ ಸಂಶೋಧನಾ ಅಧ್ಯಯನಗಳ ಸ್ಥಿತಿ:**

| ಕ್ರ. ಸಂ. | ವಿಷಯ | ಸಂಸ್ಥೆ | ಷರಾ |
|---|---|---|---|
| 1. | ಕರ್ನಾಟಕದಲ್ಲಿ ಮಹಿಳೆಯರ ಸ್ಥಾನಮಾನದ ಬಗ್ಗೆ ಪ್ರಬಂಧ | ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ | ಮುಕ್ತಾಯಗೊಂಡಿದೆ |
| 2. | ವಲಸೆ, ಅನೌಪಚಾರಿಕ ಕೆಲಸ ಮತ್ತು ಕಲ್ಯಾಣ, ಕರ್ನಾಟಕದಲ್ಲಿನ ನಗರೀಕರಣದ ಹೀನಾವಸ್ಥೆ ಮೇಲಿನ ನೀತಿ, ಯಥಾರೂಪಣೆ ಮತ್ತು ಆಧ್ಯಯನ | ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ | ಮುಕ್ತಾಯಗೊಂಡಿದೆ |
| 3. | ಕರ್ನಾಟಕ ರಾಜ್ಯದಲ್ಲಿನ ಅಲ್ಪಸಂಖ್ಯಾತರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಬಗ್ಗೆ ತುಲನಾತ್ಮಕ ಅಧ್ಯಯನ | ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯುನಿವರ್ಸಿಟಿ(ಎನ್ ಎಲ್ ಎಸ್ ಐ ಯು) | ಪ್ರಗತಿಯಲ್ಲಿದೆ – ಸಂಸ್ಥೆಯು ಅಧ್ಯಯನದ ಪ್ರಾರಂಭಿಕ ವರದಿಯನ್ನು ಸಲ್ಲಿಸಿದೆ. |
| **ರಾಜ್ಯ ಯೋಜನಾ ಮಂಡಳಿಯಲ್ಲಿ ಕೈಗೊಳ್ಳಲಿರುವ ಅಧ್ಯಯನಗಳು** | | | |
| 1. | ಕರ್ನಾಟಕದಲ್ಲಿನ ಮಕ್ಕಳ ಸ್ಥಾನಮಾನದ ಬಗ್ಗೆ ಅಧ್ಯಯನ | ಕೆ.ಟಿ.ಟಿ.ಪಿ.ಕಾಯ್ದೆಯನ್ವಯ ಆರ್.ಎಫ್.ಪಿ.ಮತ್ತು ಟಿ. ಓ. ಆರ್.ನ್ನು ನಿಗಧಿತ ನಮೂನೆಯಲ್ಲಿ ತಯಾರಿಸಬೇಕಿದೆ | |
| 2. | ಸ್ವಸಹಾಯ ಗುಂಪುಗಳ ಸ್ಥಿತಿಗತಿಯ ಬಗ್ಗೆ ಅಧ್ಯಯನ | ಕೆ.ಟಿ.ಟಿ.ಪಿ.ಕಾಯ್ದೆಯನ್ವಯ ಆರ್.ಎಫ್.ಪಿ.ಮತ್ತು ಟಿ. ಓ. ಆರ್. ನ್ನು ನಿಗಧಿತ ನಮೂನೆಯಲ್ಲಿ ತಯಾರಿಸಬೇಕಿದೆ | |
| 3. | ಜಂಟಿ ಅರಣ್ಯ ನಿರ್ವಹಣಾ ಸಮಿತಿಯ ಪ್ರಭಾವದ ಮೇಲಿನ ಅಧ್ಯಯನ | ಅರಣ್ಯ ಇಲಾಖೆಯ ಅಧಿಕಾರಿಗಳೊಡನೆ ಸಮಾಲೋಚಿಸಿದ ನಂತರ ಕರಾರು ಒಪ್ಪಂದದ ಪತ್ರವನ್ನು ತಯಾರಿಸಲಾಗವುದು. | |
| 4. | ಎನ್ ಎಸ್ ಡಿ ಸಿ ಮತ್ತು ಸಿ ಐ ಐ ಸಂಸ್ಥೆಗಳಿಂದ ಕೈಗೊಳ್ಳಲಾದ ಕೌಶಲ್ಯ ಅಂತರದ ಮೌಲ್ಯಮಾಪನದ ಅಧ್ಯಯನ. | ಸಂಶೋಧನಾ ಸಮಾಲೋಚಕರು ಮತ್ತು ಅಪರ ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿ, ಇವರು ಸದರಿ ಅಧ್ಯಯನದಲ್ಲಿ ಮಾಡಿರುವ ಶಿಫಾರಸ್ಸುಗಳ ಬಗ್ಗೆ ರಾಜ್ಯ ಕೌಶಲ್ಯ ಸಮಿತಿಯ ಅಧಿಕಾರಿಗಳನ್ನು ಸಂಪರ್ಕಿಸಬೇಕಿದೆ | |
| 5. | ಕರ್ನಾಟಕದಲ್ಲಿನ ಪರಿಶಿಷ್ಠ ಪಂಗಡದ ಸ್ಥಾನಮಾನದ ಬಗ್ಗೆ ಅಧ್ಯಯನ | Grassroots Research And Advocacy Movement (GRAAM) ಸಂಸ್ಥೆಗೆ ಈ ಅಧ್ಯಯನ ವನ್ನು ವಹಿಸುವ ಸಲುವಾಗಿ KTTP.ಕಾಯ್ದೆಯ 4(g) ಅಡಿಯಲ್ಲಿ ವಿನಾಯಿತಿ ಪಡೆಯಲು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಿಕೊಡಲಾಗಿತ್ತು. ಆರ್ಥಿಕ ಇಲಾಖೆಯು ಈ ಪ್ರಸ್ತಾವನೆಯನ್ನು ಅನುಮೋದಿಸಿ ರುವುದಿಲ್ಲ. ಈ ಅಧ್ಯಯನವನ್ನು ಪ್ರಖ್ಯಾತ ಸಂಸ್ಥೆ ಅಥವಾ ಸಂಶೋಧನಾ ಸಂಸ್ಥೆಗೆ ವಹಿಸಲು RFP & TOR ಗಳನ್ನು KTTP.ಕಾಯ್ದೆಯಡಿ ನಿಗದಿತ ನಮೂನೆಯನ್ವಯ ಸಿದ್ದಪಡಿಸಬೇಕಾಗಿದೆ. | |

ರಾಜ್ಯ ಯೋಜನಾ ಮಂಡಳಿಯ ಸಂಶೋಧನಾ ಸಮಾಲೋಚಕರು ಮತ್ತು ಅಪರ ಕಾರ್ಯದರ್ಶಿಗಳು 2013–14ನೇ ಸಾಲಿನ ಕರ್ನಾಟಕ ಆರ್ಥಿಕ ಸಮೀಕ್ಷೆಯ ಸಮನ್ವಯಾಧಿಕಾರಿಗಳಾಗಿದ್ದರು. ದಿನಾಂಕ 14.02.2014 ರಂದು ಈ ದಾಖಲೆಯನ್ನು ವಿಧಾನ ಸಭೆ ಮತ್ತು ವಿಧಾನ ಪರಿಷತ್ ಗಳಲ್ಲಿ ಮಂಡಿಸಲಾಗಿರುತ್ತದೆ. ಪ್ರತಿಗಳನ್ನು ಇಲಾಖೆಗಳ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ, ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳಿಗೆ ಮತ್ತು ಇಲಾಖಾ ಮುಖ್ಯಸ್ಥರಿಗೆ ಕಳುಹಿಸಿಕೊಡಲಾಗಿದೆ. ಈ ದಾಖಲೆಯ ಸಾಫ್ಟ್ ಕಾಪಿಯನ್ನು ಯೋಜನಾ ಇಲಾಖೆಯ ಜಾಲತಾಣದಲ್ಲಿಯೂ (Website) ಅಳವಡಿಸಲಾಗಿದೆ. ಈ ದಾಖಲೆಯ C.D.ಯನ್ನು ಸಹ ಮಾಡಲಾಗಿದೆ. C.D.ಯನ್ನು ವಿಶ್ವವಿದ್ಯಾಲಯಗಳಿಗೆ ಮತ್ತು ಗ್ರಂಥಾಲಯಗಳಿಗೆ ಕಳುಹಿಸಿಕೊಡಲಾಗಿದೆ.

## 13. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಸಂಘ–ಸಂಸ್ಥೆಗಳ ನೋಂದಣಿ ಕಾಯ್ದೆ–1969 (Registration of Societies Act-1969) ರ ಅಡಿಯಲ್ಲಿ ಸೊಸೈಟಿ ಎಂದು 2011 ರಲ್ಲಿ ನೋಂದಾವಣಿಯಾಗಿದ್ದು. ಕರ್ನಾಟಕ ಸರ್ಕಾರದ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿದೆ.

**ದೃಷ್ಟಿಕೋನ:–**

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ರಾಜ್ಯ ಸರ್ಕಾರದ ಅಭಿವೃದ್ಧಿ ಯೋಜನೆಗಳ ಮೌಲ್ಯಮಾಪನವನ್ನು ಪಾರದರ್ಶಕವಾಗಿಯೂ ಪರಿಣಮಕಾರಿಯಾಗಿಯೂ ಮತ್ತು ಸಮರ್ಥವಾಗಿಯೂ ಕೈಗೊಳ್ಳುವ ಅಭ್ಯಾಸಗಳನ್ನು ಉತ್ತೇಜಿಸುವ ದೃಷ್ಟಿಕೋನ ಹೊಂದಿದೆ.

**ಧ್ಯೆಯೋದ್ದೇಶ**:

1) ರಾಜ್ಯದ ಯೋಜನೆಗಳ ಮೌಲ್ಯಮಾಪನಕ್ಕೆ ಸೂಕ್ತ ಗುಣಮಟ್ಟವನ್ನು ನಿಗದಿಗೊಳಿಸುವುದು,
2) ಸಾಂಸ್ಥಿಕ ಚೌಕಟ್ಟಿನೊಳಗೆ ಕಾಲಬದ್ಧ, ಉಪಯುಕ್ತ ಮತ್ತು ಉತ್ತರದಾಯಿತ್ವ ಮೌಲ್ಯಮಾಪನಗಳಿಗೆ ಅವಕಾಶ,
3) ಸ್ವಾಯತ್ತ ಮತ್ತು ಸಾರ್ವಜನಿಕ ಸೇವಾ ಸಂಸ್ಥೆಗಳ ಕ್ಷಮತೆಯನ್ನು ಬಲಗೊಳಿಸಿ, ಅವುಗಳು ಪರಿಣಾಮಕಾರಿ ಮೌಲ್ಯಮಾಪನಗಳನ್ನು ಮಾಡುವಂತೆ,
4) ಫಲಿತಾಂಶಗಳನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಸದ್ಬಳಕೆ ಮಾಡಿಕೊಳ್ಳುವ ಅನೌಪಚಾರಿಕ ನಿರ್ಧಾರ ಕೈಗೊಳ್ಳುವ ವಾತಾವರಣ ನಿರ್ಮಾಣ ಮಾಡುವುದು.

**2013–14ರಲ್ಲಿ ಮೌಲ್ಯಮಾಪನ ಪ್ರಾಧಿಕಾರದ ಚಟುವಟಿಕೆಗಳು**:

2013–14 ನೇ ಸಾಲಿನಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಈ ಕೆಳಗೆ ವಿವರಿಸಿರುವ ಚಟುವಟಿಕೆಗಳಿಗೆ ಚಾಲನೆ ನೀಡಿರುತ್ತದೆ.

**ಸಿಬ್ಬಂದಿ:**

ಒಬ್ಬ ಪೂರ್ಣಾವಧಿ ಮುಖ್ಯ ಮೌಲ್ಯಮಾಪನಾಧಿಕಾರಿ ಹಾಗೂ ಆಡಳಿತಾಧಿಕಾರಿಗಳು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಕರ್ತವ್ಯವನ್ನು ವಹಿಸಿಕೊಂಡಿರುತ್ತಾರೆ.ಇವರೊಂದಿಗೆ ಒಬ್ಬ ಲೆಕ್ಕಾಧಿಕಾರಿ ಹಾಗು ಇಬ್ಬರು ಸಮಾಲೊಚಕರನ್ನೂ ನೇಮಕಮಾಡಿಕೊಳ್ಳಲಾಗಿದೆ.ಈ ಕೆಳಗಿನ ಸಿಬ್ಬಂದಿ ವರ್ಗದವರನ್ನು ಹೊರಗುತ್ತಿಗೆಯ ಮೂಲಕ ತೆಗೆದುಕೊಳ್ಳಾಲಾಗಿದೆ.

1) ಮುಖ್ಯ ಮೌಲ್ಯಮಾಪನ ಅಧಿಕಾರಿಯವರ ಆಪ್ತ ಕಾರ್ಯದರ್ಶಿ ಒಂದು ಹುದ್ದೆ,
2) ಕಛೇರಿ ಸಹಾಯಕ ಒಂದು ಹುದ್ದೆ ಮತ್ತು
3) ಡಿ.ಟಿ.ಪಿ ಆಪರೇಟರ್ ಒಂದು ಹುದ್ದೆ.

ದಿನಾಂಕ 11–2–2014 ಆದೇಶ ಸಂಖ್ಯೆ PD 22 SME 2013 ರಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರ ಉದ್ಯೊಗಿಗಳ ನೇಮಕಾತಿ ಹಾಗೂ ಸೇವ ನಿಬಂಧನೆಗಳು, ನಿಯಮಗಳು 2013ನ್ನು ಹೊರಡಿಸಲಾಗಿದೆ. ಈ ಆದೇಶದಲ್ಲಿ ತಾಂತ್ರಿಕ ಆಡಳಿತ, ಲಿಪಿಕ ವರ್ಗ ಹಾಗೂ ಇತರೆ 40 ಹುದ್ದೆಗಳನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ ಮಂಜೂರು ಮಾಡಲಾಗಿರುತ್ತದೆ.

ಬಹುಮಹಡಿ ಕಟ್ಟಡದ 7ನೇ ಮಹಡಿಯಲ್ಲಿ ಯೋಜನ ಇಲಾಖೆಯ ಕಛೇರಿಗಳೊಂದಿಗೆ ಮೌಲ್ಯಮಾಪನ ಪ್ರಾಧಿಕಾರಕ್ಕೆ ಕಛೇರಿ ಸ್ಥಳವನ್ನು ನೀಡಿರುವುದರಿಂದ ಹಾಗೂ ಮೌಲ್ಯಮಾಪನ ಪ್ರಾಧಿಕಾರದ ಆಡಳಿತ ಮಂಡಳೀಯ ನಿರ್ಣಯದಂತೆ ಶಾಂತಿನಗರದಲ್ಲಿ ಪ್ರಾದಿಕಾರದ ಸ್ವತಂತ್ರ ಕಛೇರಿಯನ್ನು ಸ್ಥಾಪಿಸುವ ವಿಷಯವನ್ನು ಕೈಬಿಡಲಾಗಿದೆ.

ಈ ಕೆಳಗಿನ ನಾಲ್ಕು ಕೈಪಿಡಿಗಳನ್ನು ಮೌಲ್ಯಮಾಪನ ಪ್ರಾಧಿಕಾರದ ಆಡಳಿತ ಮಂಡಳಿಯ ಸಭೆಯಲ್ಲಿ ಅನುಮೋದಿಸಲಾಗಿದೆ.

1. Human Resources Manual
2. Output Grading Manual
3. Finance & Accounts Manual
4. Empanelment Manual.

## ಬಾಹ್ಯ ಮೌಲ್ಯಮಾಪನ ಅಧ್ಯಯನ (External Evaluation Studies):

ಈ ಕೆಳಕಂಡ 11 ಯೋಜನೆಗಳ ಬಾಹ್ಯ ಮೌಲ್ಯಮಾಪನವನ್ನು ಅಂತಿಮಗೊಳಿಸಲಾಗಿದ್ದ ಬಾಹ್ಯ ಮೌಲ್ಯಮಾಪಕರಿಗೆ ಈ ಕೆಳಗಿನಂತೆ ಯೋಜನೆಗಳನ್ನು ನೀಡಿದೆ.

## 1. TECKSOK

ಅ) ಸುವರ್ಣ ಗ್ರಾಮೋದಯ ಯೋಜನೆ

ಆ) ಮಧುವನ ಜೇನು ಕೃಷಿಯ ಯೋಜನೆ

ಇ) ಮತ್ಸ್ಯ ಮಹಿಳಾ ಯೋಜನೆ

ಈ) ಕರ್ನಾಟಕ ರಾಜ್ಯದಲ್ಲಿನ ಕರ್ನಾಟಕ ಒಂದು ಸಮೀಕೃತ ನಾಗರೀಕ ಸೇವ ಕೇಂದ್ರಗಳು.

## 2. Catalyst Management Services Pvt Ltd

ಅ) ಸುವರ್ಣ ಭೂಮಿ ಯೋಜನೆ

ಆ) ಸಾಂತ್ವನ ಯೋಜನೆಯ ಪರಿಣಾಮ ನಿರ್ಧರಣೆ

ಇ) ನಿರಾಶ್ರಿತರ ಕಾಟೆಜ್‌ಗಳು

ಈ) ಪರಿಹಾರ ಮತ್ತು ಉಳಿತಾಯ ಯೋಜನೆ

## 3. Centre for Symbiosis of Technology Environment & Management (STEM)

ಅ) ಕರ್ನಾಟಕದಲ್ಲಿ ತೈಲ ತಾಳೆಬೆಳೆ ಅಭಿವೃದ್ಧಿ ಕಾರ್ಯಕ್ರಮ

## 4. Rural Ecological & Agro Development Institute India

ಅ) 12ನೇ ಆರ್ಥಿಕ ಆಯೋಗದ ನಿಧಿಯಡಿಯಲ್ಲಿ ಐತಿಹಾಸಿಕ ಸ್ಮಾರಕಗಳು ಹಾಗೂ ಪ್ರಾಚ್ಯವಸ್ತುಸಂಗ್ರಹಾಲಯಗಳ ರಕ್ಷಣೆ ಬಗ್ಗೆ.

## 5. Centre for Sustainable Development

ಅ) ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ.

ಏಮ್‌ಪ್ಯಾನಲ್ಮೆಂಟ್ (Empanelment) ಕೈಪಿಡಿಯ ಆದೇಶವನ್ನು ಅಂತಿಮವಾಗಿ ಹೊರಡಿಸಿದ ನಂತರ ಬಾಹ್ಯ ಮೌಲ್ಯಮಾಪಕರನ್ನು ನೇಮಿಸಿಕೊಳ್ಳಲಾಗುವುದು.

**ಆಂತರಿಕ ಮೌಲ್ಯಮಾಪನ ಅಧ್ಯಯನಗಳಿಗೆ ಬೆಂಬಲ:–**

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಸರ್ಕಾರಿ ಇಲಾಖೆಗಳು ಮತ್ತು ಇತರ ಸಾರ್ವಜನಿಕ ಸಂಸ್ಥೆಗಳಿಗೆ ಆಂತರಿಕ ಮೌಲ್ಯಮಾಪನಕ್ಕಾಗಿ ತಾಂತ್ರಿಕ ಬೆಂಬಲವನ್ನು ಉಲ್ಲೇಖ ನಿಬಂಧನೆ(ToR)ಗಳಿಗೆ ಮಂಜೂರಾತಿ ನೀಡುವುದು, ಕರಡು ಮೌಲ್ಯಮಾಪನ ವರದಿಗಳನ್ನು ವಿಮರ್ಶಿಸಿ ಒಪ್ಪಿಗೆ ನೀಡುವುದು, ಅಂತಿಮ ಮೌಲ್ಯಮಾಪನ ವರದಿಗಳ ಮೇಲೆ ತೆಗೆದುಕೊಳ್ಳಬಹುದಾದ ಕ್ರಮಗಳ ಕುರಿತು ಸಲಹೆ ಸೂಚನೆಗಳನ್ನು ನೀಡುವುದು, ಕ್ರಮ ಕೈಗೊಂಡ ವರದಿ (Action Taken Reprot-ATR) ಗಳ ವಿಮರ್ಶೆ ಮೊದಲಾದ ಕಾರ್ಯಗಳಿಗೆ ಆಂತರಿಕ ಮೌಲ್ಯಮಾಪನ ಅಧ್ಯಯನಗಳನ್ನು ಕೈಗೊಳ್ಳಲು ಅಗತ್ಯವಿರುವ ಅವಕಾಶಗಳನ್ನು ಮೌಲ್ಯಮಾಪನ ಪ್ರಾಧಿಕಾರ ನೀಡುತ್ತದೆ. ವರದಿಯ ವರ್ಷದಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಈ ಕೆಳಕಂಡ ಅಧ್ಯಯನಗಳನ್ನು ಕೈಗೊಳ್ಳುವಲ್ಲಿ ಸಹಾಯ ಮಾಡಿದೆ. ಈ ವರ್ಷದಲ್ಲಿ 9 ಸರಕಾರಿ ಇಲಾಖೆಗಳ 27 ಉಲ್ಲೇಖನಿಭಂದನೆ (T.o.R)ಹಾಗೂ 5 ಕಾರ್ಯಯೋಜನೆಗಳನ್ನು ಅನುಮೋದಿಸಿದೆ. 3 ಕರಡು ವರದಿಗಳನ್ನು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ತಾಂತ್ರಿಕ ಸಮಿತಿಯು ಪರಾಮರ್ಶಿಸಿದೆ.

ಸರ್ಕಾರಿ ಇಲಾಖೆಗಳ ಮತ್ತು ಇತರೆ ಸಾರ್ವಜನಿಕ ಸಂಸ್ಥೆಗಳ ಆಂತರಿಕ ಮೌಲ್ಯಮಾಪನಕ್ಕಾಗಿ ಉಲ್ಲೇಖ ನಿಭಂದನೆ (ToR)ಗಳಿಗೆ ನೀಡಲಾಗಿರುವ ಅನುಮೋದನೆ ಬಗ್ಗೆ:–

| ಕ್ರ ಸಂ | ಇಲಾಖೆಯ ಹೆಸರು | ಮೌಲ್ಯಮಾಪನಕ್ಕಾಗಿ ತೆಗೆದುಕೊಂಡ ಯೋಜನೆ/ಕಾರ್ಯಕ್ರಮ | ಯೋಜನೆಗೆ ಸಂಬಂಧಿಸಿದ ಇಲಾಖಾ ನೋಡಲ್ ಅಧಿಕಾರಿ | ಉಲ್ಲೆಖ ನಿಭಂಧನೆ ಅನುಮೋದಿಸಿದ ದಿನಾಂಕ |
|---|---|---|---|---|
| 1 | ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃಧ್ದಿ ನಿಗಮ ನಿಯಮಿತ. | ಕರ್ನಾಟಕ ಜವಳಿ ಮೂಲ ಸೌಲಭ್ಯ, ನಿಗಮದ ಕಾರ್ಯನಿರ್ವಣೆ ಬಗ್ಗೆ. | ವಿ.ಲಕ್ಷ್ಮಣ್ ದೂ.ಸಂಖೆ. 953571506 | 30-12-2013 |
| 2 | ಮೈಸೂರು ವಿದ್ಯುತ್‌ಶಕ್ತಿ ಕಾರ್ಖಾನೆ. | ಮೈಸೂರು ವಿದ್ಯುತ್‌ಶಕ್ತಿ ಕಾರ್ಖಾನೆ ನಿಯಮಿತದ ಕಾರ್ಯಚರಣೆ ಮೌಲ್ಯಮಾಪನ. | ಎಮ್.ಶ್ರೀನಾಥ್, 9448374819 | 30-12-2013 |
| 3 | ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳು. | ಗೋತಳಿ ಸಂರಕ್ಷಣಾ ಯೋಜನೆ. | ಇಲಾಖಾ ಉಪ ನಿರ್ದೇಶಕರು | 5-02-2013 |
| 4 | ಹಾಸನ ವಿದ್ಯುಶಕ್ತಿ ಸರಬರಾಜು ಕಂಪನಿ. HESCOM | ಹಾಸನ ವಿದ್ಯುಶಕ್ತಿ ಸರಬರಾಜು ಕಂಪನಿಯ ಕಾರ್ಯ ಚರಣೆಯ ಮೌಲ್ಯಮಾಪನ. | ವ್ಯವಸ್ಥಾಪಕರು (ತಾಂತ್ರಿಕ) | 06-11-2013 |
| 5 | ಕರ್ನಾಟಕ ರಸ್ತೆ ಅಭಿವೃಧ್ದಿ ನಿಗಮ ನಿಯಮಿತ | ಕರ್ನಾಟಕ ರಸ್ತೆ ಅಭಿವೃಧ್ದಿ ನಿಗಮದ ಕಾರ್ಯಚರಣೆಯ ಬಗ್ಗೆ ಮೌಲ್ಯಮಾಪನ. | ರಾಜೇಶ್ವರಿ ಎಲ್, ಉಪ ಕಾರ್ಯದರ್ಶಿ 22340604 | 10-12-2013 |
| 6 | ಗ್ರಾಮೀಣ ಅಭಿವೃಧ್ದಿ ಪಂಚಾಯತ್ ರಾಜ್ ಇಲಾಖೆ | ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃಧ್ದಿ ಮಂಡಳಿಯ ಕಾರ್ಯಚರಣೆ ಮೌಲ್ಯಮಾಪನ. | ಬಸವರಾಜ್ ತಾಂತ್ರಿಕ ಅಧಿಕಾರಿ– 9448511911 | 15-02-2014 |
| 7 | ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಸೌಲಭ್ಯಗಳು | ಕರ್ನಾಟಕ ಹಾಲು ಮಾರಾಟ federation ನೋಂದಣಿಯಾಗಿರುವ ಸಹಕಾರ ಸಂಘಗಳಿಗೆ ಹಾಲು ಸಹಾಯ ಧನ ನೀಡುವ ಬಗ್ಗೆ. | ಡಾ. ಎಸ್. ಉಡುಪ ಸಹಾಯ ನಿರ್ದೇಶಕರು | 15-03-2014 |
| 8 | ಲಿಡ್‌ಕರ್ | ಕರ್ನಾಟಕ ರಾಜ್ಯದ ಪರಿಶಿಷ್ಠ ಜಾತಿ ಹಾಗು ಪರಿಶಿಷ್ಠ ಪಂಗಡದವರ ಚರ್ಮ, ಕೈಗಾರಿಕೆ ಕರಕುಶಲ ಕರ್ಮಿಗಳ ಕಾರ್ಯಚರಣೆಯ ಮೌಲ್ಯಮಾಪನ. | ಶ್ರೀ.ಕೆ.ತಿಪ್ಪೇಸ್ವಾಮಿ ಮುಖ್ಯ ವ್ಯವಸ್ಥಾಪಕರು ಆಡಳಿತ ಮತ್ತು ವಾಣಿಜ್ಯ | 26-03-2014 |
| 9 | ಮೈಶುಗರ್ ಕಂಪನಿ | ಮೈಶುಗರ್ ಕಂಪನಿಯ ಕಾರ್ಯಚರಣೆಯ ಮೌಲ್ಯಮಾಪನದ ಬಗ್ಗೆ. | ಜಿ.ಎಸ್.ಶಂಕರ್ | 18-03-2014 |

**ಅಂತಿಮಗೊಳಿಸಲು ಬಾಕಿಯಿರುವ ಉಲ್ಲೇಖ ನಿಭಂಧನೆ (ToR)ಗಳು:–**

1. ಎನ್.ಜಿ.ಇ.ಎಫ್ (ಹುಬ್ಬಳ್ಳಿ)ನಿಗಮ.
2. ಗುಲಬರ್ಗಾ ವಿದ್ಯುಶಕ್ತಿ ಸರಬರಾಜು ನಿಗಮ.
3. ಕೃಷ್ಣ ಭಾಗ್ಯ ಜಲ ನಿಗಮ.
4. ಕರ್ನಾಟಕ ಕುರಿ ಹಾಗು ಉಣ್ಣೆ ಅಭೀವೃಧ್ದಿ ನಿಗಮ ನಿಯಮಿತ.
5. ಕರ್ನಾಟಕ ಅಲ್ಪಸಂಖ್ಯಾತ ಅಭೀವೃಧ್ದಿ ನಿಗಮ ನಿಯಮಿತ.
6. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ.
7. ಕೇಂದ್ರ ಗ್ರಾಮೀಣ ವೇರ್ ಹೌಸಿಂಗ್ ಯೋಜನೆಯಡಿ ಗ್ರಾಮೀಣ ವೇರ್ ಹೌಸಿಂಗ್ ನಿಗಮದ ಮೌಲ್ಯಮಾಪನ.
8. ತಾಲೂಕು/ಗ್ರಾಮಗಳಿಂದ ಗ್ರಾಮಗಳ ಸಗಟು ಮಳಿಗೆಗಳಿಂದ ನಗರದ ನ್ಯಾಯ ಬೆಲೆ ಅಂಗಡಿಗಳಿಗೆ ಆಹಾರ ಧಾನ್ಯದ ಸಾಗಾಣೆಯ ಕುರಿತಂತೆ ಮೌಲ್ಯಮಾಪನ.
9. ಕೇಂದ್ರ ಪರಿಷ್ಕೃತ **JNNURM** ನ ಕಾರ್ಯಕ್ರಮಗಳ ಮೌಲ್ಯಮಾಪನ.

10. ಅಟಲ್‌ಜಿ ಜನಸ್ನೇಹಿ ಕೇಂದ್ರ ಯೋಜನೆಗಳ ಕಾರ್ಯಚರಣೆ ಮತ್ತು ಕಾರ್ಯ ವಿಧಾನಗಳ ಮೌಲ್ಯಮಾಪನ.

ಇವೆಲ್ಲವುಗಳ ಜೊತೆಗೆ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು ಸರ್ಕಾರದ ಇಲಾಖೆಗಳು/ಸಾರ್ವಜನಿಕ ಸಂಸ್ಥೆಗಳು, ಅವುಗಳ ಕಾರ್ಯಕ್ರಮಗಳು, ನೀತಿ–ನಿಯಮ ಮತ್ತು ಚಟುವಟಿಕೆಗಳನ್ನು ಕುರಿತು ಸಮಗ್ರ ಮಾಹಿತಿ ಕಲೆಹಾಕಿ (inventorization) ವಿಷಯ ಸಂಗ್ರಹನಾ ಕಾರ್ಯವನ್ನು ಕೈಗೋಳ್ಳಲು ಮೆ: ಟೆಕ್ ಸಾಕ್ (M/s Tecsok) ಸಂಸ್ಥೆಗೆ ವಹಿಸಿಕೊಟ್ಟಿದೆ.

25 ಇಲಾಖೆಗಳ ವಿವರಣ ಪಟ್ಟಿಗಳನ್ನು ಟೆಕ್ ಸಾಕ್ ನಿಂದ ಪೂರ್ಣಗೊಳಿಸಿದೆ. ಉಳಿದ 35 ಇಲಾಖೆಗಳ ವಿವರಣ ಪಟ್ಟಿಗಳನ್ನು ಮೌಲ್ಯಮಾಪನ ಪ್ರಾಧಿಕಾರದಿಂದ ಮಾಡಲಾಗುತ್ತಿದೆ.

**ಮಾನವ ಅಭಿವೃದ್ಧಿ ವಿಭಾಗ ಮತ್ತು ರಾಜ್ಯ ಯೋಜನಾ ಮಂಡಳಿಗೆ ಬೆಂಬಲ:–**

ಮಾನವ ಅಭಿವೃದ್ಧಿ ವಿಭಾಗದಲ್ಲಿ ಕೈಗೊಳ್ಳಲಾಗುತ್ತಿರುವ ಕಾರ್ಯಕ್ಕೆ ಬೆಂಬಲ ನೀಡುವುದನ್ನು ಮುಂದುವರಿಸಿದೆ. ಜಿಲ್ಲೆ ಮತ್ತು ರಾಜ್ಯ ಮಾನವ ಅಭಿವೃದ್ಧಿ ವಿಭಾಗವು ಕೈಗೊಂಡ ಚಟುವಟಿಕೆಗಳ ವಿವರಗಳನ್ನು ಮಾನವ ಅಭಿದೃದ್ಧಿ ವಿಭಾಗದ ಅಧ್ಯಾಯದಲ್ಲಿ ಕಾಣಬಹುದಾಗಿದೆ.

**ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಸಾಮರ್ಥ್ಯ ವೃದ್ಧಿ ಚಟುವಟಿಕೆಗಳು:–**

ಪ್ರಾಧಿಕಾರವು ಮೊಟ್ಟ ಮೊದಲ ಬಾರಿಗೆ 5 ದಿವಸಗಳ ಅವಧಿಯ ಅಲ್ಪಾವಧಿ ತರಭೇತಿ ಕಾರ್ಯಗಾರವನ್ನು 16–4–2013 ರಿಂದ 20–4–2013 ರ ವರೆಗೆ ಹಮ್ಮಿಕೊಂಡಿತ್ತು. ವಿವಿಧ ಇಲಾಖೆಗಳ 250 ಅಧಿಕಾರಿಗಳು ಈ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಈ ತರಬೇತಿಯಲ್ಲಿ ಭಾಗವಹಿಸಿದ ಶಿಬಿರಾರ್ಥಿಗಳಿಂದ ಪಡೆಯಲಾದ ಮಾಹಿತಿಯನ್ನು ಆಧರಿಸಿ ಮುಂದಿನ ತರಬೇತಿ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಲಾಗುತ್ತಿದೆ.

**ನಡೆಸಿದ ಸಭೆಗಳು:–**

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ 2013–14 ನೇ ಸಾಲಿನ ಲೆಕ್ಕ ತಪಾಸಣೆ ಆದ ನಂತರ 3 ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ಕರೆಯಲಾಗುವುದು.

4 ನೇ ಆಡಳಿತ ಮಂಡಳಿ ಸಭೆಯು ದಿನಾಂಕ 13–11–2013 ರಂದು ಹಾಗು 24–3–2014 ರಂದು ಜರುಗಿರುತ್ತದೆ 5 ನೇ ಆಡಳಿತ ಮಂಡಳಿಯ ಸಭೆಯಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ 4 ಕೈಪಿಡಿಗಳನ್ನು ಅನುಮೋದಿಸಲಾಗಿದೆ.

1) Human Resources Manual
2) Finance & Accounting Manual
3) Empanelment Manual
4) Output Grading Manual.

2013–14 ರ ಸಾಲಿನಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರಕ್ಕೆ 325.00 ಲಕ್ಷ ರೂ.ಗಳ ಆಯವ್ಯಯ ಅನುದಾನವನ್ನು ಒದಗಿಸಲಾಗಿತ್ತು. ಪ್ರಾಧಿಕಾರದ ಶೇಕಡ, 75 ರಷ್ಟು ಅನುದಾನ ಬಳಕೆ ಯಾಗದ ಕಾರಣ 2013–14 ನೇ ಸಾಲಿನಲ್ಲಿ ಆಯವ್ಯಯದ ಹಣ ಸೆಳೆದಿರುವದಿಲ್ಲ.

**2013–14 ರ ಸಾಲಿನಲ್ಲಿ ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಆದಾಯ ಮತ್ತು ವೆಚ್ಚದ ಪಕ್ಷಿ ನೋಟ.**

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ವಿವರಗಳು | ಮೊತ್ತ |
|---|---|---|
| | 01–4–2013 ರಲ್ಲಿದಂತೆ ಪ್ರಾರಂಭಿಕ ಶಿಲ್ಕು | **737.63** |
| | **ಆದಾಯ** | |
| 1 | ಮಾನವ ಸಂಪನ್ಮೂಲ ಅಭಿವೃದ್ಧಿ ಅಧ್ಯಯನ ವೆಚ್ಚವೆಂದು ಯುಎನ್‌ಡಿಪಿ ಯಿಂದ ಬಂದ ಹಣ | **57.36** |
| 2 | ಮೌಲ್ಯಮಾಪನ ಠೇವಣಿ (ತೋಟಗಾರಿಕೆ ಇಲಾಖೆಯಿಂದ) | **8.50** |
| 3 | ಉಳಿತಾಯ ಖಾತೆಯ ಮೇಲೆ ಆಕರಿಸಲಾದ ಬಡ್ಡಿ | **25.09** |
| 4 | ಇರತೆ ಆದಾಯ | **2.20** |
| 5 | ಸಹಾಯಾನುದಾನ ಎರಡನೇ ಕಂತು ಪಿಪಿಎಂಎಸ್‌ಡಿ ಯಿಂದ (ತಡವಾಗಿ ದಿನಾಂಕ: 08–04–2013 ರಲ್ಲಿ ಸ್ವೀಕೃತ) | **250.00** |
| | **ಒಟ್ಟು** | **343.15** |

| | | |
|---|---|---|
| | **ವೆಚ್ಚ** | |
| 1 | ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಸಿಬ್ಬಂದಿಯ ವೇತನ ಮತ್ತು ಆಡಳಿತ ವೆಚ್ಚ | **62.84** |
| 2 | ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಅಧ್ಯಯನ ಮತ್ತು ತರಬೇತಿ | **59.21** |
| 3 | ಮಾನವ ಅಭಿವೃದ್ಧಿ ಅಧ್ಯಯನ ವಿಭಾಗದ ಬೆಂಬಲಿತ ಕಾರ್ಯಕ್ಕೆ | **120.86** |
| 4 | ಎಸ್ ಪಿಬಿ ಅಧ್ಯಯನ | **2.70** |
| | **ಒಟ್ಟು** | **245.61** |
| | ಅಂತಿಮ ಶಿಲ್ಕು (2013–14 ರ ಕೊನೆಯಲ್ಲಿದಂತೆ) | **835.17** |

ಬೆಂಗಳೂರಿನ ಮೆ: ಎಚ್. ಆರ್. ಸುರೇಶ್ & ಕೊ, ಮತ್ತು ಕಂಪನಿಯವರು ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ 20–12–2013 ಸಾಲಿನ ಆದಾಯ ಮತ್ತು ವೆಚ್ಚದ ತ:ಖ್ತೆಗಳನ್ನು ಕಾನೂನು ಬದ್ಧವಾಗಿ ಲೆಕ್ಕಪರಿಶೋಧನೆ ಮಾಡಿದ್ದಾರೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ವಾರ್ಷಿಕ ವರದಿ ಮತ್ತು ಪರಿಶೋಧಿತ ಲೆಕ್ಕ ವರದಿಗಳನ್ನು ಸಹಕಾರ ಸಂಘಗಳ ರಿಜಿಸ್ಟ್ರಾರ್‌ರವರಿಗೆ ಸಲ್ಲಿಸಲಾಗಿದೆ. ವರದಿಯ ವರ್ಷದಲ್ಲಿ ಬೇರಾವುದೇ ಲೆಕ್ಕಪರಿಶೋಧನೆ ನಡೆದಿಲ್ಲ. ಪ್ರಾಧಿಕಾರದ 2013–14ನೇ ಸಾಲಿನ ಲೆಕ್ಕ ಪತ್ರಗಳನ್ನು ಇನ್ನು ಮುಂದೆ ಲೆಕ್ಕಪರಿಶೋಧನೆಗೆ ಒಳಪಡಿಸಲಾಗುವುದು.

## 14. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ

**ದೂರದೃಷ್ಟಿ:**

ಮಾಹಿತಿ ಸಂಗ್ರಹಣೆ, ವಿಶ್ಲೇಷಣೆ ಹಾಗೂ ಪ್ರಸಾರದ ಸಮಂಜಸ ಹಾಗೂ ಸುಬದ್ಧತೆಯ ಪದ್ಧತಿಯನ್ನು ಅಭಿವೃದ್ಧಿಪಡಿಸುವುದು ಮತ್ತು ರಾಷ್ಟ್ರೀಯ ಮಟ್ಟದಿಂದ ಹಿಡಿದು ಉಪ ಜಿಲ್ಲಾ ಮಟ್ಟದವರೆವಿಗಿನ ಎಲ್ಲಾ ದಂತ್ತಾಂಶಗಳನ್ನುಅವಶ್ಯಕತೆಗಳಿಗನುಗುಣವಾಗಿ ಹಾಗೂ ಸದರಿ ದಂತ್ತಾಂಶವು ಎಲ್ಲಾ ಕಾಲಾವಧಿಗಳಿಗೆ ಹೊಲಿಕೆಯಾಗುವುದನ್ನು ದೃಢಪಡಿಸಿಕೊಳ್ಳುವುದು.

**ನಿರ್ದಿಷ್ಟಪಡಿಸಿದ ಗುರಿ:**

ರಾಜ್ಯದ ಸಾಂಖ್ಯಿಕ ವ್ಯವಸ್ಥೆಯನ್ನು ಅಭಿವೃದ್ಧಿ, ನಿಯಂತ್ರಣ ಮತ್ತು ಸರ್ಕಾರದ ಸೇವಾ ಪ್ರಕಾರ್ಯಗಳಲ್ಲಿ ಸಾಧನವಾಗುವಂತೆ ಮಾಡುವುದು. ತನ್ಮೂಲಕ ರಾಜ್ಯದ ಒಳಗೂ ಹಾಗೂ ಹೊರಗೂ ಉಪಯೋಗಿಸುವ ಅಂಕಿ ಅಂಶಗಳಲ್ಲಿ ವಿಶ್ವಾಸಾರ್ಹತೆ, ಸಮಗ್ರತೆ/ಪರಿಪೂರ್ಣತೆಯನ್ನು ಹೆಚ್ಚಿಸುವುದು ಮತ್ತು ನಿಗದಿತ ಸಮಯದೊಳಗೆ ಒದಗಿಸುವ ಕ್ರಮಕೈಗೊಳ್ಳುವುದು.

**ಉದ್ದೇಶ**

ಸರ್ಕಾರದ ಒಳಗೂ ಹಾಗೂ ಹೊರಗೂ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುವ, ಸಂಶೋಧನೆಯನ್ನು ಪ್ರೇರೇಪಿಸುವ ಹಾಗೂ ಜನಜೀವನಕ್ಕೆ ಸಂಬಂಧಿಸಿದ ಸ್ಥಿತಿಗತಿಗಳ ಕುರಿತು ಚರ್ಚೆಯನ್ನು ಪ್ರಚೋದಿಸುವ ವಿಶ್ವಾಸಾರ್ಹ, ನಂಬಲರ್ಹ ಹಾಗೂ ಕಾಲಮಿತಿಯ ಸಾಮಾಜಿಕ ಮತ್ತು ಆರ್ಥಿಕ ಅಂಕಿ ಅಂಶಗಳನ್ನು ವ್ಯವಸ್ಥಿತವಾಗಿ ಒದಗಿಸುವುದು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಉದ್ದೇಶವಾಗಿದೆ.

**ಇಲಾಖೆಯ ಕಾರ್ಯವ್ಯವಸ್ಥೆ**

ಕರ್ನಾಟಕದಲ್ಲಿ ಸಾಂಖ್ಯಿಕ ವ್ಯವಸ್ಥೆಯು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಮತ್ತು ಸರ್ಕಾರದ ವಿವಿಧ ಇಲಾಖೆಗಳ ಸಾಂಖ್ಯಿಕ ವಿಭಾಗಗಳನ್ನೊಳಗೊಂಡಿರುತ್ತದೆ. ನಿರ್ದೇಶನಾಲಯದ ಕೇಂದ್ರ ಕಛೇರಿಯು ಬೆಂಗಳೂರಿನಲ್ಲಿದ್ದು, ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ. ಆಡಳಿತಾತ್ಮಕ ಅನುಕೂಲಕ್ಕಾಗಿ ನಿರ್ದೇಶನಾಲಯದ ಕಾರ್ಯ ನಿರ್ವಹಿಸಲು ಜಂಟಿ ನಿರ್ದೇಶಕರ ನೇತೃತ್ವದಲ್ಲಿ 6 ತಾಂತ್ರಿಕ ವಿಭಾಗಗಳಿದ್ದು, ಆಡಳಿತ ಮತ್ತು ಲೆಕ್ಕ ಶಾಖೆಯಲ್ಲಿ ಪ್ರತ್ಯೇಕ ವಿಭಾಗವಿರುತ್ತದೆ. ಈ ವಿಭಾಗವನ್ನು ಜಂಟಿ ನಿರ್ದೇಶಕರು(ಆಡಳಿತಾಧಿಕಾರಿಗಳು) ಕಾರ್ಯನಿರ್ವಹಿಸ್ಮತ್ತಿರುತ್ತಾರೆ.

**ತಾಂತ್ರಿಕ ವಿಭಾಗಗಳು :**

1. ಕೃಷಿ ಅಂಕಿ ಅಂಶಗಳ ವಿಭಾಗ (ಎಜಿಎಸ್)
2. ಬೆಳೆ ವಿಮಾ ವಿಭಾಗ (ಸಿಐಎಸ್)
3. ಕೃಷಿ ಗಣತಿ, ಮಳೆ ಮತ್ತು ಗಣಕ ವಿಭಾಗ (ಎಆರ್‌ಸಿ)
4. ನಾಗರೀಕ ನೋಂದಣಿ, ರಾಷ್ಟ್ರೀಯ ಮಾದರಿ ಸಮೀಕ್ಷೆ ಮತ್ತು ಸ್ಥಳೀಯ ಸಂಸ್ಥೆಗಳ ಅಂಕಿ ಅಂಶಗಳು ವಿಭಾಗ (ಸಿಎನ್‌ಎಲ್)
5. ರಾಜ್ಯಾದಾಯ, ಕೈಗಾರಿಕೆ, ಬೆಲೆಗಳು ವಿಭಾಗ (ಎಸ್‌ಐಪಿ)
6. ಪ್ರಕಟಣೆ, ತರಬೇತಿ ಮತ್ತು ಸಮನ್ವಯ ವಿಭಾಗ (ಪಿಟಿಸಿ)

ಪ್ರತಿಯೊಂದು ವಿಭಾಗದ ಮುಖ್ಯಸ್ಥರು ಜಂಟಿ ನಿರ್ದೇಶಕರಾಗಿದ್ದು, ವಿಭಾಗವನ್ನು ವಿವಿಧ ಶಾಖೆಗಳಾಗಿ ವಿಂಗಡಿಸಲಾಗಿದೆ. ಸಾಮಾನ್ಯವಾಗಿ 2 ಅಥವಾ 3 ಶಾಖೆಗಳಿಗೆ ಒಬ್ಬ ಉಪ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ. ಒಟ್ಟು 22 ತಾಂತ್ರಿಕ ಶಾಖೆಗಳಿರುತ್ತವೆ. ವಿಭಾಗದ ಕೆಲಸಗಳಿಗನುಗುಣವಾಗಿ ತಾಂತ್ರಿಕ ವಿಭಾಗಗಳಲ್ಲಿ ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು /ಸಹಾಯಕ ಸಾಂಖ್ಯಿಕ ಅಧಿಕಾರಿ/ಸಾಂಖ್ಯಿಕ ನಿರೀಕ್ಷಕರು/ಗಣತಿದಾರರು ನೆರವಾಗುತ್ತಾರೆ. ಆಡಳಿತ ಮತ್ತು ಲೆಕ್ಕ ವಿಭಾಗದ ಆಡಳಿತಾಧಿಕಾರಿಗಳಿಗೆ, ಪತ್ರಾಂಕಿತ ವ್ಯವಸ್ಥಾಪಕರು, ಅಧೀಕ್ಷಕರು, ಮೊದಲನೆಯ ದರ್ಜೆಯ ಸಹಾಯಕರು ಮತ್ತು ಎರಡನೇ ದರ್ಜೆಯ ಸಹಾಯಕರು ನೆರವಾಗುತ್ತಾರೆ.

ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲೂ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿಯಿದ್ದು, ಉಪ ನಿರ್ದೇಶಕರ ಹುದ್ದೆಯಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು (ಜಿಸಂಸಂ) ತಾಂತ್ರಿಕ ಕೆಲಸಗಳಿಗೆ

ಜಿಲ್ಲಾ ಕೇಂದ್ರ ಕಛೇರಿಯಲ್ಲಿ, ಸಹಾಯಕ ನಿರ್ದೇಶಕರು, ಸಹಾಯಕ ಸಾಂಖ್ಯಿಕ ಅಧಿಕಾರಿಗಳು, ಸಾಂಖ್ಯಿಕ ನಿರೀಕ್ಷಕರು ಮತ್ತು ಒಬ್ಬ ಗಣತಿದಾರರು ನೆರವಾಗುತ್ತಾರೆ. ಜಿಲ್ಲೆಯ ಗಾತ್ರಕ್ಕೆ ಅನುಗುಣವಾಗಿ ಪ್ರತಿ ಜಿಲ್ಲೆಯ ಸಿಬ್ಬಂದಿಯ ಸಂಖ್ಯೆಯು ವ್ಯತ್ಯಾಸವಾಗುತ್ತದೆ. ದಿನನಿತ್ಯದ ಆಡಳಿತದ ಕೆಲಸಗಳಿಗೆ ಲಿಪಿಕ ವರ್ಗದ ಸಿಬ್ಬಂದಿಯವರು ನೆರವಾಗುತ್ತಾರೆ. ತಾಲ್ಲೂಕು ಮಟ್ಟದಲ್ಲಿ ಒಬ್ಬ ಸಾಂಖ್ಯಿಕ ನಿರೀಕ್ಷಕರು ಮತ್ತು ಒಬ್ಬ ಗಣತಿದಾರರನ್ನು ತಾಲ್ಲೂಕು ಅಂಕಿ ಅಂಶ ಕಾರ್ಯವನ್ನು ನಿರ್ವಹಿಸಲು ನಿಯೋಜಿಸಲಾಗಿದ್ದು, ಜಿ.ಸಂ.ಸಂ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತಾರೆ ಹಾಗೂ ದಿನನಿತ್ಯದ ಕಾರ್ಯಗಳಿಗೆ ತಹಶೀಲ್ದಾರರ ಅಧೀನದಲ್ಲಿರುತ್ತಾರೆ. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಕಾರ್ಯ ವ್ಯವಸ್ಥೆಯ ನಕ್ಷೆಯನ್ನು ಅನುಭಂದ-4 ರಲ್ಲಿ ನೀಡಲಾಗಿದೆ.

ಇತರೆ ಇಲಾಖೆಗಳಲ್ಲಿ ಅಂಕಿಅಂಶಗಳ ವಿಭಾಗವಿದ್ದು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿಗಳು ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಆಯಾಯಾ ಇಲಾಖೆಯ ಸಾಂಖ್ಯಿಕ ಮಾಹಿತಿಯ ಅವಶ್ಯಕತೆಗೆ ತಕ್ಕಂತೆ ಅಂಕಿಅಂಶಗಳ ಉಸ್ತುವಾರಿಯನ್ನು ನಿರ್ವಹಿಸುತ್ತಾರೆ.

**ಇಲಾಖೆಯ ಕಾರ್ಯ ಮತ್ತು ಚಟುವಟಿಕೆಗಳು**

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ರಾಜ್ಯ ಸರ್ಕಾರವು ಕಾರ್ಯಕ್ರಮಗಳನ್ನು ರೂಪಿಸಲು ಮತ್ತು ಕಾರ್ಯ ರೀತಿಯನ್ನು ಜಾರಿಗೊಳಿಸಲು ಅಗತ್ಯವಾದ ಮಾಹಿತಿಯನ್ನು ನೀಡುವ ಜವಾಬ್ದಾರಿ ಸಂಸ್ಥೆಯಾಗಿರುತ್ತದೆ. ವಿವಿಧ ಸಾಮಾಜಿಕ-ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಅಂಕಿ ಅಂಶಗಳ ಮಾಹಿತಿಯನ್ನು ಕಾಲಕಾಲಕ್ಕೆ ಸಂಗ್ರಹಿಸಿ, ವರ್ಗೀಕರಿಸಿ, ವಿಶ್ಲೇಷಣೆ ಮತ್ತು ಪ್ರಕಟಣೆ ಮಾಡಲಾಗುತ್ತಿದೆ. ಆದರೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಹಲವು ಮಾಹಿತಿಯನ್ನು ನೇರವಾಗಿ ತನ್ನ ಅಧೀನದಲ್ಲಿರುವ ಕಛೇರಿಗಳಿಂದ ಹಾಗೂ ಬಹುಪಾಲು ಅಂಕಿ ಅಂಶಗಳ ಮಾಹಿತಿಯನ್ನು ಇತರೆ ಇಲಾಖೆಗಳಿಂದ ಸಂಗ್ರಹಿಸುತ್ತದೆ. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಮುಖ್ಯ ಕಾರ್ಯಕ್ರಮಗಳನ್ನು ಈ ಕೆಳಕಂಡಂತಿದೆ.

1. ವ್ಯವಸ್ಥಿತ ರೀತಿಯಲ್ಲಿ ರಾಜ್ಯ ಹಾಗೂ ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳ ವಿವಿಧ ಸಾಮಾಜಿಕ ಆರ್ಥಿಕ ವಿಷಯಗಳ ಬಗ್ಗೆ ಅಂಕಿ ಅಂಶ ಸಂಗ್ರಹಣೆ, ವರ್ಗೀಕರಣ, ಕೋಷ್ಠಕೀಕರಣ ಮತ್ತು ವಿಶ್ಲೇಷಣೆ ಹಾಗೂ ಮಂಡನೆ ಮತ್ತು ನಿಯಮಿತವಾಗಿ ಪ್ರಕಟಣೆಗಳ ಮೂಲಕ ಮಾಹಿತಿ ಪ್ರಸಾರ.

2. ಸಾಮಾಜಿಕ ಆರ್ಥಿಕ ಅಭಿವೃದ್ಧಿಯ ವಿವಿಧ ಅಂಶಗಳ ಕುರಿತು ಮಾದರಿ ಸಮೀಕ್ಷೆಗಳು ಹಾಗೂ ಇತರೆ ಮಧ್ಯಂತರ ಕ್ಷೇತ್ರ ವಿಚಾರಣೆಗಳು ಮುಂತಾದವುಗಳನ್ನು ನಡೆಸುವುದು.

3. ಅಂಕಿ ಅಂಶಗಳ ಚಟುವಟಿಕೆಗಳ ಬಗ್ಗೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಜೊತೆ ಸಮನ್ವಯ ಹಾಗೂ ತಾಂತ್ರಿಕ ನೆರವು ನೀಡಲಾಗುತ್ತಿದೆ.

4. ಭಾರತ ಸರ್ಕಾರ ಹಾಗೂ ಇತರೆ ರಾಜ್ಯ ಸರ್ಕಾರಗಳ ಸಾಂಖ್ಯಿಕ ಸಂಸ್ಥೆಗಳ ಜೊತೆ ಸಂಪರ್ಕವಿಟ್ಟು ಕೊಳ್ಳುವುದು

ಜೊತೆಗೆ ಸಾಮಾಜಿಕ-ಆರ್ಥಿಕ ವಲಯಕ್ಕೆ ಸಂಬಂಧಿಸಿದ ಸಾಂಖ್ಯಿಕ ಮಾಹಿತಿಯನ್ನು ನೇರವಾಗಿ ಇತರೆ ಇಲಾಖೆಗಳಿಂದ ನಿಯಮಿತವಾಗಿ ಸಂಗ್ರಹಿಸುವುದು ಮತ್ತು ಸಜ್ಜುಗೊಳಿಸುವುದು.

**ನೋಡಲ್ ಏಜೆನ್ಸಿ**

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವನ್ನು ರಾಜ್ಯದ ಎಲ್ಲಾ ಸಾಂಖ್ಯಿಕ ವಿಷಯಗಳಿಗೆ ಸಂಬಂಧಿಸಿದಂತೆ, "ನೋಡಲ್ ಏಜೆನ್ಸಿ"ಯನ್ನಾಗಿ ಸರ್ಕಾರಿ ಆದೇಶ ಸಂಖ್ಯೆ ಪಿಡಿ 183 ಎಸ್‌ಎಂಸಿ 2010, ದಿನಾಂಕ 25–01–2011 ರಲ್ಲಿ ನೇಮಿಸಲಾಗಿದೆ.

ನೋಡಲ್ ಏಜೆನ್ಸಿಯಾಗಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಪ್ರಮುಖ ಚಟುವಟಿಕೆಗಳು ಈ ಕೆಳಕಂಡಂತಿದೆ.

- ಇಲಾಖೆಗಳ ಅವಶ್ಯಕತೆಗನುಗುಣವಾಗಿ ಅಂಕಿ–ಅಂಶಗಳ ಸಂಗ್ರಹಣೆಗೆ ಒತ್ತು ನೀಡುವುದು.
- ಕಾರ್ಯವಿಧಾನವನ್ನು ನಮೂನೆಗಳನ್ನು ಅವಧಿಯನ್ನು, ವೇಳಾಪಟ್ಟಿಯನ್ನು, ವಿವಿಧ ಹಂತಗಳ ಹಾಗೂ ಮಾದರಿಯ ತಃಖ್ತೀಕರಣ, ಅಂತಿಮ ವರದಿ/ಪ್ರಕಟಣೆ, ಇತ್ಯಾದಿ ವಿಷಯ ವಸ್ತುಗಳನ್ನು ನಿಗಧಿಪಡಿಸುವುದು.
- ಇಲಾಖೆಗಳು ತಾವು ಸಂಗ್ರಹಿಸಿದ ಅಂಕಿ–ಅಂಶಗಳ ವಿಶ್ಲೇಷಣೆಯನ್ನು ಕೈಗೊಳ್ಳುವಂತೆ ಕಡ್ಡಾಯಗೊಳಿಸುವುದು.
- ಈ ವಾರ್ಷಿಕ ಆಡಳಿತ ವರದಿಗಳು ಅಂಕಿ–ಅಂಶಗಳ ವಿಶ್ಲೇಷಣೆಯನ್ನು ಹೊಂದಿರುವಂತೆ ಖಾತ್ರಿಪಡಿಸುವುದು.
- ತಾಂತ್ರಿಕ ಮತ್ತು ಅಂಕಗಣಿತದ ತಪ್ಪುಗಳಿಂದ ಹಾಗೂ ಸರಿಯಿಲ್ಲದಿರುವಿಕೆಯಿಂದ ಮತ್ತು ಅಸಂಬದ್ಧತೆಯಿಂದ ಮುಕ್ತವಾದ ಒಂದೇ ತೆರನಾದ ಅಂಕಿ–ಅಂಶಗಳನ್ನು ಎಲ್ಲ ಮಟ್ಟಗಳಲ್ಲಿ ನಿರ್ವಹಿಸಲು ಇಲಾಖೆಗಳಿಗೆ ಸಲಹೆ ನೀಡುವುದು.
- ಇಲಾಖೆಗಳ ನಡುವಣ ಒಂದೇ ತೆರನಾದ ಅಂಕಿ–ಅಂಶಗಳ ಸಂಗ್ರಹಣೆಯ ಪುನರಾವರ್ತನೆ ಕಾರ್ಯವನ್ನು ಕಡಿಮೆಗೊಳಿಸುವ/ತೊಡೆದುಹಾಕುವ ಕ್ರಮವನ್ನು ಖಾತ್ರಿಪಡಿಸಬೇಕು.
- ಅಂಕಿ–ಅಂಶಗಳ ಅಧಿನಿಯಮ 2008 ಹಾಗೂ ನಿಯಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು.

ಎಲ್ಲಾ ಇಲಾಖೆಗಳು ವಿಶ್ವಾಸಾರ್ಹ, ನಂಬಲರ್ಹ ಮತ್ತು ಕಾಲಮಿತಿಯ ಅಂಕಿ ಅಂಶಗಳನ್ನು ಉತ್ಪಾದಿಸುವ ಹಾಗೂ ಮೇಲ್ಕಾಣಿಸಿದ ಚಟುವಟಿಕೆಗಳ ಉಸ್ತುವಾರಿಯನ್ನು ಕೈಗೊಳ್ಳಲು ರಾಜ್ಯ ಮಟ್ಟದಲ್ಲಿ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಇವರನ್ನು ಅಧ್ಯಕ್ಷರನ್ನಾಗಿ ಹಾಗೂ ಜಿಲ್ಲಾ ಮಟ್ಟದಲ್ಲಿ ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರನ್ನು ಅಧ್ಯಕ್ಷರನ್ನಾಗಿ ಒಳಗೊಂಡ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಸಮನ್ವಯ ಸಮಿತಿಗಳನ್ನು ಕ್ರಮವಾಗಿ ರಚಿಸಲಾಗಿದೆ. ಸಮನ್ವಯ ಸಮಿತಿಯ ಮೊದಲ ಸಭೆಯು ಜುಲೈ 2011ರಲ್ಲಿ ಜರುಗಿತು.

**ಇಲಾಖೆಯ ಕಾರ್ಯನಿರ್ವಹಣೆ**

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿ 3 ಯೋಜನೆ ಮತ್ತು 9 ಯೋಜನೇತರ ಕಾರ್ಯಕ್ರಮಗಳು ಜಾರಿಯಲ್ಲಿರುತ್ತವೆ. ಈ ಮೂರು ಯೋಜನಾ ಕಾರ್ಯಕ್ರಮಗಳಲ್ಲಿ ಒಂದು ರಾಜ್ಯ ಯೋಜನಾ ಕಾರ್ಯಕ್ರಮವನ್ನು ನಿರ್ದೇಶನಾಲಯವು ಹಾಗೂ ಒಂದು ಕೇಂದ್ರ ಪುರಸ್ಕೃತ ಭಾರತೀಯ ಅಂಕಿ ಅಂಶಗಳ ಬಲವರ್ಧನೆ ಯೋಜನೆಯನ್ನು ಕರ್ನಾಟಕ ಸಾಂಖ್ಯಿಕ ಪದ್ದತಿ ಅಭಿವೃದ್ದಿ ಸಂಸ್ಥೆಯು

ಅನುಷ್ಠಾನಗೊಳಿಸುತ್ತಿದೆ. 9 ಯೋಜನೇತರ ಕಾರ್ಯಕ್ರಮಗಳ ಪೈಕಿ 4 ರಾಜ್ಯವಲಯ ಕಾರ್ಯಕ್ರಮಗಳಲ್ಲಿ ಒಂದು ಕಾರ್ಯಕ್ರವನ್ನು ಕಂದಾಯ ಇಲಾಖೆಯು ಉಳಿದ 3 ಕಾರ್ಯಕ್ರಮಗಳು ನಿರ್ದೇಶನಾಲಯದಲ್ಲಿ ಜಾರಿಯಲ್ಲಿರುತ್ತವೆ. ಇನ್ನುಳಿದ 5 ಯೋಜನೇತರ ಕಾರ್ಯಕ್ರಮಗಳು ಕೇಂದ್ರ ವಲಯ ಯೋಜನೆಗಳಾಗಿರುತ್ತವೆ. ಈ ಎಲ್ಲಾ ಕಾರ್ಯಕ್ರಮಗಳ ವಿವರಗಳು ಕೆಳಕಂಡಂತಿರುತ್ತದೆ.

**ಯೋಜನಾ ಕಾರ್ಯಕ್ರಮಗಳು:**

**ರಾಜ್ಯ ವಲಯದ ಅಭಿವೃದ್ಧಿ ಕಾರ್ಯಕ್ರಮಗಳಡಿಯಲ್ಲಿ ಮಾದರಿ ಸಮೀಕ್ಷೆಗಳು** ಮತ್ತು ಇತರೆ ಯೋಜನೆಗಳು 2007–08 ರಲ್ಲಿ ಪ್ರಾರಂಭವಾಗಿವೆ (ಮಾದರಿ ಸಮೀಕ್ಷೆಯನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿ 1992–93 ರಿಂದ ಕೈಗೊಳ್ಳಲಾಗುತ್ತಿದೆ. ಆದರೆ ಈ ಯೋಜನೆಗೆ ಆಯವ್ಯಯದ ಲೆಕ್ಕ ಶೀರ್ಷಿಕೆಯನ್ನು 2007–08 ರ ಸಾಲಿನಲ್ಲಿ ಆರಂಭವಾಗಿರುತ್ತದೆ)

**ಆಯವ್ಯಯ ಲೆಕ್ಕ ಶೀರ್ಷಿಕೆ:–** 3454–02–204–0–17.

**ಯೋಜನೆ:–** ಕೇಂದ್ರ ಮತ್ತು ರಾಜ್ಯ:0:100

**ಯೋಜನೆಯ ಉದ್ದೇಶ"–** ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಡಿಯಲ್ಲಿ ಪ್ರತಿ ವರ್ಷ4–5 ಅಭಿವೃದ್ಧಿ ಯೋಜನೆಗಳನ್ನು ಸಮೀಕ್ಷೆಗೆ ಆಯ್ಕೆ ಮಾಡಿಕೊಂಡು ಆಯ್ದ ಕಾಮಗಾರಿ, ಫಲನುಭವಿಗಳ ಸಮೀಕ್ಷೆ ಕೈಗೊಳ್ಳಲಾಗುತ್ತಿದೆ. ಈ ಸಮೀಕ್ಷೆಯಲ್ಲಿ ಕಾಮಗಾರಿಯ ಭೌತಿಕ ಗುಣಮಟ್ಟ, ನಿಜವಾದ ಫಲಾನುಭವಿಗಳಿಗೆ ಸೌಲಭ್ಯ ದೊರಕಿರುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸಿ, ಗಮನಿಸಲಾದ ಅಂಶಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ತಿಳಿಸಿ, ಮುಂದಿನ ಯೋಜನಾ ಕಾರ್ಯ ಅನುಷ್ಠಾನದಲ್ಲಿ ಬಳಸಿಕೊಳ್ಳುವಂತೆ ಸಲಹೆ ಸೂಚನೆಗಳನ್ನು ನೀಡುವ್ಯದೇ ಇದರ ಮುಖ್ಯ ಉದ್ದೇಶವಾಗಿರುತ್ತದೆ.

**ಅಂದಾಜು ಲಾಭ:–** ಪ್ರತಿ ವರ್ಷ ಸರಾಸರಿ 4–5 ಯೋಜನೆಗಳನ್ನು ಮಾದರಿಯಾಗಿ ಆಯ್ಕೆ ಮಾಡಿಕೊಳ್ಳಲಾಗುತ್ತದೆ. 2012–13 ರಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳಡಿಯಲ್ಲಿ ಹನ್ನೆರಡನೇ ಸುತ್ತಿನ ಮಾದರಿ ಸಮೀಕ್ಷೆಯಲ್ಲಿ ನಾಲ್ಕು ಯೋಜನೆಗಳನ್ನು ಆಯ್ಕೆ ಮಾಡಲಾಗಿದೆ. ಅವುಗಳೆಂದರೆ 1. ಬಸವ ವಸತಿ ಯೋಜನೆ. 2. ಗ್ರಾಮೀಣ ರಸ್ತೆಗಳು(ನಬಾರ್ಡ ಮತ್ತು ಸುವರ್ಣ ಯೋಜನೆಗಳು). 3. ಗ್ರಾಮೀಣ ನೀರು ಸರಬರಾಜು ಯೋಜನೆ ಅ) ಕೊಳವೆ ನೀರು ಸರಬರಾಜು ಯೋಜನೆ ಆ) ಕಿರು ನೀರು ಸರಬರಾಜು ಯೋಜನೆ ಇ) ಕೊಳವೆ ಬಾವಿ ಯೋಜನೆ. ಈ) ಮಣ್ಣು ಮತ್ತು ನೀರು ಸಂರಕ್ಷಣೆ ಯೋಜನೆ.

**ಹಣಕಾಸು**

(ರೂ.ಲಕ್ಷಗಳಲ್ಲಿ):

| **ಪರಿಷ್ಕೃತ ಅಂದಾಜು 2011–12** | | **ಆಯವ್ಯಯ ಅಂದಾಜು 2012–13** | | **ಆಯವ್ಯಯ ಅಂದಾಜು 2013–14** | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| 0.00 | 20.00 | 0.00 | 20.00 | 0.00 | 20.00 |

**ಖರ್ಚು**

(ರೂ.ಲಕ್ಷಗಳಲ್ಲಿ):

| **ಲೆಕ್ಕ / ವಾಸ್ತವಿಕ 2011–12** | | **ಲೆಕ ್ಕ/ ವಾಸ್ತವಿಕ 2012–13** | | **ಆಯವ್ಯಯ ಅಂದಾಜು 2013–14** | |
|---|---|---|---|---|---|
| ವಾಸ್ತವಿಕ | ರಾಜಸ್ವ | ಲೆಕ್ಕ | ರಾಜಸ್ವ | ಬಂಡವಾಳ | ರಾಜಸ್ವ |
| 0.00 | 14.02 | 0.00 | 17.41 | 0.00 | 14.14 |

**ಭೌತಿಕ ಸಾಧನೆ– (ಸಮೀಕ್ಷೆ ಕೈಗೊಂಡ ಯೋಜನೆಗಳ ಸಂಖ್ಯೆ):**

| 2011-12 | 2012-13 | 2013-14 |
|---|---|---|
| ಮಾದರಿ ಸಮೀಕ್ಷೆಯ 2 ಯೋಜನೆಗಳು (ಹೊರಗುತ್ತಿಗೆ) | ಮಾದರಿ ಸಮೀಕ್ಷೆಯ 4 ಯೋಜನೆಗಳು | ಮಾದರಿ ಸಮೀಕ್ಷೆಯ 5 ಯೋಜನೆಗಳು |

**6ನೇ ಆರ್ಥಿಕ ಗಣತಿ**: ಕಳೆದ ಸಾಲಿನಲ್ಲಿ 6ನೇ ಆರ್ಥಿಕ ಗಣತಿಯ ಕಾರ್ಯಚರಣೆಗಾಗಿ ಪ್ರಾರಂಭಿಸಲಾದ ವಿಭಾಗದಿಂದ ಪ್ರಸ್ತುತ ಸಾಲಿನಲ್ಲಿ ಆರ್ಥಿಕ ಗಣತಿಯ ಕ್ಷೇತ್ರಕಾರ್ಯ ಕೈಗೊಂಡುಗಣತಿ ಕಾರ್ಯವನ್ನು ರಾಜ್ಯಾದಂತ ಪೂರ್ಣಗೊಳಿಸಲಾಗಿರುತ್ತದೆ. ಭಾರತ ಸರ್ಕಾರದ ಮಾರ್ಗ ಸೂಚನೆಗಳ ಪ್ರಕಾರ ಆರ್ಥಿಕ ಗಣತಿಯ ತ್ವರಿತ ಫಲಿತಾಂಶವನ್ನು ಬಿಡುಗಡೆ ಮಾಡಲಾಗಿರುತ್ತದೆ.ಆರ್ಥಿಕ ಗಣತಿಯಲ್ಲಿ ಸಂಗ್ರಹಿಸಿದ ಪ್ರತಿಯೊಂದು ಉದ್ಯಮದ ಮಾಹಿತಿಯನ್ನು ಗಣಕೀಕರಿಸುವ ಸಲುವಾಗಿ ಪ್ರತ್ಯೇಕವಾದ "ವೆಬ್ ತಂತ್ರಾಂಶವನ್ನು" ಸಿದ್ದಪಡಿಸಲಾಗಿರುತ್ತದೆ. National Informatics Centre, Bangalore ಇವರ ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾದ ಈ ವೆಬ್ ಆಧಾರಿತ ತಂತ್ರಾಂಶದಲ್ಲಿ ಸಮಾನ್ಯ ವ್ಯವಹಾರ ದಾಖಲೆ ಮಾಹಿತಿಯನ್ನು ಅಳವಡಿಸಲು ಸಹ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ. ಭಾರತ ಸರ್ಕಾರದ ಮಾರ್ಗಸೂಚನೆಯಂತೆ ಆರ್ಥಿಕ ಗಣತಿಯ ಸಲುವಾಗಿ ನಿಗದಿಪಡಿಸಲಾದ ವಿವಿಧ ಅನುಸೂಚಿಗಳಲ್ಲಿ ಮಾಹಿತಿ ಸಂಗ್ರಹಿಸಲಾಗಿರುತ್ತದೆ. 6ಎ' ಅನುಸೂಚಿಯನ್ನು ಸ್ಕ್ಯಾನಿಂಗ್ ಸಲುವಾಗಿ ಶೀಘ್ರದಲ್ಲಿ ಭಾರತ ಸರ್ಕಾರಕ್ಕೆ ಸಲ್ಲಿಸಲಾಗುವುದು. ಇದರಿಂದ ಭಾರತ ಸರ್ಕಾರದ ಅಗತ್ಯದಂತೆ ಬಹಳಷ್ಟು ವರದಿಗಳನ್ನು ಪಡೆದುಕೊಳ್ಳಬಹುದಾಗಿರುತ್ತದೆ.ನಿರ್ದೇಶನಾಲಯದಲ್ಲಿ ಪ್ರಾರಂಭಿಸಲಾದ ಆರ್ಥಿಕ ಗಣತಿಯ ವಿಭಾಗದಿಂದ ಈ ಗಣತಿಯಿಂದ ಅಗತ್ಯವಿರುವ ವರದಿಗಳನ್ನು ಹೊರತರಲು ಬಹಳಷ್ಟು ವಿಶಿಷ್ಟವಾದ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗಿರುತ್ತದೆ.

**ಲೆಕ್ಕ ಶೀರ್ಷಿಕೆ:** 3454–02–204–0–19

**ಯೋಜನೆ**: ಕೇಂದ್ರ ಯೋಜನೆ :ಶೇಕಡ 100: ರಷ್ಟು

**ಯೋಜನೆಯ ಉದ್ದೇಶ**: ಈ ಯೋಜನೆಯ ಉದ್ದೇಶವು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಮನೆಯ ಒಳಗಡೆ ಅಥವಾ ಮನೆಯ ಹೊರಗಡೆ, ನಿರ್ಧಿಷ್ಟ ಕಟ್ಟಡದಲ್ಲಿ/ನಿರ್ಧಿಷ್ಟ ಕಟ್ಟಡವಿಲ್ಲದೆ ಆರ್ಥಿಕ ಚಟುವಟಿಕೆ ನಡೆಸುತ್ತಿರುವ ಎಲ್ಲಾ ಉದ್ದಿಮೆಗಳಿಂದ ಮಾಹಿತಿಯನ್ನು ಗಣತಿದಾರರು ಮನೆ ಮನೆಗೆ ಭೇಟಿ ನೀಡಿ ಸಂಗ್ರಹಿಸುವುದಾಗಿರುತ್ತದೆ.ವ್ಯವಸ್ಥೆಯಲ್ಲಿನ ವಲಯವಾರು ಪ್ರಾದೇಶಿಕ ಅಸಮತೋಲನೆಯನ್ನು ಗುರುತಿಸುವುದು ಈ ಗಣತಿಯ ಪ್ರಮುಖ ಉದ್ದೇಶವಾಗಿರುತ್ತದೆ. ಈ ಆರ್ಥಿಕ ಗಣತಿಯ ಮಾಹಿತಿಯನ್ನು ನಿರ್ದೇಶನಾಲಯದ ವಿವಿಧ ವಿಭಾಗಗಳಿಂದ ಕೈಗೊಳ್ಳಲಾಗುವ ಇನ್ನಿತರ ಸಮೀಕ್ಷೆಗಳಿಗೆ ಚೌಕಟ್ಟಾಗಿ (frame) ಉಪಯೋಗಿಸಲಾಗುತ್ತದೆ.

**ನಿರೀಕ್ಷಿತ ಪ್ರಯೋಜನ:** ಮಾಹಿತಿಯನ್ನು ಎಲ್ಲಾ ಉದ್ಯಮಗಳಿಂದ ಕಲೆಹಾಕಲಾಗುತ್ತದೆ. 8 ಅಥವಾ 8 ಕ್ಕಿಂತ ಹೆಚ್ಚು ಕೆಲಸಗಾರರಿರುವ ಉದ್ದಿಮೆಗಳಿಂದ ಮಾಹಿತಿಯನ್ನುಅನುಸೂಚಿ 6ಸಿ ಯಲ್ಲಿ ಕಲೆಹಾಕಲಾಗುತ್ತದೆ. ಈ ಮಾಹಿತಿಯಿಂದ ವಿವಿಧ ಸಮೀಕ್ಷೆಗಳನ್ನು ಕೈಗೊಳ್ಳಲು ಬೇಕಾದ ಮಾದರಿಚೌಕಟ್ಟನ್ನುತಯಾರಿಸಲು, ತಾಲ್ಲೂಕು/ಜಿಲ್ಲೆ/ರಾಜ್ಯ ಮಟ್ಟದಆದಾಯವನ್ನು ಲೆಕ್ಕ ಹಾಕಲು, ಇತ್ಯಾದಿಗಳಿಗೆ ಉಪಯೋಗವಾಗುತ್ತದೆ.

**ಹಣಕಾಸು**

(ರೂ.ಲಕ್ಷಗಳಲ್ಲಿ):

| ಪರಿಷ್ಕೃತ ಅಂದಾಜು 2011-12 | | ಪರಿಷ್ಕೃತ ಅಂದಾಜು 2012-13 | | ಆಯವ್ಯಯ ಅಂದಾಜು 2013-14 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| - | - | 0.00 | 54.06 | 00.00 | 3265.00 |

**ಖರ್ಚು**

(ರೂ.ಲಕ್ಷಗಳಲ್ಲಿ):

| ವಾಸ್ತವಿಕ/ಲೆಕ್ಕ 2011-12 | | ವಾಸ್ತವಿಕ\ಲೆಕ್ಕ 2012-13 | | ಆಯವ್ಯಯ ಅಂದಾಜು 2013-14 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| - | - | 0.00 | 45.29 | - | 2405.21 |

**ಯೋಜನೇತರ ಕಾರ್ಯಕ್ರಮಗಳು**

**ಕೃಷಿ ಗಣತಿ**

**ಲೆಕ್ಕ ಶೀರ್ಷಿಕೆ:** 3454-02-204-0-03

**ಯೋಜನೇತರ: ಕೇಂದ್ರ ಪಾಲು:: 100 : 0**

**ಉದ್ದೇಶ:** ಹಿಡಿವಳಿಯ ವಿಸ್ತೀರ್ಣ, ಹಿಡುವಳಿಗಳನ್ನು ವಿವಿಧ ವರ್ಗಾಂತರಗಳಿಗೆ, ಸಾಮಾಜಿಕ ಗುಂಪುವಾರು, ಲಿಂಗವಾರು ಮುಂತಾದ ಅಂಕಿ ಅಂಶಗಳನ್ನು ಸಂಗ್ರಹಿಸಲಾಗುವುದು. ಈ ಗಣತಿಯನ್ನು ಪ್ರತಿ 5 ವರ್ಷಕ್ಕೊಮ್ಮೆ ಕೈಗೊಳ್ಳಲಾಗುವುದು.

**ಅಂದಾಜಿಸಿದ ಪ್ರಯೋಜನ :** ಭೂದಾಖಲೆಗಳನ್ನು ಮತ್ತು ಮ್ಯುಟೇಶನ್‌ಗಳನ್ನು ಇಂದೀಕರಿಸಿ ಕೃಷಿ ವಲಯದಲ್ಲಿನ ಹಿಡುವಳಿದಾರರ ಸಂಖ್ಯೆ ಮತ್ತು ಹಿಡುವಳಿಯ ಪ್ರದೇಶದ ಬಗ್ಗೆ ಖಚಿತ ಮಾಹಿತಿ ಲಭ್ಯವಾಗುತ್ತದೆ. ಈ ಗಣತಿಯು ಭೂ ಉಪಯೋಗದ ವಿವರ, ನೀರಾವರಿಯ ಮೂಲ, ಬೆಳೆಗಳ ಪದ್ಧತಿ ಮತ್ತು ಹಿಡುವಳಿದಾರರ ಚದರುವಿಕೆಯ ಮಾಹಿತಿಯನ್ನು ತಿಳಿದುಕೊಳ್ಳುವತ್ತ ಕೇಂದ್ರಿಕೃತವಾಗಿರುತ್ತದೆ. ಕೃಷಿಗಣತಿಯ ತರುವಾಯ ಇನ್‌ಪುಟ್ ಸಮೀಕ್ಷೆಯನ್ನು ರೈತರು ಉಪಯೋಗಿಸುವ ಬೀಜ, ಗೊಬ್ಬರ, ಕೀಟನಾಶಕ ಮತ್ತು ಕೃಷಿ ಉಪಕರಣಗಳ ಬಗ್ಗೆ ಮಾಹಿತಿ ಸಂಗ್ರಹಿಸುವ ದೃಷ್ಟಿಯಿಂದ ಕೈಗೊಳ್ಳಲಾಗುತ್ತದೆ.

**ಹಣಕಾಸು**

(ರೂ.ಲಕ್ಷಗಳಲ್ಲಿ):

| ವಾಸ್ತವಿಕ/ಲೆಕ್ಕ 2011-12 | | ವಾಸ್ತವಿಕ/ಲೆಕ್ಕ 2012-13 | | ವಾಸ್ತವಿಕ/ಲೆಕ್ಕ 2013-14 | |
|---|---|---|---|---|---|
| **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** |
| 0.00 | 200.08 | 0.00 | 55.29 | 0.00 | 280.16 |

**ಖರ್ಚು**

(ರೂ.ಲಕ್ಷಗಳಲ್ಲಿ):

| ವಾಸ್ತವಿಕ/ಲೆಕ್ಕ 2011-12 | | ವಾಸ್ತವಿಕ/ಲೆಕ್ಕ 2012-13 | | ವಾಸ್ತವಿಕ/ಲೆಕ್ಕ 2013-14 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| 0.00 | 178.28 | 0.00 | 53.34 | 0.00 | 260.29 |

**ಭೌತಿಕ ಸಾಧನೆ:**

| 2011-12 | 2012-13 | 2013-14 |
|---|---|---|
| ರಾಜ್ಯ, ಜಿಲ್ಲಾ ಮಟ್ಟದಲ್ಲಿನ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮವನ್ನು ನಡೆಸಲಾಯಿತು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿಯು ಸಹ ತರಬೇತಿ ನೀಡಲಾಗಿದೆ. ಮೊದಲನೆ ಹಾಗೂ ಎರಡನೆ ಹಂತದ ಕ್ಷೇತ್ರ ಕಾರ್ಯವನ್ನು ಕೈಗೊಳ್ಳಲಾಗಿದೆ.<br><br>ಮೊದಲನೆ ಹಂತದ ನಮೂನೆಗಳ ಪರಿಶೀಲನೆ ಸಂಕೇತೀಕರಣ ಮತ್ತು ಡಾಟಾ ಎಂಟ್ರಿ ಕಾರ್ಯ ಮುಗಿದು ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಭಾರತ ಸರ್ಕಾರವು ಟೇಬಲ್ ತಯಾರಿಸಿ ಪರಿಶೀಲನೆಗಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸಿರುತ್ತಾರೆ. ಭಾಗ-ಖಖರ ಹೆಚ್ ನಮೂನೆಗಳ ಪರಿಶೀಲನೆ, ಸಂಕೇತಿಕರಣ ಕಾರ್ಯ ಪ್ರಗತಿಯಲ್ಲಿದೆ. 2011-12ನೇ ಸಾಲಿನ ಇನ್‌ಪುಟ್ ಸಮೀಕ್ಷೆ ಕಾರ್ಯದ ರಾಜ್ಯಮಟ್ಟದ ತರಬೇತಿ ಕಾರ್ಯಕ್ರಮವನ್ನು ಪೂರ್ಣಗೊಳಿಸಲಾಗಿದೆ. | ಕೃಷಿಗಣತಿಯ ಮೊದಲ ಹಂತದ ಪರಿಶೀಲನೆ, ನಮೂನೆಗಳ ಸಂಕೇತಿಕರಣ, ಡಾಟಾ ಎಂಟ್ರಿ ಕಾರ್ಯ ಮುಗಿದಿದ್ದು, ತಃಖ್ತೆಗಳು/ವರದಿಯನ್ನು ತಯಾರಿಸಿ ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿದೆ.<br><br>ಕೃಷಿ ಗಣತಿಯ 2ನೇ ಹಂತದ ಸಮೀಕ್ಷೆಯಾದ ಹೆಚ್ ನಮೂನೆಗಳ ಪರಿಶೀಲನೆ ಮತ್ತು ಸಂಕೇತಿಕರಣ ಕಾರ್ಯ ಮುಕ್ತಾಯವಾಗಿರುತ್ತದೆ.<br>ದತ್ತಾಂಶ (ಡಾಟಾ) ಮೌಲ್ಯೀಕರಣ ಪ್ರಗತಿಯಲ್ಲಿರುತ್ತದೆ. ಇನ್‌ಪುಟ್ ಸಮೀಕ್ಷೆ 2011-12ರ ಸಮೀಕ್ಷೆಗೆ ಸಂಬಂಧಿಸಿದಂತೆ ರಾಜ್ಯ ಮಟ್ಟದಲ್ಲಿ ತರಬೇತಿಯನ್ನು ನೀಡಲಾಗಿದ್ದು ಕ್ಷೇತ್ರ ಕಾರ್ಯ ಮುಕ್ತಾಯವಾಗಿರುತ್ತದೆ. | 2ನೇ ಹಂತದ ಸಮೀಕ್ಷೆ ಕಾರ್ಯಕ್ರಮದ ವರದಿಯನ್ನು ರೂಪಿಸುವ ಕಾರ್ಯವು ಪ್ರಗತಿಯಲ್ಲಿದೆ.<br>ಇನ್‌ಪುಟ್ ಸಮೀಕ್ಷೆ 2011-13ರ ನಮೂನೆಗಳ ಪರಿಶೀಲನೆ, ಸಂಕೇತಿಕರಣ ಚೆಕ್‌ಲಿಸ್ಟ್ ಪರಿಶೀಲನೆ ಕಾರ್ಯ ಪ್ರಗತಿಯಲ್ಲಿದೆ. |

**ಕರ್ನಾಟಕದ ಪ್ರಮುಖ ಬೆಳೆಗಳ ಸಕಾಲಿಕ ವರದಿ ಯೋಜನೆ**

**ಆಯವ್ಯಯ ಶೀರ್ಷಿಕೆ** : 3454–02–204–0–04

**ಯೋಜನೇತರ:** ಕೇಂದ್ರ ಪಾಲು:: 100 : 0

**ಉದ್ದೇಶ**: ಕೃಷಿ ಅಂಕಿ ಅಂಶಗಳ ಗುಣಮಟ್ಟ, ವಿಶ್ವಸನೀಯತೆ ಹಾಗೂ ಸಮಯಪಾಲನೆಯನ್ನು ಸುಧಾರಿಸುವ ಸಲುವಾಗಿ ಮತ್ತು ಬಿತ್ತನೆ ಹಾಗೂ ಸುಗ್ಗಿಯ ಕಾಲದ ಮಧ್ಯದಲ್ಲಿ ಪ್ರಮುಖ ಬೆಳೆಗಳ ಉತ್ಪಾದನೆಯ ಅಂದಾಜುಗಳ ವಿವರಗಳನ್ನು ಪಡೆಯುವಲ್ಲಿ ಆಗುವ ವಿಳಂಬವನ್ನು ಕಡಿಮೆ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ. ಈ ಯೋಜನೆಯಲ್ಲಿ ಮುಖ್ಯ ಬೆಳೆಗಳಾದ ಭತ್ತ, ಜೋಳ, ಸಜ್ಜೆ, ಮೆಕ್ಕೆಜೋಳ, ರಾಗಿ, ಗೋಧಿ, ತೊಗರಿ, ಕಡಲೆ, ಕಬ್ಬು, ಹತ್ತಿ, ನೆಲಗಡಲೆ, ಎಳ್ಳು, ಸೂರ್ಯಕಾಂತಿ, ಕುಸುಬೆ ಮತ್ತು ಅಗಸೆ ಬೆಳೆಗಳ ವಿಸ್ತೀರ್ಣವನ್ನು ಅಂದಾಜು ಮಾಡಲಾಗುತ್ತದೆ.

**ಅಂದಾಜಿಸಿದ ಪ್ರಯೋಜನ:** ಸಕಾಲದಲ್ಲಿ ಮುಖ್ಯ ಬೆಳೆಗಳ ಬೆಳೆ ಕ್ಷೇತ್ರ ಅಂದಾಜು ವರದಿಯ ಲಭ್ಯತೆ.

**ಹಣಕಾಸು**

(ರೂ.ಲಕ್ಷಗಳಲ್ಲಿ):

| **ಪರಿಷ್ಕೃತ ಅಂದಾಜು 2011–12** | | **ಪರಿಷ್ಕೃತ ಅಂದಾಜು 2012–13** | | **ಆಯವ್ಯಯ ಅಂದಾಜು 2013–14** | |
|---|---|---|---|---|---|
| **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** |
| 0.00 | 234.75 | 0.00 | 252.30 | 0.00 | 245.93 |

**ಖರ್ಚು**

(ರೂ.ಲಕ್ಷಗಳಲ್ಲಿ):

| **ವಾಸ್ತವಿಕ/ ಲೆಕ್ಕ 2011–12** | | **ವಾಸ್ತವಿಕ/ ಲೆಕ್ಕ 2012–13** | | **ಅಯವ್ಯಯ ಅಂದಾಜು 2013–14** | |
|---|---|---|---|---|---|
| **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** |
| 0.00 | 182.28 | 0.00 | 190.21 | 0.00 | 264.19 |

**ಭೌತಿಕ ಸಾಧನೆ, (ಘಟಕ –ಗ್ರಾಮಗಳು ಸಂಖ್ಯೆಗಳಲ್ಲಿ)**

| 2011-12 | 2012-13 | 2013-14 (ಡಿಸೆಂಬರ್ ಅಂತ್ಯಕ್ಕೆ) |
|---|---|---|
| 5935 | 5908 | 5770 |

**ಸಾಧನೆ:** 2012–13ನೇ ಸಾಲಿನಲ್ಲಿ 5908 ಗ್ರಾಮಗಳನ್ನು ಆರಿಸಲಾಗಿದ್ದು, ಸಕಾಲದಲ್ಲಿ ಬೆಳೆಗಳ ಎಣಿಕೆ ನಡೆಸಿ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಋತುಗಳ ಫಸಲು ಘೋಷ್ವಾರೆಗಳನ್ನು ಸ್ವೀಕರಿಸಲಾಗಿದೆ. ರಾಜ್ಯ ಮಟ್ಟದ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಋತುಗಳ ಬೆಳೆಕ್ಷೇತ್ರ ಅಂದಾಜು ವರದಿಯನ್ನು 2012–13ನೇ ಸಾಲಿಗೆ ತಯಾರಿಸಿ ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ.

**ಕೇಂದ್ರ ವಲಯ ಯೋಜನೆಗಳು:**

**ಯೋಜನೆ: ಬೆಳೆ ಅಂಕಿ ಅಂಶಗಳ ಅಭಿವೃದ್ಧಿ**

**ಆಯವ್ಯಯ ಶೀರ್ಷಿಕೆ** : 3454-02-204-0-05

**ಯೋಜನೇತರ**: ಕೇಂದ್ರ ವಲಯ ಯೋಜನೆ :: ಶೇಕಡ 100 : ರಷ್ಟು

**ಉದ್ದೇಶ**:- ಬೆಳೆ ಕ್ಷೇತ್ರ ಎಣಿಕೆ ಮತ್ತು ಬೆಳೆ ಕಟಾವು ಪ್ರಯೋಗಗಳನ್ನು ಕ್ರಮಬದ್ಧವಾಗಿ ನಡೆಸುವ ಬಗ್ಗೆ ತನಿಖೆಗಳನ್ನು ಕೈಗೊಂಡು ಕೃಷಿ ಅಂಕಿ ಅಂಶಗಳ ಬಗ್ಗೆ ಸಂಗ್ರಹಿಸುವ ಮಾಹಿತಿಯ ಗುಣಮಟ್ಟವನ್ನು ಸುಧಾರಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

ಪ್ರತಿ ಸಾಲಿನಲ್ಲಿ ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ತಮ್ಮ ತಾಂತ್ರಿಕ ಸಿಬ್ಬಂದಿಯಿಂದ ಪ್ರತಿ ಋತುವಿಗೆ ಕೇಂದ್ರ ಮಾದರಿ ಮತ್ತು ರಾಜ್ಯ ಮಾದರಿ ಗ್ರಾಮಗಳು ಎಂದು ಪ್ರತ್ಯೇಕವಾಗಿ ಆರಿಸಿ, ಈ ಆರಿಸಿದ ಗ್ರಾಮಗಳ ಮೇಲ್ವಿಚಾರಣಾ ಕಾರ್ಯಗಳನ್ನು ನಡೆಸಬೇಕಾಗಿರುತ್ತದೆ ಹಾಗೂ ಈ ಪದ್ಧತಿಯ ಶಾಶ್ವತ ಅಭಿವೃದ್ಧಿಗಾಗಿ ಕೆಳಕಂಡ ಪರಿಹಾರೋಪಾಯ ಕ್ರಮಗಳನ್ನು ಕೈಗೊಳ್ಳುವಂತೆ ಸಲಹೆ ನೀಡುತ್ತದೆ.

1) ಗ್ರಾಮಲೆಕ್ಕಿಗರು ಬೆಳೆ ತನಿಖೆಯನ್ನು ಸಂಬಂಧಿಸಿದ ಗ್ರಾಮಗಳಲ್ಲಿ ಆಯಾ ಋತುಗಳಲ್ಲಿ ಕೈಗೊಂಡಿದ್ದಾರೆಯೆ ಎಂಬ ಕುರಿತು?

2) ಗ್ರಾಮಲೆಕ್ಕಿಗರು ಸಿದ್ದಪಡಿಸಿರುವ ಬೆಳೆ ಘೋಷ್ವಾರೆಯು ಪಹಣಿ ಪುಸ್ತಕದಲ್ಲಿ ದಾಖಲಾಗಿರುವುದಕ್ಕೆ ಸರಿಹೊಂದುತ್ತದೆಯೇ?

3) ಬೆಳೆ ಅಂದಾಜು ಸಮೀಕ್ಷೆ ಕಾರ್ಯದ ಮೂಲ ಕಾರ್ಯಕರ್ತರು ನಿಗಧಿತ ಮಾರ್ಗಸೂಚಿಗಳಂತೆ ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಂಡಿದ್ದಾರೆಯೆ? ಎಂಬ ಕುರಿತು ಮೇಲ್ವಿಚಾರಣೆ ನಡೆಸುವ ಕಾರ್ಯಕ್ರಮ ಇದಾಗಿರುತ್ತದೆ.

**ಅಂದಾಜಿಸಿದ ಪ್ರಯೋಜನ:** ಕೃಷಿ ಅಂಕಿ ಅಂಶಗಳ ಗುಣಮಟ್ಟ, ವಿಶ್ವಸನೀಯತೆ ಹಾಗೂ ಸಮಯಪಾಲನೆಯನ್ನು ಸುಧಾರಿಸುವುದು.

**ಹಣಕಾಸು**

(ರೂ.ಲಕ್ಷಗಳಲ್ಲಿ):

| ಪರಿಷ್ಕೃತ ಅಂದಾಜು 2011-12 | | ಪರಿಷ್ಕೃತ ಅಂದಾಜು 2012-13 | | ಆಯವ್ಯಯ ಅಂದಾಜು 2013-14 | |
|---|---|---|---|---|---|
| **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** |
| 0.00 | 37.86 | 0.00 | 43.84 | 0.00 | 40.54 |

**ಖರ್ಚು**

(ರೂ.ಲಕ್ಷಗಳಲ್ಲಿ):

| ವಾಸ್ತವಿಕ/ಲೆಕ್ಕ 2011-12 | | ವಾಸ್ತವಿಕ/ಲೆಕ್ಕ 2012-13 | | ಆಯವ್ಯಯ ಅಂದಾಜು 2013-14 | |
|---|---|---|---|---|---|
| **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** |
| 0.00 | 35.07 | 0.00 | 36.90 | 0.00 | 40.31 |

**ಭೌತಿಕ ಸಾಧನೆ, (ಎ.ಎಸ್ 1.0 ಮತ್ತು ಎ.ಎಸ್ 1.1 ಅನುಸೂಚಿಗಳು).**

| 2011-12 | | 2012-13 | | 2013-14 | |
|---|---|---|---|---|---|
| ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ |
| 1800 | 1800 | 1800 | 1800 | 1800 | 864 |

**ಭೌತಿಕ ಸಾಧನೆ, (ಎ.ಎಸ್ 2.0 ಅನುಸೂಚಿಗಳು)**

| 2011-12 | | 2012-13 | | 2013-14 | |
|---|---|---|---|---|---|
| ಗುರಿ | ಸಾಧನೆ | ಗುರಿ | ಸಾಧನೆ | ಗುರಿ | ಸಾಧನೆ |
| 900 | 892 | 900 | 880 | 900 | 544 |

**ಸಾಧನೆ:** 2012–13ನೇ ಸಾಲಿನ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಋತುವಿನ ತಲಾ 300 ಗ್ರಾಮದಂತೆ ಒಟ್ಟು 1800 ಎ.ಎಸ್ 1.0 ಅನುಸೂಚಿಗಳು ಮತ್ತು 1800 ಎ.ಎಸ್ 1.1 ಅನುಸೂಚಿಗಳು ಸ್ವೀಕರಿಸಲಾಗಿದ್ದು, ಸಂಕೇತಿಕರಣ, ಗಣಕೀಕರಣ ಕಾರ್ಯವು ಮುಗಿದಿರುತ್ತದೆ. 900 (ಎ.ಎಸ್ 2.0) ಬೆಳೆ ಕಟಾವು ಪ್ರಯೋಗಗಳು ನಿಗದಿಯಾಗಿದ್ದು, ಈ ಪೈಕಿ ಮುಂಗಾರು ಋತುವಿಗೆ 604 ಪ್ರಯೋಗಗಳು ಕಟಾವು ಹಂತದಲ್ಲಿ ಮೇಲ್ವಿಚಾರಣೆಯಾಗಿರುತ್ತದೆ, ಹಿಂಗಾರು ಋತುವಿಗೆ 200 ಪ್ರಯೋಗಗಳು ಕಟಾವು ಹಂತದಲ್ಲಿ ಮೇಲ್ವಿಚಾರಣೆಯಾಗಿರುತ್ತದೆ, ಬೇಸಿಗೆ ಋತುವಿಗೆ 76 ಪ್ರಯೋಗಗಳು ಮೇಲ್ವಿಚಾರಣೆಯಾಗಿ ಬಂದಿರುತ್ತದೆ. 2012–13ನೇ ಸಾಲಿನ ಕೃಷಿ ಉತ್ಪನ್ನಗಳ ಅಂದಾಜು ಸ್ಥಿತಿಗತಿಗಳ ವರದಿಗೆ ಸಂಬಂಧಿಸಿದಂತೆ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಋತುಗಳ ಕೀ ತಃಖ್ತೆಗಳನ್ನು ತಯಾರಿಸಿ **ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ**ಯವರಿಗೆ ಕಳುಹಿಸಲಾಗಿದೆ.

2013–14ನೇ ಸಾಲಿಗೆ ಮುಂಗಾರು ಋತುವಿನ ಬೆಳೆ ಕ್ಷೇತ್ರ ಕಾರ್ಯ ಮುಗಿದಿದ್ದು, 300 ಗ್ರಾಮಗಳಿಗೆ 300 ಅನುಸೂಚಿಗಳು ಎ.ಎಸ್ 1.0 ಸ್ವೀಕೃತವಾಗಿದ್ದು, ಬೆಳೆ ಕ್ಷೇತ್ರ ಒಗ್ಗೂಡುವಿಕೆ (ಎ.ಎಸ್ 1.1) 300 ಗ್ರಾಮಗಳಿಗೆ ಮುಗಿದಿದ್ದು, 292 ಎ.ಎಸ್ 1.1 ಅನುಸೂಚಿಗಳು ಬಂದಿರುತ್ತದೆ. ಹಿಂಗಾರು ಋತುವಿನ ಬೆಳೆ ಕ್ಷೇತ್ರ ಕಾರ್ಯ ಮುಗಿದಿದ್ದು, 300 ಗ್ರಾಮಗಳಿಗೆ 208 ಅನುಸೂಚಿಗಳು ಎ.ಎಸ್ 1.0 ಸ್ವೀಕೃತವಾಗಿದ್ದು, ಬೆಳೆ ಕ್ಷೇತ್ರ ಒಗ್ಗೂಡುವಿಕೆ 300 ಗ್ರಾಮಗಳಿಗೆ ಮುಗಿದಿದ್ದು, 64 ಎ.ಎಸ್ 1.1 ಅನುಸೂಚಿಗಳು ಬಂದಿರುತ್ತದೆ. 620 (ಎ.ಎಸ್ 2.0) ಬೆಳೆ ಕಟಾವು ಪ್ರಯೋಗಗಳಲ್ಲಿ ಮುಂಗಾರು ಋತುವಿಗೆ 544 ಪ್ರಯೋಗಗಳು ಕಟಾವು ಹಂತದಲ್ಲಿ ಮೇಲ್ವಿಚಾರಣೆಯಾಗಿ ವರದಿ ಬಂದಿರುತ್ತದೆ.

2011–12ನೇ ಸಾಲಿನ **"ಕೃಷಿ ಉತ್ಪನ್ನಗಳ ಸ್ಥಿತಿಗತಿಗಳ"** ವರದಿಯನ್ನು ತಯಾರಿಸಿ ಅನುಮೋದನೆ ಪಡೆಯಲಾಗಿದ್ದು, ಕೇಂದ್ರ ಸರ್ಕಾರಕ್ಕೆ ವರದಿಯನ್ನು ಕಳುಹಿಸುವ ಹಂತದಲ್ಲಿರುತ್ತದೆ.

**ಯೋಜನೆ: ಹಣ್ಣು, ತರಕಾರಿ ಮತ್ತು ಉಪಬೆಳೆಗಳ ಅಂದಾಜು ಸಮೀಕ್ಷೆ**

**ಆಯವ್ಯಯ ಶೀರ್ಷಿಕೆ** : 3454–02–204–0–08

**ಯೋಜನೇತರ: ಕೇಂದ್ರ ವಲಯ ಯೋಜನೆ** ::ಶೇಕಡ 100 : ರಷ್ಟು

**ಉದ್ದೇಶ**: ರಾಜ್ಯದಲ್ಲಿ ಬೆಳೆಯಲಾಗುವ ಆಯ್ದ ಪ್ರಮುಖ ಹಣ್ಣು ಮತ್ತು ತರಕಾರಿ ಬೆಳೆಗಳ ಕ್ಷೇತ್ರ, ಉತ್ಪಾದನೆ ಹಾಗೂ ಇಳುವರಿ ವಿವರಗಳನ್ನು ಅಂದಾಜಿಸುವುದು ಈ ಯೋಜನೆಯ ಮುಖ್ಯ ಉದ್ದೇಶ. ಈ ಸಮೀಕ್ಷೆಯು ಹಣ್ಣಿನ ಬೆಳೆಗಳಾದ ಮಾವು, ಬಾಳೆ, ದ್ರಾಕ್ಷಿ, ಸೀಬೆ, ಸಪೋಟ, ನಿಂಬೆ ಮತ್ತು ದಾಳಿಂಬೆ ತರಕಾರಿ ಬೆಳೆಗಳಾದ ಟೊಮಾಟೋ, ಬದನೆ, ಹುರುಳಿ, ಎಲೆಕೋಸು ಹಾಗೂ ಉಪಬೆಳೆ ಅರಶಿನವನ್ನು ಒಳಗೊಂಡಿರುತ್ತದೆ.

**ಅಂದಾಜಿಸಿದ ಪ್ರಯೋಜನ:** ಸಮೀಕ್ಷೆಯಡಿ ತೆಗೆದುಕೊಂಡ ಬೆಳೆಗಳ ಕ್ಷೇತ್ರ, ಇಳುವರಿ ಮತ್ತು ಉತ್ಪಾದನೆಗಳನ್ನು ಅಂದಾಜಿಸುವ್ವದು.

**ಹಣಕಾಸು**

(ರೂ.ಲಕ್ಷಗಳಲ್ಲಿ):

| ಪರಿಷ್ಕೃತ ಅಂದಾಜು 2011–12 | | ಪರಿಷ್ಕೃತ ಅಂದಾಜು 2012–13 | | ಆಯವ್ಯಯ ಅಂದಾಜು 2013–14 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| 0.00 | 173.53 | 0.00 | 204.75 | 0.00 | 209.17 |

**ಖರ್ಚು**

(ರೂ.ಲಕ್ಷಗಳಲ್ಲಿ):

| ವಾಸ್ತವಿಕ/ ಲೆಕ್ಕ 2011–12 | | ವಾಸ್ತವಿಕ/ ಲೆಕ್ಕ 2012–13 | | ಆಯವ್ಯಯ ಅಂದಾಜು 2013–14 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| 0.00 | 142.13 | 0.00 | 176.25 | 0.00 | 192.17 |

**ಭೌತಿಕ ಸಾಧನೆ, (ಗ್ರಾಮಗಳ ಸಂಖ್ಯೆ)**

| 2011-12 | 2012-13 | 2013-14 |
|---|---|---|
| 3796 | 3738 | 2986 |

**ಸಾಧನೆ:** 2013–14ನೇ ಸಾಲಿನಲ್ಲಿ 3742 ಗ್ರಾಮಗಳನ್ನು ಹಣ್ಣು ಮತ್ತು ತರಕಾರಿ ಹಾಗೂ ಉಪಬೆಳೆಗಳ ಸಮೀಕ್ಷೆಗೆ ಆಯ್ಕೆ ಮಾಡಲಾಗಿದ್ದು, ಈ ಪೈಕಿ 1364 ಗ್ರಾಮಗಳನ್ನು ಹಣ್ಣಿನ ಬೆಳೆಗಳಿಗೆ, 2266 ಗ್ರಾಮಗಳನ್ನು ತರಕಾರಿ ಬೆಳೆಗಳಿಗೆ ಹಾಗೂ ವಾರ್ಷಿಕ ಉಪಬೆಳೆಯಾದ ಅರಿಶಿಣ ಬೆಳೆಗೆ 112 ಗ್ರಾಮಗಳನ್ನು ಕ್ಷೇತ್ರ ಗಣತಿ ಮತ್ತು ಇಳುವರಿ ಅಂದಾಜು ಸಮೀಕ್ಷೆಗೆ ಆಯ್ಕೆ ಮಾಡಲಾಗಿದೆ.

ಇಲ್ಲಿಯವರೆಗೆ ಹಣ್ಣಿನ ಬೆಳೆಗಳ 840 ಕ್ಷೇತ್ರ ಗಣತಿ ನಮೂನೆಗಳು ಮತ್ತು ತರಕಾರಿ ಬೆಳೆಗಳಿಗೆ ಮುಂಗಾರು ಹಂಗಾಮಿನಲ್ಲಿ 885, ಹಿಂಗಾರು ಹಂಗಾಮಿನಲ್ಲಿ 433 ಹಾಗೂ ಉಪಬೆಳೆಯಾದ ಅರಿಶಿಣ ಬೆಳೆಗೆ 74 ಕ್ಷೇತ್ರ ಗಣತಿ ನಮೂನೆಗಳನ್ನು ಹಾಗೂ ಮುಂಗಾರು ಹಂಗಾಮಿನ ತರಕಾರಿ ಬೆಳೆಗಳಿಗೆ 828 ಇಳುವರಿ ನಮೂನೆಗಳು ಸ್ವೀಕೃತವಾಗಿರುತ್ತದೆ.

**ಯೋಜನೆ: ಪ್ರಮುಖ ಅಂಕಿ ಅಂಶಗಳು**

**ಆಯವ್ಯಯ ಲೆಕ್ಕಶೀರ್ಷಿಕೆ**: 3454–02–111–0–00

**ಯೋಜನೇತರ ಕಾರ್ಯಕ್ರಮ**: ಕೇಂದ್ರ ರಾಜ್ಯದ ಪಾಲು :: 0 : 100

**ಉದ್ದೇಶ:** ಜನನ, ಮರಣಗಳ ನೋಂದಣಿ ಅಧಿನಿಯಮ, 1969 ರಡಿಯಲ್ಲಿರುವ ನೋಂದಣಿ ದಾಖಲೆಗಳು ಎರಡು ಉದ್ದೇಶಗಳಿಗೆ ಉಪಯೋಗವಾಗುತ್ತವೆ. ಮೊದಲನೆಯದಾಗಿ ಇವುಗಳನ್ನು ಕಾನೂನು ದಸ್ತಾವೇಜುಗಳ ಉಪಯೋಗಕ್ಕೆ ಹಾಗೂ ಎರಡನೆಯದಾಗಿ ಈ ಅಧಿನಿಯಮದಲ್ಲಿ ಹೊರತರುವ ವಾರ್ಷಿಕ ವರದಿಗೆ ಬೇಕಾಗುವ ಪ್ರಮುಖ ಅಂಕಿಅಂಶಗಳನ್ನು ನೀಡುವ ಮೂಲವಾಗಿದೆ.

**ಅಂದಾಜಿಸಿದ ಪ್ರಯೋಜನ:** ಲಿಂಗವಾರು, ಉದ್ಯೋಗವಾರು, ಧರ್ಮವಾರು, ಜನನ ಕಾಲದಲ್ಲಿ ತಂದೆ ಮತ್ತು ತಾಯಿಯ ವಿದ್ಯಾರ್ಹತೆ ಮಟ್ಟ ಜನನ ದರ, ಪ್ರಸವ ಸಮಯದಲ್ಲಿನ ಆರೈಕೆ ಮತ್ತು ವಿಧಾನ, ಗರ್ಭಧಾರಣೆಯ ಕಾಲಾವಧಿ, ಜನಿಸಿದಾಗ ತೂಕ, ಮರಣ ದರ, ಮರಣದ ವಾಸ್ತವಿಕ ಕಾರಣ, ವಿವಿಧ ಚಟಗಳಿಂದಾದ ಮರಣ, ಶಿಶು ಮರಣ, ತಾಯಂದಿರ ಮರಣ, ಮರಣ ಕಾಲದಲ್ಲಿನ ಆರೈಕೆ ಹಾಗೂ ನಿರ್ಜೀವ ಜನನದ ಅಂಕಿಅಂಶಗಳನ್ನು ಕ್ರೋಢೀಕರಿಸುವುದು. ಒಟ್ಟಾರೆ 53 ಕೋಷ್ಟಕಗಳನ್ನು ವರದಿಯು ಹೊಂದಿದೆ.

**ಹಣಕಾಸು:**

(ರೂ.ಲಕ್ಷಗಳಲ್ಲಿ):

| ಪರಿಷ್ಕೃತ ಅಂದಾಜು 2011–12 | | ಪರಿಷ್ಕೃತ ಅಂದಾಜು 2012–13 | | ಆಯವ್ಯಯ ಅಂದಾಜು 2013–14 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| 0.00 | 46.42 | 0.00 | 41.17 | 00.00 | 43.23 |

**ವೆಚ್ಚ:**

(ರೂ.ಲಕ್ಷಗಳಲ್ಲಿ):

| ವಾಸ್ತವಿಕ/ ಲೆಕ್ಕ 2011–12 | | ವಾಸ್ತವಿಕ/ ಲೆಕ್ಕ 2012–13 | | ಆಯವ್ಯಯ ಅಂದಾಜು 2013–14 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| 0.00 | 45.78 | 0.00 | 40.51 | 0.00 | 14.25 |

**ಭೌತಿಕ ಸಾಧನೆಗಳು: (ಯೂನಿಟ್‌ಗಳು– ಸಾಂಖ್ಯಿಕ ವರದಿಗಳ ಗಣಕೀಕರಣ):**

| 2011-12 | 2012-13 | 2013-14 |
|---|---|---|
| 28,059 ಗ್ರಾಮಾಂತರ ಹಾಗೂ 384 ನಗರ ಪ್ರದೇಶಗಳ ನೋಂದಣಿ ಘಟಕಗಳು | 28,382 ಗ್ರಾಮಾಂತರ ಹಾಗೂ 408 ನಗರ ಪ್ರದೇಶಗಳ ನೋಂದಣಿ ಘಟಕಗಳು | 29165 ಗ್ರಾಮಾಂತರ ಹಾಗೂ 459 ನಗರ ಪ್ರದೇಶಗಳ ನೋಂದಣಿ ಘಟಕಗಳು |

ಪ್ರಸಕ್ತ ಸಾಲಿನಲ್ಲಿ 2012ನೇ ಸಾಲಿಗೆ ಸಂಬಂಧಿಸಿದ ಜನನ ಮರಣ ಘಟನೆಗಳ ಸಾಂಖ್ಯಿಕ ಮಾಹಿತಿಯನ್ನು ಗಣಕೀಕರಣಗೊಳಿಸಲು ಕ್ರಮವಹಿಸಿದೆ. ಆಯವ್ಯಯ ಶಾಖೆಯ ಕ್ರಿಯಾ ಯೋಜನೆಯಂತೆ ಈ ಸಾಲಿನಲ್ಲಿ ರೂ.11.37 ಲಕ್ಷಗಳು ವೆಚ್ಚವಾಗಿರುತ್ತದೆ.

**ಯೋಜನೆ : ಬೆಳೆ ಕಟಾವು ಮತ್ತು ರಾಷ್ಟ್ರೀಯ ಮಾದರಿ ಸಮೀಕ್ಷೆ ನಗರ ಸೇವೆಗಳು**

**ಆಯವ್ಯಯ ಲೆಕ್ಕಶೀರ್ಷಿಕೆ:** 3454–02–800–0–01, 2011–12 ಸಾಲಿನವರೆಗೂ ಹಾಗೂ 2012–13ನೇ ಸಾಲಿನಿಂದ 3454–02–111–0–02.

**ಯೋಜನೇತರ ಕಾರ್ಯಕ್ರಮ** : ರಾಜ್ಯ ಯೋಜನೆ: ಶೇಕಡ:100ರಷ್ಟು

**ಉದ್ದೇಶ:** ಈ ಯೋಜನೆಯ ಮೂಲ ಉದ್ದೇಶವೇನೆಂದರೆ ಬೆಳೆ ಅಂದಾಜು ಸಮೀಕ್ಷೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಕೂಲ ಕಾರ್ಮಿಕರಿಗೆ ಬೆಳೆ ಕಟಾವು ಪ್ರಯೋಗವನ್ನು ಕೈಗೊಳ್ಳಲು ಕೂಲಿ ನೀಡುವುದು.

**ಅಂದಾಜಿಸಿದ ಪ್ರಯೋಜನ:** ಪ್ರಕೃತಿ ವಿಕೋಪದಿಂದ ತೊಂದರೆಯಾದರೆ ಬೆಳೆ ಪರಿಹಾರ ಒದಗಿಸಿಕೊಡಲಾಗುವುದು.

**ಹಣಕಾಸು:**

(ರೂ.ಲಕ್ಷಗಳಲ್ಲಿ):

| ಪರಿಷ್ಕೃತ ಅಂದಾಜು 2011–12 | | ಪರಿಷ್ಕೃತ ಅಂದಾಜು 2012–13 | | ಆಯವ್ಯಯ ಅಂದಾಜು 2013–14 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| 0.00 | 52.63 | 0.00 | 68.25 | 00.00 | 171.66 |

**ವೆಚ್ಚ:**

(ರೂ.ಲಕ್ಷಗಳಲ್ಲಿ):

| ವಾಸ್ತವಿಕ/ಲೆಕ್ಕ 2011–12 | | ವಾಸ್ತವಿಕ/ಲೆಕ್ಕ 2012–13 | | ಆಯವ್ಯಯ ಅಂದಾಜು 2013–14 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| 0.00 | 33.22 | 0.00 | 28.29 | 0.00 | 64.93 |

**ಭೌತಿಕ ಸಾಧನೆಗಳು: (ಬೆಳೆ ಕಟಾವು ಪ್ರಯೋಗಗಳ ಸಂಖ್ಯೆ)**

| 2011-12 | 2012-13 | 2013-14 (ಯೋಜಿತ) |
|---|---|---|
| 85243 | 83961 | 94018 |

**ವೇತನ ಕಾರ್ಯಕ್ರಮಗಳು:**

**ಹಣಕಾಸು:**

(ರೂ.ಲಕ್ಷಗಳಲ್ಲಿ):

| ಕಾರ್ಯಕ್ರಮದ ಹೆಸರು | ಲೆಕ್ಕ ಶೀರ್ಷಿಕೆ | ವಾಸ್ತವಿಕ/ಲೆಕ್ಕ 2011–12 | | ಪರಿಷ್ಕೃತ ಅಂದಾಜು 2012–13 | | ಆಯವ್ಯಯ ಅಂದಾಜು 2013–14 | |
|---|---|---|---|---|---|---|---|
| | | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ | 3454-02-204-0-01 | 0.00 | 1842.42 | 0.00 | 2002.24 | 00.00 | 1959.11 |
| ಭೂ ಸುಧಾರಣೆಗಳಿಗೆ ವರದಿಗಳನ್ನು ಕ್ರೋಢೀಕರಿಸಲು ಕೋಶದ ಸೃಜನೆ | 2506-00-101-5-01 | 0.00 | 2.95 | 0.00 | 7.13 | 0.00 | 4.90 |

**ವೆಚ್ಚ:**

(ರೂ.ಲಕ್ಷಗಳಲ್ಲಿ):

| ಕಾರ್ಯಕ್ರಮದ ಹೆಸರು | ಲೆಕ್ಕ ಶೀರ್ಷಿಕೆ | ವಾಸ್ತವಿಕ/ಲೆಕ್ಕ 2011–12 | | ಪರಿಷ್ಕೃತ ಅಂದಾಜು 2012–13 | | ಆಯವ್ಯಯ ಅಂದಾಜು 2013–14 | |
|---|---|---|---|---|---|---|---|
| | | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ | 3454-02-204-0-01 | 0.00 | 1638.45 | 0.00 | 1790.39 | 00.00 | 2086.36 |
| ಭೂ ಸುಧಾರಣೆಗಳಿಗೆ ವರದಿಗಳನ್ನು ಕ್ರೋಢೀಕರಿಸಲು ಕೋಶದ ಸೃಜನೆ | 2506-00-101-5-01 | 0.00 | 1.79 | 0.00 | 2.36 | 0.00 | 2.72 |

**ಯೋಜನೆ : ಹದಿಮೂರನೇ ಹಣಕಾಸು ಆಯೋಗದ ಅನುದಾನ (13FCG):** ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಸಾಂಖ್ಯಿಕ ವ್ಯವಸ್ಥೆಯನ್ನು ಬಲಪಡಿಸುವುದು

**ಆಯವ್ಯಯ ಲೆಕ್ಕಶೀರ್ಷಿಕೆ:** 3454–02–111–0–01

**ಯೋಜನೇತರ ಕಾರ್ಯಕ್ರಮ** : ಕೇಂದ್ರ ಯೋಜನೆ: ಶೇಕಡ :100 ರಷ್ಟು

**ಉದ್ದೇಶ:** ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಸಾಂಖ್ಯಿಕ ವ್ಯವಸ್ಥೆಯನ್ನು ಬಲಪಡಿಸಲು, ಮಾಹಿತಿಯ ಗುಣಮಟ್ಟವನ್ನು ಹಾಗೂ ಉತ್ಪಾದನಾ ಮಟ್ಟವನ್ನು ಹೆಚ್ಚಿಸಲು ನೀತಿ ನಿರೂಪಣೆಗಳ ಮೇಲೆ ಆರ್ಥಿಕ ಪ್ರಭಾವನ್ನು ಅಂದಾಜಿಸಲು 13ನೇ ಹಣಕಾಸು ಸಮಿತಿಯು 29.00 ಕೋಟಿ ರೂಗಳ ಅನುದಾನವನ್ನು 2010–15ರ ಅವಧಿಗೆ ಮಂಜೂರು ಮಾಡಿದೆ.

ಈ ಮೊತ್ತದಲ್ಲಿ ಕಾಲು ಭಾಗವನ್ನು ರಾಜ್ಯದ ಕೇಂದ್ರ ಕಚೇರಿಯ ಸಾಂಖ್ಯಿಕ ವ್ಯವಸ್ಥೆಯನ್ನು ಬಲಪಡಿಸಲು ಉಪಯೋಗಿಸಬಹುದಾಗಿದ್ದರೂ ಪ್ರಧಾನವಾಗಿ ಈ ಅನುದಾನವನ್ನು ಪ್ರತಿ ಜಿಲ್ಲೆಗೆ ಒಂದು ಕೋಟಿ ರೂಗಳನ್ನು ನೀಡಲಾಗಿದೆ. ಈ ಕೆಳಕಂಡ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ.

1. ಜಿಲ್ಲಾ ಮಟ್ಟದಲ್ಲಿ ಬಿಸಿನೆಸ್ ರಿಜಿಸ್ಟರ್ ನಿರ್ವಹಣೆ.
2. ಸ್ಥಳೀಯ ಸಂಸ್ಥೆಗಳ ಲೆಕ್ಕ ಪತ್ರಗಳ ಮಾಹಿತಿ ಕಲೆ ಹಾಕುವುದು.
3. ಪ್ರಮುಖ ತೋಟಗಾರಿಕಾ ಬೆಳೆಗಳ ಮೂಲಾಧಾರ ಸಮೀಕ್ಷೆ.
4. ಜಿಲ್ಲೆಗಳಿಗೆ ರಾಜ್ಯದೊಂದಿಗೆ ನೆಟ್ ವರ್ಕ್ ಸಂಪರ್ಕವನ್ನು ಕಲ್ಪಿಸುವುದು.
5. ರಾಜ್ಯ ಹಾಗೂ ಕೇಂದ್ರ ಮಾದರಿಗಳನ್ನು ಒಗ್ಗೂಡಿಸುವುದು.

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವಲ್ಲದೆ ಕಾರ್ಮಿಕ, ಕಾರ್ಖಾನೆ ಮತ್ತು ಬಾಯ್ಲರ್‌ಗಳು, ತೋಟಗಾರಿಕೆ ಹಾಗೂ ಕೃಷಿ ಮಾರುಕಟ್ಟೆ ಇಲಾಖೆಗಳಿಗೆ ಸಾಂಖ್ಯಿಕ ಸಂಬಂಧಿಸಿದ ಚಟುವಟಿಕೆಗಳಿಗೆ 13ನೇ ಹಣಕಾಸು ಆಯೋಗದಡಿ ಅನುದಾನವನ್ನು ನೀಡಲಾಗಿದೆ.

ಬಿಡುಗಡೆಯಾದ ರೂ. 1740.00 ಲಕ್ಷಗಳಲ್ಲಿ ಮಾರ್ಚ್ 2014ರ ಅಂತ್ಯಕ್ಕೆ ಒಟ್ಟು ರೂ. 1004.76 ಲಕ್ಷಗಳನ್ನು ವಿವಿಧ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಮೇಲ್ಕಂಡ ಯೋಜನೆಯಡಿ ವೆಚ್ಚಮಾಡಲಾಗಿದೆ.

ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ ಅಡಿ, ಆನ್‌ಲೈನ್ ನೊಂದಣಿ, ನವೀಕರಣ ಮುಂತಾದ ಚಟುವಟಿಕೆಗಳಿಗೆ Geo-portalನ್ನು ಕಾರ್ಮಿಕ ಇಲಾಖೆಯಿಂದ ಅನಾವರಣಗೊಳಿಸಲಾಗಿದೆ.

ನೋಂದಣಿಗಳ ಗಣಕೀಕರಣ, ತಿದ್ದುಪಡಿ, ನವೀಕರಣ ಹಾಗೂ ವಾರ್ಷಿಕ ಲೆಕ್ಕಪತ್ರ ಸಲ್ಲಿಸುವಿಕೆಗಳಿಗೆ ಕಾರ್ಖಾನೆ ಮತ್ತು ಬಾಯ್ಲರ್‌ಗಳ ಇಲಾಖೆಯಿಂದ "ಇ–ಸುರಕ್ಷೆ" ಎಂಬ ಸಾಫ್ಟ್‌ವೇರ್‌ನ್ನು ಅಭಿವೃದ್ಧಿಪಡಿಸಲಾಗಿದೆ.

ಸಾಮಾನ್ಯ ವ್ಯವಹಾರ ದಾಖಲಾತಿ ವಹಿಯನ್ನು ತಯಾರಿಸುವ ಸಲುವಾಗಿ, 7 ವಿವಿಧ ಕಾಯ್ದೆಯಡಿ ನೋಂದಾಸಿಸಲ್ಪಟ್ಟ ಉದ್ಯಮಗಳ ಪಟ್ಟಿಯನ್ನು ಸಾಫ್ಟ್ ನಮೂನೆಯಲ್ಲಿ ಕೆಂದ್ರ ಸಾಂಖ್ಯಿಕ ಕಛೇರಿ ಭಾರತ ಸರ್ಕಾರದ ಮಾರ್ಗದರ್ಶನದಂತೆ ಪಡೆಯಲಾಗಿದೆ. ಇದನ್ನು ಜಿಲ್ಲಾವಾರು ಹಾಗೂ ಗ್ರಾಮೀಣ/ನಗರವಾರು/ವಿಂಗಡಿಸಲಾಗಿದೆ ಈ ಪಟ್ಟಿಯನ್ನು 6ನೇ ಆರ್ಥಿಕ ಗಣತಿಯ ಕ್ಷೇತ್ರ ಕಾರ್ಯದಲ್ಲಿ ಇಂದೀಕರಸಲಾಗುವುದು.

ಜಿಲ್ಲಾ ಕಛೇರಿಗಳಿಗೆ ನೆಟ್‌ವರ್ಕ್ ಸಂಪರ್ಕ ವ್ಯವಸ್ಥೆಯನ್ನು ಕಲ್ಪಸಿಲಾಗಿದೆ.

**ಹಣಕಾಸು:**

(ರೂ.ಲಕ್ಷಗಳಲ್ಲಿ):

| ಪರಿಷ್ಕೃತ ಅಂದಾಜು 2011–12 | | ಆಯವ್ಯಯ ಅಂದಾಜು 2012–13 | | ಆಯವ್ಯಯ ಅಂದಾಜು 2013–14 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| 0.00 | 580.00 | 00.00 | 1000.00 | 00.00 | 1140.00 |

**ವೆಚ್ಚ:**

(ರೂ.ಲಕ್ಷಗಳಲ್ಲಿ):

| ವಾಸ್ತವಿಕ /ಲೆಕ್ಕ 2011–12 | | ಆಯವ್ಯಯ ಅಂದಾಜು 2012–13 | | ಆಯವ್ಯಯ ಅಂದಾಜು 2013–14 | |
|---|---|---|---|---|---|
| ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| 0.00 | 172.75 | 0.00 | 459.27 | 0.00 | 372.73 |

**ನಿರ್ದೇಶನಾಲಯದ ಇತರೆ ಚಟುವಟಿಕೆಗಳು** :

**ಕರ್ನಾಟಕ ರಾಜ್ಯದ ಬೆಳೆ ಅಂದಾಜು ಸಮೀಕ್ಷೆ ಹಾಗೂ ಬೆಳೆ ವಿಮಾ ಯೋಜನೆ :**

ಕರ್ನಾಟಕ ರಾಜ್ಯದಲ್ಲಿ ಬೆಳೆಯುವ ಆಹಾರ ಮತ್ತು ಆಹಾರೇತರ ಬೆಳೆಗಳ ಸರಾಸರಿ ಇಳುವರಿಯನ್ನು ಋತುವಾರು ಅಂದಾಜಿಸುವುದು ಬೆಳೆ ವಿಮಾ ಯೋಜನೆ ವಿಭಾಗದ ಮುಖ್ಯ ಕಾರ್ಯವಾಗಿರುತ್ತದೆ. ಈ ವಿಭಾಗವು ಹೋಬಳಿವಾರು, ತಾಲ್ಲೂಕುವಾರು ಹಾಗೂ ಜಿಲ್ಲಾವಾರು ಸರಾಸರಿ ಇಳುವರಿಯನ್ನು ಅಂದಾಜಿಸುತ್ತದೆ. ಬೆಳೆ ವಿಮಾ ಯೋಜನಾ ವಿಭಾಗದ ಅಂಕಿಅಂಶಗಳನ್ನು (ಸರಾಸರಿ ಇಳುವರಿ)

ಮುಖ್ಯವಾಗಿ ಭಾರತೀಯ ಕೃಷಿ ವಿಮಾ ಕಂಪನಿ(ರೈತರ ವಿಮೆ ಹಣವನ್ನು ನಿರ್ಧರಿಸುವುದಕ್ಕೆ) ಹಾಗೂ ಕರ್ನಾಟಕ ಸರ್ಕಾರ ಉಪಯೋಗಿಸುತ್ತದೆ.

**ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿ ಆಯ್ಕೆಯಾದ ಬೆಳೆಗಳು:**

| ವರ್ಷ | ಬೆಳೆ | | |
|---|---|---|---|
| | ಮುಂಗಾರು | ಹಿಂಗಾರು | ಬೇಸಿಗೆ |
| 2011-12 | 25 | 19 | 4 |
| 2012-13 | 25 | 19 | 4 |
| 2013-14 | 25 | 19 | 4 |

**ಯೋಜಿತ ಮತ್ತು ನಿರ್ವಹಿಸಿದ ಪ್ರಯೋಗಗಳು:**

2011–12, 2012–13 ಹಾಗೂ 2013–14ರಲ್ಲಿ ಋತುವಾರು ನಿಯೋಜಿತವಾಗಿರುವ ಮತ್ತು ನಿರ್ವಹಿಸಿರುವ ಬೆಳೆ ಕಟಾವು ಪ್ರಯೋಗಗಳ ವಿವರ.

| ಹಂಗಾಮು | ಬೆಳೆ ಕಟಾವು ಪ್ರಯೋಗಗಳ ಸಂಖ್ಯೆ | | | | | | 2013-14 |
|---|---|---|---|---|---|---|---|
| | 2011-12 | | | 2012-13 | | | |
| | ಯೋಜಿತ | ನಿರ್ವಹಿಸಿದ | ಶೇಕಡ | ಯೋಜಿತ | ನಿರ್ವಹಿಸಿದ | ಶೇಕಡ | ಯೋಜಿತ |
| ಮುಂಗಾರು/ವಾರ್ಷಿಕ | 55130 | 53087 | 96.29 | 57006 | 52217 | 91.59 | 58344 |
| ಹಿಂಗಾರು | 26502 | 25037 | 94.47 | 26926 | 24942 | 92.63 | 27872 |
| ಬೇಸಿಗೆ | 7558 | 7119 | 94.19 | 7676 | 6802 | 88.61 | 7802 |
| ಒಟ್ಟು | 89190 | 85243 | 95.57 | 91608 | 83961 | 91.65 | 94018 |

ಬೆಳೆ ಅಂದಾಜು ಸಮೀಕ್ಷೆ 2012–13

**2012–13 ಹಾಗೂ 2013–14(ಮುಂಗಾರು) ರ ಇಲಾಖಾವಾರು ಬೆಳೆ ಕಟಾವು ಪ್ರಯೋಗಗಳ ಮೇಲ್ವಿಚಾರಣೆ ಕೈಗೊಂಡ ವಿವರ ಈ ಕೆಳಕಂಡಂತಿದೆ.**

| ಇಲಾಖೆ | 2012–13 | | | 2013–14(ಮುಂಗಾರು)* ತಾತ್ಕಾಲಿಕ | | |
|---|---|---|---|---|---|---|
| | ಪ್ರಯೋಗಗಳ ಸಂಖ್ಯೆ | | ಶೇಕಡಾವಾರು ಮೇಲ್ವಿಚಾರಣೆ ಮಾಡಿದ ಪ್ರಯೋಗಗಳು | ಪ್ರಯೋಗಗಳ ಸಂಖ್ಯೆ | | ಶೇಕಡಾವಾರು ಮೇಲ್ವಿಚಾರಣೆ ಮಾಡಿದ ಪ್ರಯೋಗಗಳು |
| | ಮೇಲ್ವಿಚಾರಣೆಗೆ ಹಂಚಿಕೆಯಾದ ಪ್ರಯೋಗಗಳು | ಮೇಲ್ವಿಚಾರಣೆ ಕೈಗೊಂಡ ಪ್ರಯೋಗಗಳು | | ಮೇಲ್ವಿಚಾರಣೆಗೆ ಹಂಚಿಕೆಯಾದ ಪ್ರಯೋಗಗಳು | ಮೇಲ್ವಿಚಾರಣೆ ಕೈಗೊಂಡ ಪ್ರಯೋಗಗಳು | |
| ಸಾಂಖ್ಯಿಕ | 10617 | 10485 | 98.75 | 7450 | 4995 | 67.04 |
| ಕಂದಾಯ | 5897 | 5885 | 99.79 | 2740 | 2470 | 90.14 |
| ಗ್ರಾಮೀಣಾಭಿವೃದ್ಧಿ | 2183 | 1892 | 86.66 | 1985 | 1620 | 81.61 |
| ತೋಟಗಾರಿಕೆ | 1257 | 1230 | 97.85 | 585 | 235 | 40.17 |
| ಕೃಷಿ | 6194 | 6129 | 98.95 | 3885 | 3045 | 78.37 |
| ರಾಷ್ಟ್ರೀಯ ಮಾದರಿ ಸಮೀಕ್ಷಾ ಸಂಸ್ಥೆ | 900 | 880 | 97.77 | 620 | 259 | 41.77 |
| ಒಟ್ಟು | 27048 | 26501 | 97.97 | 17265 | 12624 | 73.11 |

* – 2013–14ನೇ ಸಾಲಿನ ಮುಂಗಾರು ಋತುವಿನ ಮೇಲ್ವಿಚಾರಣಾ ವರದಿಗಳು ಇನ್ನೂ ಕೆಲವು ಜಿಲ್ಲೆಗಳಿಂದ ಬಾಕಿ ಇರುವುದರಿಂದ ತಾತ್ಕಾಲಿಕ ವರದಿಯನ್ನು ಸಲ್ಲಿಸಲಾಗಿದೆ. 2013–14ನೇ ಸಾಲಿನ ಹಿಂಗಾರು / ಬೇಸಿಗೆ ಋತುವಿನ ಮೇಲ್ವಿಚಾರಣಾ ವರದಿಗಳು ಇನ್ನೂ ಪ್ರಗತಿಯಲ್ಲಿವೆ.

**ರಾಷ್ಟ್ರೀಯ ಕೃಷಿ ವಿಮಾ ಯೋಜನೆ:**

2000ನೇ ಸಾಲಿನ ಮುಂಗಾರು ಹಂಗಾಮಿನಿಂದ ಕರ್ನಾಟಕದ್ಯಂತ ಜನಪ್ರಿಯಗೊಳಿಸಿದ ಯೋಜನೆ – ರಾಷ್ಟ್ರೀಯ ಕೃಷಿ ವಿಮಾ ಯೋಜನೆ (RKBY). ಇದರ ಮೂಲ ಉದ್ದೇಶ ರೈತರಿಗೆ ಪ್ರಕೃತಿ ವಿಕೋಪದಿಂದ ಹಾಗೂ ರೋಗರುಜಿನಗಳಿಂದ ಬೆಳೆ ನಷ್ಟಗೊಂಡಾಗ ನಷ್ಟಗೊಂಡ ರೈತರಿಗೆ ಪ್ರೋತ್ಸಾಹ ಮತ್ತು ಉತ್ತೇಜನ ಸಲುವಾಗಿ ಆರ್ಥಿಕವಾಗಿ ಸಹಾಯ ನೀಡುವುದೇ ಇದರ ಮುಖ್ಯ ಉದ್ದೇಶ. ಈ ಯೋಜನೆಯಲ್ಲಿ ಸಾಲಗಾರರು ಮತ್ತು ಸಾಲರಹಿತಗಾರರು ಎಂದು ಗುರುತಿಸಿ, ಬ್ಯಾಂಕಿನಲ್ಲಿ (ಆರ್ಥಿಕ ಸಂಸ್ಥೆಯಲ್ಲಿ) ಸಾಲ ಪಡೆದಿರುವವರು ಕಡ್ಡಾಯವಾಗಿ ಹಾಗೂ ಸಾಲರಹಿತಗಾರರು ಸ್ವಇಚ್ಛೆಯಿಂದ ವಿಮಾ ಪಡೆಯಲು ನೋಂದಾಯಿಸುವುದು ಕಡ್ಡಾಯ. ಈ ಯೋಜನೆಯನ್ನು ಸಣ್ಣ ರೈತರು ಅತೀ ಸಣ್ಣ ರೈತರು ನೋಂದಾಯಿಸಿ ಆರ್ಥಿಕ ಸವಲತ್ತು ಪಡೆಯಲು ಸರ್ಕಾರದಿಂದ ಮೀಸಲಾಗಿರುವ ಹಣವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ತಲಾ 50% ಸಮನಾಗಿ ಫಂಡ್ ರೀತಿಯಲ್ಲಿ ಕಾಯ್ದಿರಿಸಿ ತಾಲ್ಲೂಕುವಾರು ಹಾಗೂ ಹೋಬಳಿವಾರು ನಿರ್ದಿಷ್ಟ ಪಡಿಸಿ ಸರ್ಕಾರದಿಂದ ಆದೇಶ ಹೊರಡಿಸಲಾಗುತ್ತದೆ. 2004 ಮುಂಗಾರಿನಿಂದ ಹೋಬಳಿವಾರು ವಿಸ್ತೀರ್ಣದ ಅನುಸಾರ ಆದೇಶ ಹೊರಡಿಸಲಾಗಿದೆ.

ಬೆಳೆ ಕಟಾವು ಪ್ರಯೋಗಗಳನ್ನು ನಿರ್ವಹಿಸಲು ಕೃಷಿ, ಕಂದಾಯ, ಗ್ರಾಮೀಣಾಭಿವೃದ್ಧಿ, ಜಲಾನಯನ ಇಲಾಖೆಗಳ ಸಹಕಾರ ಪಡೆದು ಪ್ರಯೋಗಗಳನ್ನು ಯಶಸ್ವಿಯಾಗಿ ನಡೆಸಲಾಗುತ್ತದೆ. ಇಳುವರಿಯನ್ನು ಅನುಸರಿಸಿ, ಹೋಬಳಿವಾರು, ಋತುವಾರು 2011–12ರ ಕೃಷಿ ವಿಮಾ ಕಂಪನಿ, ಇಂಡಿಯಾ, ಋತುವಾರು ನಿರ್ದಿಷ್ಟ ಪಡಿಸಿದ ದಿನಾಂಕಗಳಲ್ಲಿ ಅಂದರೆ ಮುಂಗಾರು 31ನೇ ಮಾರ್ಚ್, ಹಿಂಗಾರು 31ನೇ ಜುಲೈ ಮತ್ತು ಬೇಸಿಗೆ 31ನೇ ಆಗಸ್ಟ್, ಈ ಹಂಗಾಮಿನಲ್ಲಿ ರೈತರಿಗೆ ವಿಮಾ ಹಣವನ್ನು ನೀಡಲು ತೀರ್ಮಾನಿಸಲಾಗಿದೆ.

**ಸುಧಾರಿತ ರಾಷ್ಟ್ರೀಯ ಕೃಷಿ ವಿಮಾ ಯೋಜನೆ (MNAIS):** ಪ್ರಸ್ತುತ ಚಾಲ್ತಿಯಲ್ಲಿರುವ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ಸುಧಾರಣೆಗೊಳಿಸಿ ಹೆಚ್ಚು ರೈತರಿಗೆ ಅನುಕೂಲವಾಗುವಂತೆ ಬೆಳೆ ವಿಮೆ ಯೋಜನೆಯನ್ನು ರಾಜ್ಯ ಗ್ರಾಮ ಪಂಚಾಯತಿ ಮಟ್ಟಕ್ಕೆ ವಿಸ್ತರಿಸಲಾಗಿದೆ. ಅದೇ ರೀತಿ ಸುಧಾರಿತ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ಕೇಂದ್ರ ವಲಯದ ಯೋಜನೆಯಡಿಯಲ್ಲಿ ಪ್ರಾಯೋಗಿಕವಾಗಿ 2010–11 ರ ಹಿಂಗಾರು ಋತುವಿನಿಂದ ಭಾರತ ದೇಶದಲ್ಲಿ 50 ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದ್ದು ಹಾಗೂ 3 ಜಿಲ್ಲೆಗಳನ್ನು ಕರ್ನಾಟಕದಲ್ಲಿ ಆಯ್ಕೆ ಮಾಡಲಾಗಿದೆ. ಅವುಗಳು ಗುಲಬರ್ಗಾ, ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗಳಾಗಿರುತ್ತವೆ. 2011–12ರ ಹಿಂಗಾರು ಋತುವಿನಿಂದ ಉತ್ತರಕನ್ನಡ ಜಿಲ್ಲೆಯನ್ನು ಆಯ್ಕೆ ಮಾಡಲಾಗಿದೆ. ಈ ಯೋಜನೆಯ ಉದ್ದೇಶವು ಈ ಕೆಳಕಂಡತಿದೆ.

ಅ. ರೈತರಿಗೆ ಆರ್ಥಿಕ ಸ್ಥಿರತೆ, ಹಾಗೂ ವಿಮೆಯನ್ನು ಪ್ರಕೃತಿ ವಿಕೋಪ ಹಾಗೂ ಕೀಟಭಾಧೆಯಿಂದ ಬೆಳೆ ನಷ್ಟವಾದ ಸಂಧ ಹಾಗೂ ಬಿತ್ತನೆ ಹಾಗೂ ಬಿತ್ತನೆ ತಡೆಹಿಡಿದ ಸಂಂಧರ್ಭದಲ್ಲಿ ಒದಗಿಸುವುದು.

ಆ. ರೈತರಿಗೆ ಸುಧಾರಿತ ವ್ಯವಸಾಯ ಪದ್ಧತಿಯನ್ನು ಅನುಸರಿಸಲು ಹಾಗೂ ಗುಣಮಟ್ಟದ ಬೀಜ, ಗೊಬ್ಬರ ಹಾಗೂ ಕೀಟನಾಶಕಗಳನ್ನು ಬಳಸಲು ಪ್ರೊತ್ಸಾಹ ನೀಡುವುದಾಗಿರುತ್ತದೆ.

ಇ. ಬರಗಾಲದ ವರ್ಷಗಳಲ್ಲಿ ವ್ಯವಸಾಯಕ್ಕೆ ಸಂಬಂಧಿಸಿದ ಆದಾಯವನ್ನು ಸ್ಥಿರೀಕರಣ ಗೊಳಿಸಲು ಸಹಾಯ ಮಾಡುವುದಾಗಿರುತ್ತದೆ.

ಈ. ಗ್ರಾಮ ಪಂಚಾಯತಿ ಮಟ್ಟದಲ್ಲಿ ಬೆಳೆ ವಿಮೆ.

2012–13ನೇ ಸಾಲಿನಲ್ಲಿ ಋತುವಾರು ಸುಧಾರಿತ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿಯಲ್ಲಿ 4 ಜಿಲ್ಲೆಗಳಲ್ಲಿ ಆಯ್ಕೆಯಾದ ಬೆಳೆಗಳ ಸಂಖ್ಯೆ ಈ ಕೆಳಗಿನಂತಿದೆ:

| ಋತು | ಗುಲ್ಬರ್ಗಾ | ಶಿವಮೊಗ್ಗ | ತುಮಕೂರು | ಉತ್ತರ ಕನ್ನಡ |
|---|---|---|---|---|
| ಮುಂಗಾರು | 18 | 7 | 21 | 4 |
| ಹಿಂಗಾರು | 11 | 3 | 4 | 3 |
| ಬೇಸಿಗೆ | 3 | 3 | 4 | 2 |

**ಕೃಷಿ ಅಂಕಿ ಅಂಶಗಳು**

ಋತುವಾರು ಕೃಷಿ ಅಂಕಿ ಅಂಶಗಳನ್ನು ಸಂಗ್ರಹಿಸುವುದು ಈ ಶಾಖೆಯ ಮುಖ್ಯವಾದ ಕರ್ತವ್ಯವಾಗಿದ್ದು, ಈ ಕೆಳಕಂಡ ವರದಿಗಳನ್ನು ತಯಾರಿಸಲಾಗುತ್ತಿದೆ.

- ಮುಂಗಡ ಅಂದಾಜು ವರದಿ.
- ಪೂರ್ಣ ಪರಿಷ್ಕೃತ ಅಂದಾಜುಗಳ ವರದಿ
- ಬೆಳೆ ಕ್ಷೇತ್ರ ಮರುಹೊಂದಾಣಿಕೆ ವರದಿ
- ವಾರ್ಷಿಕ ಋತು ಮತ್ತು ಬೆಳೆಗಳ ಅಂಕಿ ಅಂಶಗಳ ವರದಿ
- ರೈತ ಸಂಪರ್ಕ ಪದ್ದತಿ

**ಮುಂಗಡ ಅಂದಾಜು ವರದಿಗಳು:**

ನಿರ್ದೇಶನಾಲಯವು ಕೃಷಿ ವರ್ಷದ ಎಲ್ಲಾ ಮೂರು ಋತುಗಳಲ್ಲಿ ಬಿತ್ತಲಾದ ಮತ್ತು ಕಟಾವು ಮಾಡಲಾದ ಪ್ರಮುಖ ಬೆಳೆಗಳ ವಿಸ್ತೀರ್ಣ, ಉತ್ಪಾದನೆ ಮತ್ತು ಇಳುವರಿಯನ್ನು ನಾಲ್ಕು ಮುಂಗಡ ಅಂದಾಜು ವರದಿಗಳಲ್ಲಿ ಮತ್ತು ಅಂತಿಮ ಅಂದಾಜು ವರದಿಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಇದು ನಿರ್ದೇಶನಾಲಯದ ಹೊಣೆಗಾರಿಕೆಯಾಗಿದ್ದು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಂದ ಸ್ವೀಕೃತವಾದ ಜಿಲ್ಲಾವಾರು ಅಂಕಿ ಅಂಶಗಳು ಇದಕ್ಕೆ ಆಧಾರವಾಗಿರುತ್ತವೆ ಹಾಗೂ ಈ ಅಂದಾಜುಗಳನ್ನು ಅಂತಿಮಗೊಳಿಸುವುದಕ್ಕೆ ಮುಂಚಿತವಾಗಿ ಕೃಷಿ ಕ್ಷೇತ್ರಾಧಿಕಾರಿಗಳೊಡನೆ ಸಮಾಲೋಚಿಸಲಾಗುತ್ತದೆ.

**ಬೆಳೆ ಕ್ಷೇತ್ರ ಮರುಹೊಂದಾಣಿಕೆ ವರದಿ:**

ಗ್ರಾಮ/ಹೋಬಳಿ/ತಾಲ್ಲೂಕು/ಜಿಲ್ಲಾಮಟ್ಟದಲ್ಲಿ ಬೆಳೆ ಪ್ರದೇಶವನ್ನು ಮರುಹೊಂದಾಣಿಕೆ ಮಾಡುವ ಸಲುವಾಗಿ 2005–06 ರಿಂದ ಬೆಳೆ ಕ್ಷೇತ್ರ ಮರುಹೊಂದಾಣಿಕೆ ಪದ್ಧತಿಯು ಜಾರಿಯಲ್ಲಿರುತ್ತದೆ. ಈ ಪದ್ಧತಿಯಲ್ಲಿ ಸಂಬಂಧಪಟ್ಟ ಇಲಾಖೆಗಳಾದ ಕಂದಾಯ ಕೃಷಿ, ತೋಟಗಾರಿಕೆ, ಜಲ ಸಂಪನ್ಮೂಲ ಮತ್ತು ಕಬ್ಬು ನಿರ್ದೇಶನಾಲಯ ಇಲಾಖೆಗಳ ಅಧಿಕಾರಿಗಳ ಸಮ್ಮುಖದಲ್ಲಿ ವರ್ಷದ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಋತುಗಳ ಬೆಳೆ ಕ್ಷೇತ್ರ ಮರುಹೊಂದಾಣಿಕೆ ಮಾಡಲಾಗುವುದು. 2012–13ನೇ ಸಾಲಿನ ಮರುಹೊಂದಾಣಿಕೆ ವರದಿಗಳನ್ನು ಸಿದ್ದಪಡಿಸಲಾಗಿದ್ದು, 2013–14ನೇ ಸಾಲಿನ ಮುಂಗಾರು ಋತುವಿನ ವರದಿ ಪ್ರಗತಿಯಲ್ಲಿದೆ.

**ವಾರ್ಷಿಕ ಋತು ಮತ್ತು ಬೆಳೆ ಅಂಕಿ ಅಂಶಗಳ ವರದಿ:**

ಕಂದಾಯ ದಾಖಲೆ 'ಪಹಣಿ' ಆಧಾರದ ಮೇಲೆ ವಾರ್ಷಿಕ ಋತು ಮತ್ತು ಬೆಳೆಗಳ ಅಂಕಿ ಅಂಶಗಳ ವರದಿಯನ್ನು ಸಿದ್ದಪಡಿಸಲಾಗುತ್ತದೆ. ಭೂ ವರ್ಗೀಕರಣ ಪ್ರದೇಶ, ನೀರಾವರಿ ಮೂಲವಾರು ಪ್ರದೇಶ, ನೀರಾವರಿಯಾದ ಬೆಳೆಗಳ ಪ್ರದೇಶ, ಋತುವಾರು, ತಳಿವಾರು ಬಿತ್ತನೆಯಾಗಿರುವ ಪ್ರದೇಶಗಳ ಮಾಹಿತಿಯನ್ನು ಒದಗಿಸುವುದು ಇದರ ಮೂಲ ಉದ್ದೇಶವಾಗಿರುತ್ತದೆ. 2011–12 ನೇ ಸಾಲಿನ ವಾರ್ಷಿಕ ಋತು ಮತ್ತು ಬೆಳೆಗಳ ಅಂಕಿ ಅಂಶಗಳ ವರದಿ ಸಿದ್ದಪಡಿಸಿ ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ. 2012–13ನೇ ಸಾಲಿನ ವಾರ್ಷಿಕ ಋತು ಮತ್ತು ಬೆಳೆಗಳ ಅಂಕಿ ಅಂಶಗಳ ವರದಿಯ ಕರಡು ಪ್ರತಿ ತಯಾರಿಸಲಾಗಿದೆ. 2009–10 ನೇ ಸಾಲಿನ ಕರ್ನಾಟಕ ರಾಜ್ಯದ ಕೃಷಿ ಬೆಳೆಗಳ ಕ್ಷೇತ್ರ, ಉತ್ಪಾದನೆ, ಇಳುವರಿ ಮತ್ತು ಬೆಲೆಗಳ ವರದಿಯನ್ನು ಸಿದ್ದಪಡಿಸಿ ಭಾರತ ಸರ್ಕಾರಕ್ಕೆ ಕಳುಹಿಸಲಾಗಿದೆ. 2010–11 ನೇ ಸಾಲಿನ ವರದಿ ಕಾರ್ಯ ಪ್ರಗತಿಯಲ್ಲಿದೆ.

**ಪೂರ್ಣ ಪರಿಷ್ಕೃತ ಅಂದಾಜು:**

ರಾಜ್ಯದ ಪ್ರಮುಖ ಬೆಳೆಗಳ ಕ್ಷೇತ್ರ, ಇಳುವರಿ ಹಾಗೂ ಉತ್ಪಾದನಾ ಅಂದಾಜುಗಳನ್ನು ಸಿದ್ದಪಡಿಸುವ ಕಾರ್ಯ 1955 ರಿಂದ ಜಾರಿಯಲ್ಲಿದ್ದು, 2010–11ರ ಪೂರ್ಣ ಪರಿಷ್ಕೃತ ಅಂದಾಜು ವರದಿಯನ್ನು ಸಿದ್ದಪಡಿಸಿ ಪ್ರಕಟಿಸಲಾಗಿದೆ. ಈ ವರದಿಯಲ್ಲಿ 61 ಪ್ರಮುಖ ಬೆಳೆಗಳ ವಿವರಗಳು ಲಭ್ಯವಿರುತ್ತದೆ. 2011–12ರ ವರದಿಯು ಪ್ರಗತಿಯಲ್ಲಿದೆ.

**ರೈತ ಸಂಪರ್ಕ ಪದ್ದತಿ:**

ಬೆಳೆ ಅಂದಾಜು ಸಮೀಕ್ಷೆಯಲ್ಲಿ ಒಳಗೊಳ್ಳದ 20 ಬೆಳೆಗಳಲ್ಲಿ, 17 ಬೆಳೆಗಳಿಗೆ ರೈತ ಸಂಪರ್ಕದ ಮುಖಾಂತರ (Oral Enquiry Method) ಇಳುವರಿಯನ್ನು ಅಂದಾಜಿಸಲು ಸಮೀಕ್ಷೆ ಕೈಗೊಳ್ಳಲಾಗಿದೆ. 2011–12ನೇ ಸಾಲಿನ ವರದಿಯನ್ನು ಸಿದ್ಧಪಡಿಸಲಾಗಿದೆ 2012–13ನೇ ಸಾಲಿನ ಕಾರ್ಯವು ಪ್ರಗತಿಯಲ್ಲಿದೆ.

**ನಾಗರೀಕ ನೋಂದಣಿ ಪದ್ಧತಿ ಮತ್ತು ರಾಷ್ಟ್ರೀಯ ಮಾದರಿ ಸಮೀಕ್ಷೆ**

**ನಾಗರೀಕ ನೋಂದಣಿ ಪದ್ಧತಿ:**
ಜನನ ಮರಣ ನೋಂದಣಿಯ ಅಧಿನಿಯಮ, 1969ರ ಪ್ರಕಾರ 2011ನೇ ಸಾಲಿನ ವಾರ್ಷಿಕ ವರದಿಯನ್ನು ಪ್ರಕಟಿಸಲಾಗಿದೆ.

**ಮರಣ ಕಾರಣ ವೈದ್ಯಕೀಯ ಪ್ರಮಾಣಪತ್ರ:**

2011ನೇ ಸಾಲಿನ ಮರಣ ಕಾರಣ ವೈದ್ಯಕೀಯ ಪ್ರಮಾಣಪತ್ರ ವಾರ್ಷಿಕ ವರದಿಯನ್ನು ಹೊರತರಲಾಗಿದೆ. 2012ನೇ ಸಾಲಿನ ಮರಣ ಕಾರಣ ವೈದ್ಯಕೀಯ ಪ್ರಮಾಣ ಪತ್ರ ವಾರ್ಷಿಕ ವರದಿಯ ತಯಾರಿಕೆ ಕಾರ್ಯವು ಪ್ರಗತಿಯಲ್ಲಿದೆ.

**ರಾಷ್ಟ್ರೀಯ ಮಾದರಿ ಸಮೀಕ್ಷೆ:**

ರಾಷ್ಟ್ರೀಯ ಮಾದರಿ ಸಮೀಕ್ಷೆಯ 71ನೇ ಸುತ್ತಿನ ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಜನವರಿ 2014 ರಲ್ಲಿ ಕೈಗೊಳ್ಳಲಾಯಿತು. ಕ್ಷೇತ್ರ ಸಮೀಕ್ಷೆ ಕಾರ್ಯವು ಪ್ರಗತಿಯಲ್ಲಿದೆ.

1. ರಾಷ್ಟ್ರೀಯ ಮಾದರಿ ಸಮೀಕ್ಷೆ 66ನೇ ಸುತ್ತಿನ ರಾಜ್ಯ ಮತ್ತು ಕೇಂದ್ರ ಮಾದರಿಗಳ ಮಾಹಿತಿಯನ್ನು ಸಂಯೋಜಿಸಿ ಎರಡು ವರದಿಗಳನ್ನು ಪ್ರಕಟಿಸಲಾಗಿದೆ.

2. ರಾಷ್ಟ್ರೀಯ ಮಾದರಿ ಸಮೀಕ್ಷೆಯ 67ನೇ ಸುತ್ತಿಗೆ ಮಾಹಿತಿ ಸಂಸ್ಕರಣೆ ಕಾರ್ಯವು ಪೂರ್ಣಗೊಂಡಿದ್ದು, ಕೋಷ್ಟಕಗಳ ತಯಾರಿ ಕಾರ್ಯವು ಪ್ರಗತಿಯಲ್ಲಿದೆ.

3. ರಾಷ್ಟ್ರೀಯ ಮಾದರಿ ಸಮೀಕ್ಷೆಯ 68, 69 ಮತ್ತು 70ನೇ ಸುತ್ತುಗಳ ಕ್ಷೇತ್ರ ಕಾರ್ಯ ಮುಗಿದಿದೆ.

4. ರಾಷ್ಟ್ರೀಯ ಮಾದರಿ ಸಮೀಕ್ಷೆ 68ನೇ ಸುತ್ತಿಗೆ ಮಾಹಿತಿ ಗಣಕೀಕರಣ ಕಾರ್ಯ ಪೂರ್ಣಗೊಂಡಿದ್ದು, ಶೇ.50 ಮಾಹಿತಿ ಸಂಸ್ಕರಣೆ ಕಾರ್ಯ ಪೂರ್ಣಗೊಂಡಿರುತ್ತದೆ.

5. ರಾಷ್ಟ್ರೀಯ ಮಾದರಿ ಸಮೀಕ್ಷೆ 69ನೇ ಸುತ್ತಿಗೆ ಶೇ.80% ಮಾಹಿತಿ ಗಣಕೀಕರಣ ಕಾರ್ಯ ಪೂರ್ಣಗೊಂಡಿದ್ದು, ಶೇ.25 ಸಂಸ್ಕರಣೆ ಕಾರ್ಯ ಪೂರ್ಣಗೊಂಡಿರುತ್ತದೆ.

6. ರಾಷ್ಟ್ರೀಯ ಮಾದರಿ ಸಮೀಕ್ಷೆ 70ನೇ ಸುತ್ತಿಗೆ ಕ್ಷೇತ್ರ ಕಾರ್ಯ ಪೂರ್ಣಗೊಂಡಿದ್ದು, ಗಣಕೀಕರಣ ಕಾರ್ಯ ಪ್ರಗತಿಯಲ್ಲಿದೆ.

**ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ:**

ರಾಜ್ಯ ಸರ್ಕಾರಿ ಸೇವೆಯಲ್ಲಿ ದಿನಾಂಕ 31.3.2012 ರಲ್ಲಿದ್ದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರ ಪ್ರಾತಿನಿಧ್ಯದ ವರದಿಯನ್ನು ಹೊರತರಲಾಗಿದೆ.

ರಾಜ್ಯ ಸರ್ಕಾರಿ ಸೇವೆಯಲ್ಲಿ ದಿನಾಂಕ 31.3.2013 ರಲ್ಲಿದ್ದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ನೌಕರರ ಪ್ರಾತಿನಿಧ್ಯದ ವರದಿಗೆ ಸಂಬಂಧಪಟ್ಟಂತೆ ರಾಜ್ಯದ 85 ಇಲಾಖೆಗಳ ಪೈಕಿ 76 ಇಲಾಖೆಗಳಿಂದ ವರದಿ ಸ್ವೀಕೃತವಾಗಿದ್ದು, ಇನ್ನೂ ಸಲ್ಲಿಸದೇ ಇರುವ ಇಲಾಖೆಗಳಿಗೆ ಪತ್ರಗಳನ್ನು ಬರೆಯಲಾಗಿದೆ.

**ರಾಜ್ಯಾದಾಯ, ಕೈಗಾರಿಕ ಮತ್ತು ಬೆಲೆಗಳು**

ಆರ್ಥಿಕ ಸಮೀಕ್ಷೆಯಲ್ಲಿ ಬರುವ ರಾಜ್ಯ ಆದಾಯ, ಬೆಲೆಗಳು ಹಾಗೂ ಕೈಗಾರಿಕೆ ಕುರಿತಂತೆ 2012–13ರ ವರದಿಯ ಎರಡು ಅಧ್ಯಾಯಗಳನ್ನು ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿ ತಯಾರಿಸಲಾಯಿತು.

**ರಾಜ್ಯಾದಾಯ ಅಂದಾಜುಗಳು:**

ರಾಜ್ಯದ ಅರ್ಥವ್ಯವಸ್ಥೆಯ ಯೋಜಿತ ವಿಕಾಸ ಹಾಗೂ ಮಾನವ ಅಭಿವೃದ್ಧಿಯ ಸೂಚ್ಯಂಕಗಳ ರಚನೆಗಾಗಿ ರಾಜ್ಯಾದಾಯ ಅಂದಾಜುಗಳು ಹಾಗೂ ರಾಜ್ಯ ತಲಾವಾರು ಆದಾಯ ಅಂದಾಜುಗಳ ಸೂಚಿಯು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಅಂತರ ರಾಜ್ಯಗಳಲ್ಲಿರುವ ವ್ಯತ್ಯಾಸಗಳನ್ನು ಹಾಗೂ ಸರ್ಕಾರದ ವಿವಿಧ ವಿಕಾಸ ಕಾರ್ಯಕ್ರಮಗಳನ್ನು ತಿಳಿಯಲು, ಈ ಅಂದಾಜುಗಳು ಅಳತೆಗೋಲುಗಳಾಗಿ ಉಪಯುಕ್ತವಾಗುತ್ತವೆ. ಕಾಲ ಕಾಲದಲ್ಲಿ ರಾಜ್ಯದ ಆರ್ಥಿಕ ವ್ಯವಸ್ಥೆಯ ಸಾಮರ್ಥ್ಯ ಹಾಗು ದುರ್ಬಲತೆಗಳನ್ನು ತಿಳಿದುಕೊಳ್ಳಲು ಈ ಸೂಚ್ಯಂಕಗಳು ಸಹಕಾರಿಯಾಗುತ್ತವೆ.

ಒಂದು ರಾಜ್ಯದ ಭೌಗೋಳಿಕ ವ್ಯಾಪ್ತಿಯೊಳಗೆ ಉತ್ಪಾದನೆ ಆಗುವ ಎಲ್ಲಾ ಸರಕು ಹಾಗೂ ಸೇವೆಗಳ ಆರ್ಥಿಕ ಮೌಲ್ಯವನ್ನು ಪುನರಾವರ್ತಿಸದೆ ಒಂದು ನಿರ್ದಿಷ್ಟ ಅವಧಿಯಲ್ಲಿ (ಸಾಮಾನ್ಯವಾಗಿ ಹಣಕಾಸು ವರ್ಷ) ಒಟ್ಟು ಗೂಡಿಸುವುದನ್ನು ರಾಜ್ಯದ ಆಂತರಿಕ ಉತ್ಪನ್ನ ಎಂದು ನಿರ್ವಹಿಸಬಹುದು.

ರಾಜ್ಯಮಟ್ಟದಲ್ಲಿ ರಾಜ್ಯಾದಾಯವನ್ನು ಅಂದಾಜುಮಾಡಲು ಆದಾಯ ಉತ್ಪನ್ನದ ಮೂಲವನ್ನು ಪರಿಗಣಿಸಲಾಗುವುದು. ರಾಜ್ಯಾದಾಯ ಗಣನೆಗಾಗಿ ಅರ್ಥವ್ಯವಸ್ಥೆಯನ್ನು ಪ್ರಧಾನವಾಗಿ ಪ್ರಾಥಮಿಕ

ವಲಯ, ದ್ವಿತೀಯ ವಲಯು ಮತ್ತು ತೃತೀಯ ವಲಯ ಎಂದು ಮೂರು ಭಾಗಗಳಾಗಿ ವಿಭಜಿಸಲಾಗಿದೆ.

ರಾಜ್ಯಾದಾಯ ಅಂದಾಜುಗಳನ್ನು ಪ್ರತಿವರ್ಷವು 4 ಹಂತಗಳಲ್ಲಿ ತಯಾರಿಸಲಾಗುವುದು 2013–14ನೇ ಸಾಲಿಗೆ ಮುನ್ಸೂಚನಾ ಅಂದಾಜುಗಳು, 2012–13ನೇ ಸಾಲಿಗೆ ಪ್ರಥಮ ಪರಿಷ್ಕೃತ ಅಂದಾಜುಗಳು, 2011–12ನೇ ಸಾಲಿಗೆ ದ್ವಿತೀಯ ಪರಿಷ್ಕೃತ ಅಂದಾಜುಗಳು ಮತ್ತು 2010–11ನೇ ಸಾಲಿನ ಮರುಹೊಂದಾಣಿಕೆ ಅಂದಾಜುಗಳನ್ನು ಜನವರಿ 2014ರೊಳಗಾಗಿ ತಯಾರಿಸಲಾಯಿತು.

**ಜಿಲ್ಲಾದಾಯ ಅಂದಾಜುಗಳು:**

ಜಿಲ್ಲಾದಾಯ ಅಂದಾಜುಗಳು ರಾಜ್ಯಾದಾಯದ ಅಂದಾಜುಗಳಷ್ಟೆ ಮಹತ್ವವಾದದ್ದು, ರಾಜ್ಯಾದಾಯ ಅಂದಾಜುಗಳಿಂದ ದೇಶದಲ್ಲಿನ ವಿವಿಧ ರಾಜ್ಯಗಳ ಮಧ್ಯೆ ಇರುವ ವ್ಯತ್ಯಾಸವನ್ನು ಗುರುತಿಸಲು ಉಪಯೋಗಿಸಿದರೆ, ಜಿಲ್ಲಾದಾಯ ಅಂದಾಜುಗಳಿಂದ ರಾಜ್ಯದ ವಿವಿಧ ಜಿಲ್ಲೆಗಳಮಧ್ಯೆ ಇರುವ ಏರುಪೇರುಗಳನ್ನು ಸೂಚಿಸಲು ಬಳಸಬಹುದು. ಇದರಿಂದ ಹಿಂದುಳಿದ ಜಿಲ್ಲೆಗಳಿಗೆ ಆದ್ಯತೆ ನೀಡಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸಲು ಅನುಕೂಲವಾಗುತ್ತದೆ.

ಜಿಲ್ಲಾದಾಯ ಅಂದಾಜುಗಳನ್ನು ರಾಜ್ಯದಾಯ ಅಂದಾಜುಗಳನ್ನು ತಯಾರಿಸುವ ರೀತಿಯಲ್ಲೆ ತಯಾರಿಸಲಾಗುತ್ತಿದೆ. 2013–14ನೇ ಸಾಲಿನಲ್ಲಿ, 2011–12ನೇ ಸಾಲಿನ ಜಿಲ್ಲಾದಾಯವನ್ನು ಪ್ರಸಕ್ತ ಹಾಗೂ ಸ್ಥಿರ (2004–05) ಬೆಲೆಗಳ ಆಧಾರದ ಮೇಲೆ ತಯಾರಿಸಲಾಯಿತು.

**ತಾಲ್ಲೂಕು ಆದಾಯ ಅಂದಾಜುಗಳು:**

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ವ್ಯವಸ್ಥೆ ಯೋಜನೆ (ಕೆ.ಎಸ್.ಎಸ್.ಎಸ್.ಪಿ)ಯಡಿ 2008–09ನೇ ಸಾಲಿನಿಂದ ತಾಲ್ಲೂಕುವಾರು ಆದಾಯ ಅಂದಾಜುಗಳನ್ನು ತಯಾರಿಸುವ ಕಾರ್ಯವನ್ನು ಕೈಗೆತ್ತಿಕೊಂಡಿರುತ್ತದೆ. ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲು ಪ್ರತಿ ಜಿಲ್ಲಾ ಪಂಚಾಯಿತಿಗೆ ಇಬ್ಬರು ಸಮಾಲೋಚಕರಗಳನ್ನು ಒದಗಿಸಿದೆ. 2004–05ನೇ ಅಂದಾಜುಗಳನ್ನು ಪ್ರಸಕ್ತ ಬೆಲೆಗಳಲ್ಲಿ, 2008–09 ರಿಂದ 2010–11ನೇ ಸಾಲಿನ ವರೆಗಿನ ಅಂದಾಜುಗಳನ್ನು ಪ್ರಸಕ್ತ ಮತ್ತು ಸ್ಥಿರ (2004–05) ಬೆಲೆಗಳಲ್ಲಿ ಅಂದಾಜಿಸಲಾಗಿದೆ.

**ರಾಜ್ಯ ಆಂತರಿಕ ಉತ್ಪನ್ನದ ಹೋಲಿಕೆ ಅಂದಾಜುಗಳು:**

ಪ್ರತಿ ವರ್ಷವು ಲೆಕ್ಕದ ವಿವರಗಳು ಲಭ್ಯವಿರುವ ವರ್ಷದ ರಾಜ್ಯಾದಾಯ ಅಂದಾಜುಗಳನ್ನು ಕೇಂದ್ರ ಸಾಂಖ್ಯಿಕ ಸಂಸ್ಥೆಯ ಅಂದಾಜುಗಳೊಂದಿಗೆ ಪರಿಷ್ಕರಿಸಲಾಗುತ್ತಿದೆ.

2013–14ನೇ ಸಾಲಿನಲ್ಲಿ 2010–11ನೇ ಸಾಲಿನ ರಾಜ್ಯ ಆಂತರಿಕ ಉತ್ಪನ್ನದ ಅಂದಾಜುಗಳ ಬಗ್ಗೆ ಕೇಂದ್ರ ಸಾಂಖ್ಯಿಕ ಕಚೇರಿಯವರೊಂದಿಗೆ ಚರ್ಚಿಸಲಾಗಿದ್ದು, ಅದರಂತೆ, 2010–11 ಹಾಗೂ ಅದರ ಹಿಂದಿನ ಸಾಲುಗಳ ರಾಜ್ಯ ಆಂತರಿಕ ಉತ್ಪನ್ನದ ಅಂದಾಜುಗಳನ್ನು ಪರಿಷ್ಕರಿಸಲಾಗಿದೆ.

**ರಾಜ್ಯ ಆಯವ್ಯಯದ ವಿಶ್ಲೇಷಣೆ:**

ಪ್ರತಿವರ್ಷ ರಾಜ್ಯದ ವಿಧಾನಮಂಡಲದಲ್ಲಿ ಮಂಡಿಸುವ ರಾಜ್ಯ ಸರ್ಕಾರದ ಆಯವ್ಯಯವು ರಾಜ್ಯದ ಆಡಳಿತಾತ್ಮಕ, ಆದಾಯ ಮತ್ತು ವೆಚ್ಚದ ವಿವರಗಳನ್ನು ಒಳಗೊಂಡಿರುತ್ತದೆ. ಆಯವ್ಯಯದಲ್ಲಿ ಪ್ರತಿ ಹಣಕಾಸು ವರ್ಷಕ್ಕೆ ಸಂಬಂಧಪಟ್ಟಂತೆ, ಇಲಾಖಾವಾರು ಸ್ವೀಕೃತಿ, ವೆಚ್ಚ ಹಾಗೂ ಇತರೆ ಇಲಾಖಾ ವ್ಯವಹಾರಗಳಿಗೆ ಸಂಬಂಧಪಟ್ಟ ಹಣಕಾಸಿನ ವಿವರಗಳನ್ನು ನೀಡಲಾಗುತ್ತದೆ. ಆಂತರಿಕ ಉತ್ಪನ್ನದಲ್ಲಿ

ಸರ್ಕಾರದ ವಂತಿಕೆ ಹಾಗೂ ಆಯವ್ಯಯದ ವ್ಯವಹಾರಗಳ ಪ್ರಾಮುಖ್ಯತೆಯನ್ನು ಲೆಕ್ಕ ಹಾಕಲು ಆಯವ್ಯಯದ ಮರು ವರ್ಗೀಕರಣವು ಅನಿವಾರ್ಯವಾಗುತ್ತದೆ. ಆಯವ್ಯಯದ ಸಂಪನ್ಮೂಲಗಳಿಂದ, ಸರ್ಕಾರದ ಉಳಿತಾಯದಿಂದ ಮತ್ತು ರಾಜ್ಯಾದಾಯಕ್ಕೆ ಸರ್ಕಾರದ ಕೊಡುಗೆ ದೃಷ್ಟಿಯಿಂದ ಆಗುವ ಬಂಡವಾಳ ನಿರ್ಮಾಣವನ್ನು ತಿಳಿದುಕೊಳ್ಳಲು ಈ ಮರು ವರ್ಗೀಕರಣ ಮಾಡಲಾಗುತ್ತದೆ.

ಆಯವ್ಯಯದ ಅಂದಾಜುಗಳಿಗೆ ಅನುಗುಣವಾಗಿಯೇ ಸರ್ಕಾರದ ರಾಜಸ್ವ ಮತ್ತು ವೆಚ್ಚಗಳನ್ನು ಮಾಡಲಾಗುತ್ತದೆ. ಆರ್ಥಿಕ ವರ್ಗೀಕರಣದಲ್ಲಿ ಈ ವ್ಯವಹಾರಗಳನ್ನು ಪುನರ್ವರ್ಗೀಕರಿಸಿ ಪ್ರಮುಖವಾಗಿ ಮೂರು ನಿಶ್ಚಿತ ವರ್ಗಗಳನ್ನಾಗಿ ಮಾಡಲಾಗುತ್ತದೆ.

2013–14ನೇ ಸಾಲಿನಲ್ಲಿ, 2013–14ನೇ ಹಣಕಾಸು ವರ್ಷದ ರಾಜ್ಯ ಆಯವ್ಯಯವನ್ನು ವಿಶ್ಲೇಷಿಸಿ ಆರ್ಥಿಕ ಮತ್ತು ಉದ್ದೇಶಿತ ವರ್ಗೀಕರಣ ಮಾಡಲಾಗಿದೆ. ಇದರ ವಿವರಗಳನ್ನು ರಾಜ್ಯ ಆಂತರಿಕ ಉತ್ಪನ್ನದ ಅಂದಾಜುಗಳಲ್ಲಿ ಬಳಸಲಾಗಿದೆ.

**ಸರ್ಕಾರಿ ಸ್ವಾಮ್ಯ ಸಂಸ್ಥೆಗಳ ವಾರ್ಷಿಕ ಲೆಕ್ಕ ಪತ್ರಗಳು:**

2011–12 ಮತ್ತು 2013–14ನೇ ಸಾಲುಗಳ ಸರ್ಕಾರಿ ಸ್ವಾಮ್ಯ ಸಂಸ್ಥೆಗಳ ವಾರ್ಷಿಕ ಲೆಕ್ಕ ಪತ್ರಗಳನ್ನು ವಿಶ್ಲೇಷಿಸಿ, ಅದರ ವಿವರಗಳನ್ನು ರಾಜ್ಯ ಆಂತರಿಕ ಉತ್ಪನ್ನದ ಅಂದಾಜುಗಳಲ್ಲಿ ಬಳಸಲಾಗಿದೆ.

**ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ:**

ಕೈಗಾರಿಕಾ ಉತ್ಪಾದನಾ ಸ್ಥಾನಮಾನವನ್ನು ಅಳೆಯಲು ಕೈಗಾರಿಕಾ ಉತ್ಪಾದನಾ ಸೂಚ್ಯಂಕವು ಪ್ರಮುಖ ಸೂಚಕವಾಗಿರುತ್ತದೆ. ಉತ್ಪಾದನಾ ಮಾಹಿತಿಯನ್ನು ತ್ವರಿತಗತಿಯಲ್ಲಿ ನೀಡುವ ಸಲುವಾಗಿ ಸೂಚ್ಯಂಕವನ್ನು ತ್ರೈಮಾಸಿಕವಾಗಿ ಕಂಡು ಹಿಡಿದು ಇದರ ಕ್ರೋಢೀಕೃತ ವರದಿಯ ಆಧಾರದ ಮೇಲೆ ತಾತ್ಕಾಲಿಕ ವಾರ್ಷಿಕ ಸೂಚ್ಯಂಕವನ್ನು ಮತ್ತು ಕೇಂದ್ರಿಯ ಸಾಂಖ್ಯಿಕ ಕಛೇರಿ, ಕೋಲ್ಕತ್ತಾ ಇವರಿಂದ ವಾರ್ಷಿಕ ಕೈಗಾರಿಕಾ ಸಮೀಕ್ಷೆಯ ಮಾಹಿತಿಯು ಉಪಲಬ್ಧವಾದ ಮೇಲೆ ಅಂತಿಮವಾಗಿ ಸೂಚ್ಯಂಕವನ್ನು ತಯಾರಿಸಲಾಗುತ್ತಿದೆ.

**ತ್ರೈಮಾಸಿಕ ವರದಿ:**

ತ್ರೈಮಾಸಿಕವಾಗಿ ಗಣಿ, ತಯಾರಿಕೆ ಹಾಗೂ ವಿದ್ಯುತ್ ವಲಯಗಳಿಗೆ ಸೂಚ್ಯಂಕವನ್ನು ಕಂಡು ಹಿಡಿಯಲಾಗುತ್ತಿದೆ. ಪ್ರಸ್ತುತ 2011–12ಕ್ಕೆ ಸೂಚ್ಯಂಕವನ್ನು ಹೊಸ ಆಧಾರ ವರ್ಷ 2004–05ರಲ್ಲಿ, ರಾಷ್ಟ್ರೀಯ ಕೈಗಾರಿಕಾ ಸಂಕೇತ 2008ರ ಅನ್ವಯ ಕಂಡು ಹಿಡಿಯಲಾಗುತ್ತಿದೆ. ಈಗಾಗಲೇ 2013–14ರ ಮೊದಲ ಎರಡು ತ್ರೈಮಾಸಿಕಗಳಾದ ಜೂನ್ 2013 ಹಾಗೂ ಸೆಪ್ಟೆಂಬರ್ 2013ರ ಅಂತ್ಯಕ್ಕೆ ತಾತ್ಕಾಲಿಕ ತ್ರೈಮಾಸಿಕ ಸೂಚ್ಯಂಕಗಳನ್ನು ಕಂಡು ಹಿಡಯಲಾಗಿದ್ದು, ಆರ್ಥಿಕ ಸಮೀಕ್ಷೆ 2013–14ರ "ಕೈಗಾರಿಕಾ" ಅಧ್ಯಾಯದಲ್ಲಿ ಅಳವಡಿಸಲಾಗಿದೆ. ಮೂರನೇ ತ್ರೈಮಾಸಿಕವಾದ ಡಿಸೆಂಬರ್ 2013ರ ಅಂತ್ಯಕ್ಕೆ ತಾತ್ಕಾಲಿಕ ತ್ರೈಮಾಸಿಕ ಸೂಚ್ಯಂಕಗಳನ್ನು ಕಂಡು ಹಿಡಯಲಾಗಿದೆ.

**ಕೈಗಾರಿಕಾ ವಾರ್ಷಿಕ ಸಮೀಕ್ಷೆ:**

1948ರ ಕಾರ್ಖಾನೆಗಳ ಅಧಿನಿಯಮದಡಿಯಲ್ಲಿ ನೋಂದಣಿಯಾದ ಕೈಗಾರಿಕಾ ಘಟಕಗಳ ಸಮೀಕ್ಷೆಯನ್ನು ಭಾರತ ಸರ್ಕಾರವು ಕೇಂದ್ರೀಯ ಸಾಂಖ್ಯಿಕ ಸಂಸ್ಥೆಯವರ ಮೂಲಕ ಪ್ರತಿ ವರ್ಷ ಕೈಗೊಳ್ಳುತ್ತಿದ್ದು, ಇವರಿಂದ ಪಡೆದ ರಾಜ್ಯದ ಅಂಕಿ ಅಂಶಗಳ ಆಧಾರದ ಮೇಲೆ ಕೈಗಾರಿಕಾ ವಾರ್ಷಿಕ ಸಮೀಕ್ಷೆಯ ವರದಿಯನ್ನು ತಯಾರಿಸಲಾಗುತ್ತಿದೆ. ಇದರಲ್ಲಿ ಕೈಗಾರಿಕೆಗೆ ಸಂಬಂಧಿಸಿದಂತೆ ಒಟ್ಟು ನೋಂದಣಿಯಾದ ಕೈಗಾರಿಕಾ ಘಟಕಗಳಲ್ಲಿ ಬಂಡವಾಳ ಹೂಡಿಕೆಗೆ ಸಂಬಂಧಿಸಿದಂತೆ ನೋಂದಣಿಯಾದ

ಕಾರ್ಖಾನೆಗಳು, ಮೂಲ ಬಂಡವಾಳ, ಕಾರ್ಯಶೀಲ ಬಂಡವಾಳ ಸಾಲ, ಮರು ಪಾವತಿಸಿದ ಬಡ್ಡಿ, ಒಟ್ಟು ಮೌಲ್ಯ, ಒಟ್ಟು ಹೂಡುವಳಿ ಹಾಗೂ ಹುಟ್ಟುವಳಿ, ಸವಕಳಿ ಮುಂತಾದ ಒಟ್ಟು 27 ಅಂಶಗಳ ಬಗ್ಗೆ ವಿವರಗಳು, ಉದ್ಯೋಗವಕಾಶ ಹಾಗೂ ವರಮಾನಗಳು, ಉಪಯೋಗಿಸಲ್ಪಟ್ಟ ಇಂಧನ ಇವುಗಳ ಬಗ್ಗೆ ಮಾಹಿತಿ ರಾಷ್ಟ್ರೀಯ ಕೈಗಾರಿಕಾ ಸಂಕೇತ 2008ರ ಅನುಸಾರವಾಗಿ ನೀಡಲಾಗಿದೆ. 2009-10ರ ಕೈಗಾರಿಕಾ ವಾರ್ಷಿಕ ಸಮೀಕ್ಷೆಯ ಜಿಲ್ಲಾವಾರು ಅಂಕಿ ಅಂಶಗಳನ್ನು ಪ್ರಕಟಿಸಲಾಗಿದೆ.

**ಬೆಲೆಗಳು:**

ಬೆಲೆ ಅಂಕಿ ಅಂಶಗಳು ದೇಶದ ಹಾಗೂ ರಾಜ್ಯದ ಆರ್ಥಿಕ ವ್ಯವಸ್ಥೆಯಲ್ಲಿ ಮಹತ್ವವಾದ ಪಾತ್ರವನ್ನು ವಹಿಸುತ್ತಿವೆ. ಬೆಲೆಗಳು ಉತ್ಪಾದಕರು ಹಾಗೂ ಗ್ರಾಹಕರ ಮೇಲೆ ಪರಿಣಾಮ ಬೀರುತ್ತವೆ. ಬೆಲೆ ಪ್ರವೃತ್ತಿಯು ಮುಖ್ಯವಾಗಿ ಬೇಡಿಕೆ ಮತ್ತು ಪೂರೈಕೆ ಕಾರ್ಯದ ಮೇಲೆ ಆಧಾರವಾಗಿದೆ. ಬೆಲೆಯು ಕೊಳ್ಳುವ ಸಾಮರ್ಥ್ಯವನ್ನು ನಿರ್ಧರಿಸುವ ಅಳತೆಗೋಲಾಗಿರುತ್ತದೆ. ಬೆಲೆಗಳಲ್ಲಿ ಆಗುವ ವ್ಯತ್ಯಾಸಗಳನ್ನು ಹಲವಾರು ವಿಧಾನಗಳಿಂದ ಅಂದಾಜಿಸಬಹುದಾಗಿದೆ. ಅವುಗಳಲ್ಲಿ ಪ್ರಮುಖವಾಗಿ ಉಪಯೋಗಿಸುವ ಎರಡು ವಿಧಾನಗಳಲ್ಲಿ ಸಗಟು ಬೆಲೆ ಸೂಚ್ಯಂಕ ಹಾಗೂ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕವಾಗಿರುತ್ತದೆ. ಸರ್ಕಾರ, ಔದ್ಯಮಿಕ ಉದ್ದಿಮೆಗಳು ಹಾಗು ಇನ್ನಿತರ ಖಾಸಗಿ ಉದ್ದಿಮೆಗಳ ಉಪಯೋಗಕ್ಕಾಗಿ ಕರ್ನಾಟಕದಲ್ಲಿ ಹಲವಾರು ಪದಾರ್ಥಗಳ ಬೆಲೆಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗುತ್ತಿದೆ.

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಈ ಕೆಳಕಂಡ ಬೆಲೆಗಳ ಸಂಗ್ರಹಣೆ ಕಾರ್ಯ ನಿರ್ವಹಿಸುತ್ತಿದೆ:

1. 33 ಕೃಷಿ ಉತ್ಪನ್ನಗಳ ಸಗಟು ಬೆಲೆ
2. ನಗರ ಪ್ರದೇಶಗಳ 20 ಪದಾರ್ಥಗಳ ಸಗಟು ಮತ್ತು ಚಿಲ್ಲರೆ ಬೆಲೆ
3. ಗ್ರಾಮಾಂತರ ಪ್ರದೇಶಗಳ 29 ಪದಾರ್ಥಗಳ ಚಿಲ್ಲರೆ ಬೆಲೆ
4. ಸುಗ್ಗಿಕಾಲದ ಕೃಷಿ ಉತ್ಪನ್ನಗಳ ಬೆಲೆ
5. 110 ಪದಾರ್ಥಗಳ ಸಗಟು ಮತ್ತು ಚಿಲ್ಲರೆ ಬೆಲೆ
6. 11 ಕೇಂದ್ರಗಳ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ (ರಾಜ್ಯ ಸರಣಿ)
7. 5 ಕೇಂದ್ರಗಳ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ (ಕೇಂದ್ರ ಸರಣಿ)
8. ಕೃಷಿ ಕೂಲಿ

ಮೇಲೆ ತಿಳಿಸಿರುವ ಬೆಲೆಗಳ ಮಾಹಿತಿಯನ್ನು ವಾರಕ್ಕೆ ಅನುಗುಣವಾಗಿ, ಪಾಕ್ಷಿಕವಾಗಿ, ಮಾಹೆವಾರು ಹಾಗೂ ಋತುವಾರು ಸಂಗ್ರಹಿಸಲಾಗುತ್ತಿದೆ. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಬೆಲೆ ಅಂಕಿ ಅಂಶಗಳ ಮಾಹಿತಿಯ ಮುಖ್ಯ ಪೂರೈಕೆದಾರರಾಗಿರುತ್ತಾರೆ.

ಮೇಲೆ ನಮೂದಿಸಿರುವ ಬೆಲೆಗಳನ್ನು ಉಪಯೋಗಿಸಿಕೊಂಡು ಕೆಳಕಂಡ ಸೂಚ್ಯಂಕಗಳನ್ನು ರಚಿಸಲಾಗುತ್ತಿದೆ:

1. 33 ಕೃಷಿ ಉತ್ಪನ್ನಗಳ ಸಗಟು ಬೆಲೆ ಸೂಚ್ಯಂಕ (ಆಧಾರಿತ ವರ್ಷ 1981-82=100)

2. 11 ಕೇಂದ್ರಗಳ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ (ಆಧಾರಿತ ವರ್ಷ 1987–88=100) (ಬಳ್ಳಾರಿ, ಭದ್ರಾವತಿ, ದಾವಣಗೆರೆ, ದಾಂಡೇಲಿ, ಗುಲ್ಬರ್ಗಾ, ಹರಿಹರ, ಹಾಸನ, ಮಂಡ್ಯ, ಮಂಗಳೂರು, ರಾಯಚೂರು ಮತ್ತು ತುಮಕೂರು).

3. 5 ಕೇಂದ್ರಗಳ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ (ಆಧಾರಿತ ವರ್ಷ 2001=100)(ಬೆಂಗಳೂರು, ಬೆಳಗಾವಿ, ಹುಬ್ಬಳ್ಳಿ –ಧಾರವಾಡ, ಮಡಿಕೇರಿ ಮತ್ತು ಮೈಸೂರು) (ಲೇಬರ್ ಬ್ಯೂರೊ, ಶಿಮ್ಲಾ ಇಲ್ಲಿ ಈ ಕೇಂದ್ರಗಳ ಸೂಚ್ಯಂಕಗಳನ್ನು ರಚಿಸಲಾಗುತ್ತಿದೆ).

**ಕೃಷಿ ಉತ್ಪನ್ನಗಳ ಸಗಟು ಬೆಲೆ ಸೂಚ್ಯಂಕ: ಕೃಷಿ ಉತ್ಪನ್ನಗಳ ಸಗಟು ಬೆಲೆ ಸೂಚ್ಯಂಕ: (ಆಧಾರಿತ ವರ್ಷ 1981–82=100)**

ಈ ಸೂಚ್ಯಂಕವನ್ನು ಆಯ್ದ 33 ಕೃಷಿ ಪದಾರ್ಥಗಳಿಗೆ, ಕೃಷಿ ಮಾರಾಟ ಇಲಾಖೆಯ ಆಯ್ದ 40 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ಪ್ರತಿ ವಾರ ಹಾಗೂ ನಾಲ್ಕು ಮಂಡಳಿಗಳು ಎಂದರೆ, ಮಸಾಲೆ ಮಂಡಳಿ, ಸಕ್ಕರೆ ನಿರ್ದೇಶನಾಲಯ, ತಂಬಾಕು ಮಂಡಳಿ ಹಾಗೂ ಕಾಫಿ ಮಂಡಳಿಗಳಿಂದ ಪ್ರತಿ ಮಾಹೆ ಪಡೆಯುತ್ತಿರುವ ಸಗಟು ಬೆಲೆಗಳ ಮಾಹಿತಿಯ ಸಂಗ್ರಹಣೆಯ ಆಧಾರದ ಮೇಲೆ ರಚಿಸಲಾಗುತ್ತಿದೆ. "ಸಗಟು ಬೆಲೆ" ಎಂದರೆ ಮಾರಾಟಗಾರರಿಗೆ ಅಥವಾ ಸಂಸ್ಕರಣಕ್ಕಾಗಿ ಮಾರಿದ ಪದಾರ್ಥದ ಬೆಲೆಯಾಗಿರುತ್ತದೆ. ಈ ಸಗಟು ಬೆಲೆಯು ಬೆಲೆಯಲ್ಲಿ ದೊಡ್ಡ ಪ್ರಮಾಣದ ವ್ಯವಹಾರವಾಗಿರುವ ಮಾದರಿ ಬೆಲೆಯಾಗಿರುತ್ತದೆ. ಈ ಸೂಚ್ಯಂಕಗಳನ್ನು ರಾಜ್ಯಾದಾಯದ ಅಂದಾಜುಗಳನ್ನು ತಯಾರಿಸಲು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ವಿಶ್ಲೇಷಣೆಗಾಗಿ ಉಪಯೋಗಿಸುತ್ತಾರೆ.

2013–14 ನೇ ಸಾಲಿನಲ್ಲಿ ಜನವರಿ 2014ರವರೆಗೆ 33 ಕೃಷಿ ಪದಾರ್ಥಗಳ ಸಗಟು ಬೆಲೆ ಸೂಚ್ಯಂಕವನ್ನು ರಚಿಸಲಾಗಿದೆ.

**ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ:**

ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕವು, ಒಂದು ನಿರ್ದಿಷ್ಟ ಸ್ಥಳದ, ಒಂದು ನಿರ್ದಿಷ್ಟ ಗುಂಪಿನ ಸಾಮಾನ್ಯ ಕುಟುಂಬವು ಉಪಯೋಗಿಸುವ, ಗೊತ್ತು ಪಡಿಸಿದ ಪದಾರ್ಥಗಳು ಹಾಗೂ ಸೇವೆಗಳ ಚಿಲ್ಲರೆ ಬೆಲೆಗಳನ್ನು ಆಧಾರಿತ ವರ್ಷಕ್ಕೆ ಹೋಲಿಸಿದಾಗ ಆಗುವ ಬದಲಾವಣೆಯ ಪರಿಮಾಣವನ್ನು ತಿಳಿಯಲು ವಿನ್ಯಾಸಗೊಳಿಸಲಾಗಿದೆ. ವಿವಿಧ ಕಾರ್ಮಿಕ ಸಂಘ ಸಂಸ್ಥೆಗಳು, ಇಲಾಖೆಗಳು, ಖಾಸಗಿ ವಲಯದ ಸಣ್ಣ ಹಾಗೂ ದೊಡ್ಡ ಪ್ರಮಾಣದ ಉದ್ಯಮಗಳು ತನ್ನ ಉದ್ಯೋಗಿಗಳಿಗೆ ನೀಡುವ ತುಟ್ಟಿ ಭತ್ಯೆಯನ್ನು ನಿರ್ಧರಿಸಲು ಹಾಗೂ ವೇತನವನ್ನು ಹೆಚ್ಚಿಸಲು ಉಪಯೋಗಿಸುತ್ತಾರೆ.

ಗ್ರಾಹಕ ಬೆಲೆ ಸೂಚ್ಯಂಕ ರಚಿಸಲು 16 ಕೇಂದ್ರಗಳನ್ನು ಆಯ್ಕೆ ಮಾಡಲಾಗಿದೆ. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕಗಳನ್ನು 11 ಕೇಂದ್ರಗಳಿಗೆ (ಆಧಾರಿತ ವರ್ಷ 1987–88=100) ಪ್ರತಿ ವಾರ ಪಡೆಯುತ್ತಿರುವ ಬೆಲೆಗಳ ಮಾಹಿತಿಯ ಆಧಾರದ ಮೇಲೆ ರಚಿಸಲಾಗುತ್ತಿದ್ದು, ಉಳಿದ 5 ಕೇಂದ್ರಗಳಿಗೆ (ಆಧಾರಿತ ವರ್ಷ 2001=100) ಬೆಲೆಗಳನ್ನು ಮಾತ್ರ ಸಂಗ್ರಹಿಸಿ ಕಾರ್ಮಿಕ ಕಾರ್ಯಾಲಯ, ಶಿಮ್ಲಾ ಇವರಿಗೆ ಕಳುಹಿಸಲಾಗುತ್ತಿದ್ದು ಅಲ್ಲೇ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕ ತಯಾರಿಸಲಾಗುತ್ತಿದೆ.

ಪ್ರಸ್ತುತ ಸಾಲಿನಲ್ಲಿ, ರಾಜ್ಯ ಸರಣಿಯ 11 ಕೇಂದ್ರಗಳಿಗೆ ಸಂಬಂಧಿಸಿದಂತೆ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕವನ್ನು ಜನವರಿ 2014ನೇ ಮಾಹೆವರೆಗೆ ರಚಿಸಲಾಗಿದೆ.

2013ನೇ ಸಾಲಿನಲ್ಲಿ ಎಲ್ಲಾ 16 ಕೇಂದ್ರಗಳ ರಾಜ್ಯದ ವಾರ್ಷಿಕ ಸರಾಸರಿಯನ್ನು ಹೊರಡಿಸಲಾಗಿದೆ.

**ಕೃಷಿ ಉತ್ಪನ್ನ ಸುಗ್ಗಿಕಾಲದ ಧಾರಣೆ ವರದಿ:**

ಸುಗ್ಗಿಕಾಲದ ಬೆಲೆಯು, ಸಾಗುವಳಿದಾರನು(ಕೃಷಿಕ) ಯಾವ ಬೆಲೆಗೆ ತನ್ನ ಉತ್ಪಾದನೆಯನ್ನು ನೇರವಾಗಿ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಾನೆ ಎಂಬ ಅಂಶವನ್ನು ಸೂಚಿಸುತ್ತದೆ. ರೈತನಿಗೆ ಸಾಗುವಳಿಯ ವೆಚ್ಚಕ್ಕೆ ಹೋಲಿಸಿದಾಗ, ಲಾಭದಾಯಕ ಬೆಲೆಯು ಸಿಗುತ್ತಿದೆಯೆ ಎಂಬುದರ ಬಗ್ಗೆ ಅಧ್ಯಯನವನ್ನು ಕೈಗೊಳ್ಳಲು ಸಹಕಾರಿಯಾಗುತ್ತದೆ. ಸುಗ್ಗಿ ಕಾಲದ ಬೆಲೆಯು ಕಟಾವಿನ ಅವಧಿಯಲ್ಲಿ ಸರಕನ್ನು ವಿಲೇವಾರು ಮಾಡುವ ಸಗಟುಬೆಲೆಯ ಸರಾಸರಿಯಾಗಿರುತ್ತದೆ. ಈ ಬೆಲೆಗಳ ಮಾಹಿತಿಯನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ಪ್ರತಿ ಋತುವಿನಲ್ಲೂ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಸಂಗ್ರಹಿಸಿ ಕಳುಹಿಸುತ್ತಿದ್ದಾರೆ.

2012–13ನೇ ಸಾಲಿನ ರಾಜ್ಯದ ಸುಗ್ಗಿಕಾಲದ ಮಾರುಕಟ್ಟೆ ಬೆಲೆಗಳ ಧಾರಣೆಯ ವರದಿಯನ್ನು ತಯಾರಿಸಲಾಗಿದೆ.

2013–14ನೇ ಸಾಲಿನ ವರದಿ ತಯಾರಿಕೆ ಕಾರ್ಯವು ಪ್ರಗತಿಯಲ್ಲಿದೆ.

**110 ಪದಾರ್ಥಗಳ ಸಗಟು ಮತ್ತು ಚಿಲ್ಲರೆ ಬೆಲೆಗಳು:**

110 ಪ್ರಮುಖ ಪದಾರ್ಥಗಳ ಸಗಟು ಮತ್ತು ಚಿಲ್ಲರೆ ಬೆಲೆಗಳ ಪಾಕ್ಷಿಕ ವರದಿಯನ್ನು ಜಿಲ್ಲಾ ಸಂಗ್ರಹಣಾಧಿಕಾರಿಗಳಿಂದ ಪಡೆಯಲಾಗುತ್ತಿದೆ. ಈ ಮಾಹಿತಿಯು ರಾಜ್ಯಮಟ್ಟದಲ್ಲಿ ಕಾಲಶ್ರೇಣಿ ಮಾಹಿತಿಯನ್ನು ತಯಾರಿಸಲು ಉಪಯೋಗವಾಗುತ್ತದೆ. ಈ ಮಾಹಿತಿಯನ್ನು ಸಂಶೋಧನಾಕಾರರು ವಿಶ್ಲೇಷಣೆಗಾಗಿ ಉಪಯೋಗಿಸುತ್ತಾರೆ.

2013ರ 110 ಪದಾರ್ಥಗಳ ಸಗಟು ಮತ್ತು ಚಿಲ್ಲರೆ ಬೆಲೆಗಳ ವರದಿಯ ಗಣಿಕೀಕರಣ ಕಾರ್ಯ ಪ್ರಗತಿಯಲ್ಲಿದೆ.

**20 ಮುಖ್ಯ ಪದಾರ್ಥಗಳ ಸಗಟು ಮತ್ತು ಚಿಲ್ಲರೆ ಬೆಲೆಗಳು: (ಆಧಾರಿತ ವರ್ಷ 1970=100)**

ಸಗಟು ಮತ್ತು ಚಿಲ್ಲರೆ ಬೆಲೆಗಳ ಪ್ರವೃತಿಯ ವರದಿಯನ್ನು ಪ್ರತಿ ಮಾಹೆಯೂ ತಯಾರಿಸಿ ಸನ್ಮಾನ್ಯ ರಾಜ್ಯಪಾಲರ ಕಾರ್ಯಾಲಯಕ್ಕೆ ಸಲ್ಲಿಸಲಾಗುತ್ತಿದೆ. ಈ ವರದಿಗೆ ಆಯ್ದ 20 ನಗರ ಕೇಂದ್ರಗಳಿಂದ, ಪ್ರತಿ ಕೇಂದ್ರದಲ್ಲೂ ಆಯ್ದ 3 ಅಂಗಡಿಗಳಿಂದ ಬೆಲೆಗಳ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಈ ವರದಿಯಲ್ಲಿ ಪ್ರಮುಖವಾಗಿ ಅಕ್ಕಿ, ಗೋಧಿ, ರಾಗಿ, ಬೇಳೆ, ಎಣ್ಣೆ ಇತ್ಯಾದಿ ದಿನನಿತ್ಯ ಬಳಸುವ ಪದಾರ್ಥಗಳು ಸಹ ಒಳಗೊಂಡಿರುತ್ತದೆ.

ಈ ಮಾಹಿತಿಯನ್ನು ಆಧರಿಸಿ ಸಗಟು ಮತ್ತು ಚಿಲ್ಲರೆ ಬೆಲೆಗಳ ಪ್ರವೃತ್ತಿಯನ್ನು ಮತ್ತು ನಗರ ಚಿಲ್ಲರೆ ಬೆಲೆ ಸೂಚ್ಯಂಕವನ್ನು ಡಿಸೆಂಬರ್ 2014ರವರೆಗೆ ತಯಾರಿಸಲಾಗಿದೆ.

**ಗ್ರಾಮಾಂತರ ಪ್ರದೇಶಗಳ ಚಿಲ್ಲರೆ ಬೆಲೆ ಸೂಚ್ಯಂಕ: (ಆಧಾರಿತ ವರ್ಷ 1970=100)**

ಗ್ರಾಮಾಂತರ ಪ್ರದೇಶಗಳಲ್ಲಿ 29 ಅಗತ್ಯ ವಸ್ತುಗಳ ಚಿಲ್ಲರೆ ಬೆಲೆಗಳ ಮಾಹಿತಿಯನ್ನು ಪ್ರತಿ ತಾಲ್ಲೂಕಿನ 2 ಗ್ರಾಮಗಳಲ್ಲಿ ಆಯ್ಕೆಯಾದ ತಲಾ 2 ಅಂಗಂಡಿಗಳಿಂದ ಪ್ರತಿ ಮಾಹೆಯು ಸಂಗ್ರಹಿಸಲಾಗುತ್ತಿದೆ. ನಿಯತಕಾಲಿಕವನ್ನು ತಯಾರಿಸಲು ಹಾಗೂ ಗ್ರಾಮಾಂತರ ಪ್ರದೇಶಗಳ ಚಿಲ್ಲರೆ ಬೆಲೆ ಸೂಚ್ಯಂಕಗಳನ್ನು ಪ್ರತಿ ಮಾಹೆ ತಯಾರಿಸಲು ಈ ಮಾಹಿತಿಯನ್ನು ಉಪಯೋಗಿಸಲಾಗುತ್ತಿದೆ.

ರಾಜ್ಯದ ಗ್ರಾಮಾಂತರ ಪ್ರದೇಶಗಳ ಚಿಲ್ಲರೆ ಬೆಲೆ ಸೂಚ್ಯಂಕವನ್ನು ಜನವರಿ 2014 ರವರೆಗೆ ತಯಾರಿಸಲಾಗಿದೆ.

**ಕೃಷಿ ಕೂಲಿ:**

"ಕೂಲಿ"ಯು ಕೃಷಿಕೂಲಿ ಕೆಲಸ ಮಾಡುವವರ ಆದಾಯ ಗಳಿಕೆಯ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ. ಕಾಲಕಾಲಕ್ಕೆ ಸರ್ಕಾರವು ಅಸಂಘಟಿತ ವಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕೃಷಿ ಕಾರ್ಮಿಕರಿಗೆ ಸಂಬಂಧಿಸಿದಂತೆ, ಕನಿಷ್ಟ ಕೂಲಿ ದರವನ್ನು ನಿಗದಿಪಡಿಸುತ್ತಿದೆ. ಕೃಷಿ ಕಾರ್ಮಿಕರಿಗೆ ಕೊಡುವ ಕೂಲಿ ದರ ಮಾಹಿತಿಯನ್ನು ಆಯ್ಕೆ ಮಾಡಿರುವ ರಾಜ್ಯದ ಪ್ರತಿ ತಾಲ್ಲೂಕಿನ 4 ಹಳ್ಳಿಗಳಿಂದ ಪ್ರತಿ ಮಾಹೆ ಸಂಗ್ರಹಿಸಲಾಗುತ್ತಿದೆ.

ಕೃಷಿ ಕೂಲಿದರಗಳನ್ನು ಖುಷ್ಕಿ ಭೂಮಿ, ತರಿಭೂಮಿ ಹಾಗೂ ತೋಟದ ಭೂಮಿಗೆ ಪ್ರತ್ಯೇಕವಾಗಿ ಹಾಗು ಪ್ರತಿ ಭೂಮಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೃಷಿ ಕಾರ್ಮಿಕರ ನಾಲ್ಕು ಗುಂಪುಗಳಿಗೆ ಕೂಲಿ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಈ ನಾಲ್ಕು ಗುಂಪುಗಳ ವರ್ಗೀಕರಣ ಅಂದರೆ ಭೂಮಿ ಉಳುವ, ಅಗೆಯುವ, ಬಿತ್ತುವ, ನೀರುಣಿಸುವ ಕೃಷಿ ಕಾರ್ಮಿಕರನ್ನು 'ಎ' ವರ್ಗ ಎಂದು; ಗೊಬ್ಬರ ಕೊಡುವ, ಕಳೆ ತೆಗೆಯುವ, ನಾಟಿ ಮಾಡುವರನ್ನು 'ಬಿ' ವರ್ಗ ಎಂದು; ದನಕರುಗಳನ್ನು, ಕುರಿ, ಮೇಕೆ, ಆಡುಗಳನ್ನು ಮೇಯಿಸುವವರನ್ನು 'ಸಿ' ವರ್ಗ ಎಂದು: ಅಡಿಕೆ, ತೆಂಗುಕೊಯ್ಲು, ಅವುಗಳ ಸಿಪ್ಪೆ ತೆಗೆಯುವ ಕೆಲಸ, ಅವುಗಳಿಗೆ ಔಷದ ಸಿಂಪಡಿಸುವ ಇತ್ಯಾದಿ ಕೆಲಸಗಳಲ್ಲಿ ತೊಡಗಿರುವ ಕಾರ್ಮಿಕರನ್ನು 'ಡಿ' ವರ್ಗ ಎಂದು ವರ್ಗೀಕರಿಸಲಾಗಿದೆ. ಇದರೊಂದಿಗೆ ಕುಶಲ ಕರ್ಮಿಗಳಾದ ಬಡಿಗ, ಅಕ್ಕಸಾಲಿಗ ಹಾಗೂ ಮೋಚಿ ಇವರಿಗೆ ಕೊಡುವ ಕೂಲಿ ದರಗಳ ಬಗ್ಗೆ ಮಾಹಿತಿಯನ್ನು ಸಹ ಸಂಗ್ರಹಿಸಲಾಗುತ್ತಿದೆ.

2013ರ ರಾಜ್ಯದ ಸರಾಸರಿ ಕೃಷಿ ಕೂಲಿ ಅಂಕಿ ಅಂಶಗಳ ವರದಿಯ ಕಾರ್ಯ ಪ್ರಗತಿಯಲ್ಲಿದೆ.

**ಮಳೆ ಅಂಕಿಅಂಶಗಳು:**

ಮಳೆ ವರದಿ ಶಾಖೆಯು, ಮಳೆ ಮಾಹಿತಿಯನ್ನು ಸಂಗ್ರಹಿಸಿ ಪ್ರತಿದಿನ, ಪ್ರತಿ ವಾರ, ಪ್ರತಿ ಮಾಸಿಕ ಮತ್ತು ವಾರ್ಷಿಕ ವಿಶ್ಲೇಷಣೆಯನ್ನು ಮಾಡುತ್ತದೆ. ರಾಜ್ಯದ 176 ತಾಲ್ಲೂಕುಗಳಲ್ಲಿ 1271 ಮಾಳೆಮಾಪಕಗಳಿದ್ದು, ಈ ಪೈಕಿ 1170 ಮಳೆಮಾಪಕಗಳು ಕಾರ್ಯನಿರ್ವಹಿಸುತ್ತಿವೆ. ಮಳೆ ಮಾಹಿತಿಯು 1890 ರಿಂದ ಇಲ್ಲಿಯವರೆಗೂ ನಿರ್ದೇಶನಾಲಯದಲ್ಲಿ ಲಭ್ಯವಿರುತ್ತದೆ. ಪ್ರತಿ ದಿನವೂ ಮಳೆ ಮಾಹಿತಿಯನ್ನು, ಮಳೆ ದಾಖಲು ಮಾಡುವವರು ಮಳೆಯ ಮಾಹಿತಿಯನ್ನು ಸಂಗ್ರಹಿಸಿ ತಾಲ್ಲೂಕು ಕಛೇರಿ ಮೂಲಕ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳಿಗೆ ಕಳುಹಿಸಿಕೊಡುತ್ತಾರೆ.
ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಕೇಂದ್ರ ಕಛೇರಿಗೆ ಕಳುಹಿಸಿಕೊಡುತ್ತಾರೆ. ಕೇಂದ್ರ ಕಛೇರಿಯ ಈ ವಿಭಾಗದಲ್ಲಿ ಪ್ರತಿದಿನದ, ವಾರದ ಮಾಹೆವಾರು ಮತ್ತು ವಾರ್ಷಿಕ ವರದಿಗಳನ್ನು ತಯಾರಿಸಿ ಸಂಬಂಧಿಸಿದವರಿಗೆ ಕಳುಹಿಸಿಕೊಡಲಾಗುತ್ತಿದೆ.

**2013 ರ ಮಳೆ ವರದಿಗಳು**

- 2013 ರ ವಾರ್ಷಿಕ ಮಳೆ ವರದಿಯ ತಯಾರಿಕೆ ಕಾರ್ಯ ಪ್ರಗತಿಯಲ್ಲಿರುತ್ತದೆ.
- 2013 ನೇ ಜನವರಿಯಿಂದ ಡಿಸೆಂಬರ್‌ವರೆಗೆ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿಸಿರುವ ಮಳೆ ಮಾಪನ ಕೇಂದ್ರಗಳ ಮಾಸಿಕ ಮಳೆ ವರದಿಯನ್ನು ವರ್ಷದ ಎಲ್ಲಾ 12 ತಿಂಗಳುಗಳಲ್ಲಿ ತಯಾರಿಸಿ ಪ್ರಕಟಿಸಲಾಗಿದೆ.

- ಮಳೆ ಋತುವಿನ ಅವಧಿಯಲ್ಲಿ ಅಂದರೆ 2013ರ ಜೂನ್ 1 ರಿಂದ ಡಿಸೆಂಬರ್ ಅಂತ್ಯದವರೆಗೆ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿಸಿರುವ ಮಳೆ ಮಾಪನ ಕೇಂದ್ರಗಳ ವಾರದ ಮಳೆ ವರದಿಯನ್ನು ತಯಾರಿಸಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆಯುವ ಹವಾಮಾನ ಮತ್ತು ಕಾವಲು ಸಮಿತಿ ಸಭೆಗೆ ಸಲ್ಲಿಸಲಾಗಿದೆ.

- ಮಳೆ ಋತುವಿನ ಅವಧಿಯಲ್ಲಿ ಅಂದರೆ 2013ನೇ ಜೂನ್ 1 ರಿಂದ ಡಿಸೆಂಬರ್ ಅಂತ್ಯದವರೆಗೆ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿಸಿರುವ ಮಳೆ ಮಾಪನ ಕೇಂದ್ರಗಳ ದಿನಂಪ್ರತಿ ಮಳೆ ವರದಿಯನ್ನು ತಯಾರಿಸಿ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಪ್ರಧಾನ ಕಾರ್ಯದರ್ಶಿಗಳು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಪ್ರಧಾನ ಕಾರ್ಯದರ್ಶಿಗಳು, ಕೃಷಿ ಮತ್ತು ತೋಟಗಾರಿಕೆ, ಕಾರ್ಯದರ್ಶಿಗಳು ವಿಪತ್ತು ನಿರ್ವಹಣೆ ಕಂದಾಯ ಇಲಾಖೆ ಇವರಿಗೆ ಸಲ್ಲಿಸಲಾಗಿದೆ. ಅಲ್ಲದೆ ಮಾನ್ಯ ಮುಖ್ಯಮಂತ್ರಿಯವರ, ಆಪ್ತ ಕಾರ್ಯದರ್ಶಿಗಳು, ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರುಗಳ ಮತ್ತು ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು/ಆಪ್ತಸಹಾಯಕರಿಗೆ ವರದಿಯ ಪ್ರತಿಯನ್ನು ಸಲ್ಲಿಸಲಾಗಿರುತ್ತದೆ.

- 2013ರ ನೈರುತ್ಯ ಮುಂಗಾರಿನ (ಜೂನ್–ಸೆಪ್ಟಂಬರ್) ಮಳೆಯ ಪ್ರಗತಿಯ ವಿಶೇಷ ವರದಿಯನ್ನು ನವೆಂಬರ್ – 2013ರಲ್ಲಿ ಪ್ರಕಟಿಸಲಾಗಿದೆ.

**ಸಾರ್ವಜನಿಕ ಸಂಸ್ಥೆಗಳು, ಸಂಘಗಳು ಮತ್ತು ಎಸ್‌ಪಿವಿ (Special Purpose Vehicle) ಗಳ ಕಾರ್ಯನಿರ್ವಹಣೆ**

**ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ (ಕೆಎಸ್‌ಎಸ್‌ಡಿಎ):**

**ಯೋಜನೆ :** ಕೇಂದ್ರ ಪುರಸ್ಕೃತ ಯೋಜನೆ– ಭಾರತ ಸಾಂಖ್ಯಿಕ ಬಲವರ್ಧನೆ ಯೋಜನೆ (ISSP)

**ಆಯವ್ಯಯ ಶೀರ್ಷಿಕೆ:** 3454–02–204–0–18

**ಯೋಜನೆ ಕಾರ್ಯಕ್ರಮ:** ಕೇಂದ್ರ ಮತ್ತು ರಾಜ್ಯದ ಪಾಲಿನ ಅನುಪಾತವು ನಿಚ್ಚಲವಾಗಿರುವುದಿಲ್ಲ. ಆವರ್ತಕ ವೆಚ್ಚವನ್ನು ರಾಜ್ಯ ಸರ್ಕಾರವು ಮತ್ತು ಆವರ್ತೇತರ ವೆಚ್ಚವನ್ನು ಕೇಂದ್ರ ಸರ್ಕಾರವು ಭರಿಸುತ್ತದೆ. ಆದರೆ ಕಟ್ಟಡ ನಿರ್ಮಾಣ ಚಟುವಟಿಕೆಗಳಿಗೆ ಕೇಂದ್ರ ಮತ್ತು ರಾಜ್ಯದ ಪಾಲು ಶೇಕಡ 95:05 ರಂತಿದೆ. ಈ ಯೋಜನೆಯ ಅನುಷ್ಠಾನಕ್ಕಾಗಿ ತಯಾರಿಸಲಾದ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯನ್ನು ಇದೇ ಮಾದರಿಯಲ್ಲಿ ಹಂಚಿಕೆ ಮಾಡಲಾಗಿದೆ.

**ಉದ್ದೇಶ:** ಈ ಯೋಜನೆಯ ಉದ್ದೇಶವು ರಾಜ್ಯದ ಸಾಂಖ್ಯಿಕ ವ್ಯವಸ್ಥೆಯಲ್ಲಿ ಸುಧಾರಣೆ ತರವುದು ಹಾಗೂ ವಿಕೇಂದ್ರೀಕೃತ ವ್ಯವಸ್ಥೆಯ ರಚನೆಯೊಳಗೆ, ಸರ್ಕಾರದ ಒಳಗೆ ಹಾಗೂ ಹೊರಗೆ ನಿರ್ಧಾರಗಳನ್ನು ಕೈಗೊಳ್ಳಲು ಪೂರಕವಾದ, ಸಂಶೋಧನೆಗಳನ್ನು ಪ್ರಚೋದಿಸುವ ಮತ್ತು ಜನಜೀವನದ ಮೇಲೆ ಪರಿಣಾಮ ಬೀರುವ ವಿಷಯಗಳಲ್ಲಿ ತಿಳಿವಳಿಕೆಯುಕ್ತ ಚರ್ಚೆಗಳನ್ನು ಪ್ರೋತ್ಸಾಹಿಸಲು, ವಿಶ್ವಾಸನೀಯ, ಸಕಾಲಿಕ ಹಾಗೂ ನಂಬಲರ್ಹವಾದ ಸಾಮಾಜಿಕ ಮತ್ತು ಆರ್ಥಿಕ ಅಂಕಿ ಅಂಶಗಳನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ. ರಾಷ್ಟ್ರೀಯ ಕನಿಷ್ಠ ಮಟ್ಟವನ್ನು ಕಾಯ್ದುಕೊಂಡು ಸಾಂಖ್ಯಿಕ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ, ಸಾಕಷ್ಟು ಪ್ರಮಾಣದಲ್ಲಿ ಮತ್ತು ವ್ಯವಸ್ಥಿತವಾಗಿ ಕೈಗೊಳ್ಳುವ ಸಲುವಾಗಿ, ಈ ಯೋಜನಯಡಿ 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳಿಗೆ ಒತ್ತು ನೀಡಲಾಗಿದೆ.

**ಯೋಜನೆಯ ಫಲಿತಾಂಶ ಮತ್ತು ಅಂದಾಜು ಫಲಾನುಭವಿಗಳು:**

i) ರಾಜ್ಯದ ಸಾಂಖ್ಯಿಕ ವ್ಯವಸ್ಥೆಯಲ್ಲಿನ ಸುಧಾರಣೆ

ii) 30 ಇತರೆ ಇಲಾಖೆ ಮತ್ತು 30 ಜಿಲ್ಲಾ ಪಂಚಾಯತಿಗಳು

iii) 20 ಪ್ರಮುಖ ಸಾಂಖ್ಯಿಕ ಚಟುವಟಿಕೆಗಳು

**ಹಣಕಾಸು**

(ರೂ.ಲಕ್ಷಗಳಲ್ಲಿ)

| ಪರಿಷ್ಕೃತ ಅಂದಾಜು 2011-12 | | ಪರಿಷ್ಕೃತ ಅಂದಾಜು 2021-13 | | ಆಯವ್ಯಯ ಅಂದಾಜು 2013-14 | |
|---|---|---|---|---|---|
| **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** |
| 400.00 | 1253.00 | 438.13 | 1411.88 | 397.42 | 1202.58 |

**ವೆಚ್ಚ**

(ರೂ.ಲಕ್ಷಗಳಲ್ಲಿ):

| ವಾಸ್ತವಿಕ/ಲೆಕ್ಕ 2011-12 | | ವಾಸ್ತವಿಕ/ಲೆಕ್ಕ 2012-13 | | ಆಯವ್ಯಯ ಅಂದಾಜು 2013-14 | |
|---|---|---|---|---|---|
| **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** | **ಬಂಡವಾಳ** | **ರಾಜಸ್ವ** |
| 54.90 | 1235.57 | 83.60 | 834.03 | 24.96 | 384.23 |

**ಅನುಷ್ಠಾನ:** ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯಡಿ(KSSSP) 2013-14ನೇ ಸಾಲಿನಲ್ಲಿ ಸಾಧಿಸಿದ ಪ್ರಮುಖ ಸಾಧನೆಯ ವಿವರಗಳು ಈ ಕೆಳಕಂಡಂತಿವೆ.

**ಭೌತಿಕ ಸಾಧನೆ:**

1. ಜಿಲ್ಲಾ ಹಂತ ಹಾಗೂ ಕೆಳ ಹಂತದಲ್ಲಿ ಖಅಖಿ ಚಟುವಟಿಕೆಗಳ ಯಶಸ್ವಿ ಅನುಷ್ಠಾನವನ್ನು ದೃಢಪಡಿಸಿಕೊಳ್ಳುವ ಸಲುವಾಗಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಚೇರಿಯಲ್ಲಿನ 30 ಪ್ರೋಗ್ರಾಮರ್ ಕನ್ಸ್‌ಲ್‌ಟೆಂಟ್‌ಗಳನ್ನು ಉಪ ಜಿಲ್ಲಾ ಹಂತದ ಸಿಬ್ಬಂದಿಗೆ ಮಾಹಿತಿ ಸಂವಹನ ಮತ್ತು ತಂತ್ರಜ್ಞಾನ ಚಟುವಟಿಕೆಯಡಿ ತರಬೇತಿ ಮಾರ್ಗದರ್ಶನ ನೀಡುವ ಸಲುವಾಗಿ ಪ್ರಸ್ತುತ ವರ್ಷದಲ್ಲಿಯು ಮುಂದುವರೆಸಲಾಗಿದೆ.

2. ದಕ್ಷಿಣ ಕನ್ನಡ ಮತ್ತು ರಾಯಚೂರು ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ನಿವೇಶನ ಪಡೆಯಲಾಗಿದೆ.

3. ಜಿಲ್ಲಾ ಹಂತದಲ್ಲಿ ವ್ಯವಹಾರ ದಾಖಲೆ ವಹಿ, ಜಿಲ್ಲಾ ನಿವ್ವಳ ಆದಾಯ ಹಾಗೂ ಸ್ಥಳಿಯ ಸಂಸ್ಥೆಗಳ ವಾರ್ಷಿಕ ಲೆಕ್ಕ ಪತ್ರಗಳ ಆರ್ಥಿಕ ಮತ್ತು ಉದ್ದೇಶಿತ ವರ್ಗೀಕರಣ ಮುಂತಾದವುಗಳನ್ನು ಸಂಕಲಿಸುವ ಪದ್ಧತಿಯನ್ನು ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ 60 ಕನ್ಸ್‌ಲ್‌ಟೆಂಟ್‌ಗಳ ಮೂಲಕ ರೂಢಿಗೆ ತರಲಾಗುತ್ತಿದೆ.

4. ಮೂಲ ಕಾರ್ಯಕರ್ತರಿಗೆ ಕೃಷಿ ಅಂಕಿ ಅಂಶಗಳ ಮಹತ್ವದ ಬಗ್ಗೆ ಅರಿವು ಮೂಡಿಸುವ ಪುನರ್ಮನನ ತರಬೇತಿಯನ್ನು ನೀಡಲಾಗುತ್ತಿದೆ.

5. ತಾಲ್ಲೂಕು ಮಟ್ಟದಲ್ಲಿ ಕ್ಷೇತ್ರ ಗಣತಿ ಹಾಗೂ ಬೆಳೆ ಕಟಾವು ಪ್ರಯೋಗಗಳನ್ನು ಕೈಗೊಳ್ಳಲು ಮೂಲಹಂತದ ಕಾರ್ಯಕರ್ತರಿಗೆ ಮಿನಿ ಲ್ಯಾಪ್‌ಟಾಪ್‌ನಲ್ಲಿ ಬಳಸಬಲ್ಲ ವೆಬ್ ಬೇಸಡ್ ಅಪ್ಲಿಕೇಷನ್ ಬಗ್ಗೆ ತರಬೇತಿಯನ್ನು ನೀಡಲಾಗಿದೆ.

6. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಯ 27 ಅಧಿಕಾರಿಗಳಿಗೆ Statistical Management System using MS Excel– ಕುರಿತ ಗಣಕಯಂತ್ರ ತರಬೇತಿಯನ್ನು ನೀಡಲಾಗಿದೆ.

7. National Accounts Statistics ನ ಸಂಕಲನಕ್ಕೆ ಸಂಬಂಧಿಸಿದ 5 ದಿನದ ವಾಸ್ತವ್ಯ ತರಬೇತಿಯನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ 15 ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಅಧಿಕಾರಿಗಳಿಗೆ ನೀಡಲಾಗಿದೆ.

8. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಸಹಾಯಕ ಸಾಂಖ್ಯಿಕ ಅಧಿಕಾರಿಗಳಿಗೆ ಸಾಂಖ್ಯಿಕ ವ್ಯವಸ್ಥೆ ಮತ್ತು ಸಾಂಖ್ಯಿಕ ಚಟುವಟಿಕೆಗಳ ಕುರಿತು 34 ಸಿಬ್ಬಂದಿಗಳಿಗೆ ತರಬೇತಿಯನ್ನು ನೀಡಲಾಗಿದೆ.

9. 2012–13ನೇ ಸಾಲಿನಲ್ಲಿ ಕೆಪಿಎಸ್‌ಸಿ ಮೂಲಕ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯಕ್ಕೆ ನೇಮಕಗೊಂಡ ಸಾಂಖ್ಯಿಕ ನಿರೀಕ್ಷಕರು ಮತ್ತು ಗಣತಿದಾರರಿಗೆ ಪ್ರವೇಶಾವಧಿ ತರಬೇತಿಯನ್ನು ನೀಡಲಾಗುತ್ತಿದೆ.

10. ಮಾನ್ಯ ಯೋಜನೆ ಹಾಗೂ ಸಾಂಖ್ಯಿಕ ಸಚಿವರ ಅಧ್ಯಕ್ಷತೆಯಲ್ಲಿ ಯೋಜನಾ ಇಲಾಖೆಯ ಪ್ರಮುಖ ಕಾರ್ಯಚಟುವಟಿಕೆಗಳ ಪ್ರಗತಿಯನ್ನು ಪರಿಶೀಲಿಸಲು ಜಿಲ್ಲಾ ಪಂಚಾಯತಿ, ಮುಖ್ಯ ಯೋಜನಾಧಿಕಾರಿಗಳ ಹಾಗೂ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿದೆ.

11. ಕರ್ನಾಟಕ ರಾಜ್ಯದಲ್ಲಿ 6ನೇ ಆರ್ಥಿಕ ಗಣತಿ ಬಗ್ಗೆ ಸಾರ್ವಜನಿಕರಲ್ಲಿ ಜಾಹೀರಾತು ನೀಡುವ ಮೂಲಕ ಅರಿವು ಮೂಡಿಸುವ ಚಟುವಟಿಕೆ ಕೈಗೊಳ್ಳಲಾಗಿದೆ.

12. ಜನನ–ಮರಣ ನೋಂದಣಿ ಕುರಿತು ವಿದ್ಯುನ್ಮಾನ ವಾಹಿನಿಗಳಲ್ಲಿ ಪ್ರಸಾರ ಕೈಗೊಳ್ಳಲು ದೃಶ್ಯಾವಳಿಗಳನ್ನು ತಯಾರಿಸಲಾಗಿದೆ.

13. 2010–11ನೇ ಸಾಲಿನ ತಾಲ್ಲೂಕು ಮತ್ತು ಜಿಲ್ಲಾ ಆದಾಯ ಅಂದಾಜುಗಳ ಪ್ರಸಕ್ತ ಮತ್ತು ಸ್ಥಿರ ಬೆಲೆಯಲ್ಲಿ ವಲಯವಾರು ಮರು ಹೊಂದಾಣಿಕೆ ಮಾಡಲಾಗಿದೆ.

14. ಜಿಲ್ಲಾ ಪಂಚಾಯತ್‌ನಲ್ಲಿನ ಸಮಾಲೋಚಕರಿಗೆ ತಾಲ್ಲೂಕುವಾರು ಆದಾಯ ಅಂದಾಜುಗಳ ತಯಾರಿಕೆ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳ ಆದಾಯದ ಮೌಲ್ಯಮಾಪನ ಕುರಿತ ತರಬೇತಿ ನೀಡಲಾಗಿದೆ.

15. ಇ–ಕಾರ್ಮಿಕ ಗಣಕೀಕರಣದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಮಾಲೀಕರು, ಸಾರ್ವಜನಿಕರು ಮುಂತಾದವರಿಗೆ ಜನ ಜಾಗೃತಿಗಾಗಿ ಅರಿವು ಮೂಡಿಸುವ ಕಾರ್ಯಕ್ರಮ ಕೈಗೊಳ್ಳಲಾಗಿದೆ.

16. ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯಕ್ಕೆ ಸಂಬಂಧಿಸಿದಂತೆ ಸಂಖ್ಯಾ ಚಟುವಟಿಕೆಗಳ ಗುಣಮಟ್ಟ ವೃದ್ಧಿಸಲು ಸಂಖ್ಯಾ ಉತ್ಪಾದಕರಿಗೆ ಜಿಲ್ಲಾ ಮಟ್ಟದಲ್ಲಿ ಅರಿವು ಮೂಡಿಸುವ ಕಾರ್ಯಗಾರ ಕೈಗೊಳ್ಳಲಾಗಿದೆ.

17. ಇಪ್ಪತ್ತು ಪ್ರಮುಖ ಸಾಂಖ್ಯಿಕ ಚಟುವಟಿಕೆಯಡಿಯಲ್ಲಿ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಲು ಮೂರು ಪ್ರೋಗ್ರಾಮರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ. ಈವರೆವಿಗೂ ಕೆಳಕಂಡ ತಂತ್ರಾಂಶಗಳನ್ನು ಅಭಿವೃದ್ಧಿಪಡಿಸಿ ಗ್ರಾಮ ಹಂತದ ಕೃಷಿಗೆ ಸಂಬಂಧಿಸಿದ ಕೃಷಿ ಅಂಕಿ ಅಂಶ ಮತ್ತು ಬೆಲೆ ಸೂಚ್ಯಾಂಕಗಳ ಮಾಹಿತಿಯನ್ನು ಪರೀಕ್ಷಾರ್ಥವಾಗಿ Online ನಲ್ಲಿ ಪಡೆಯಲಾಗುತ್ತಿದೆ.

- ಗ್ರಾಹಕ ಬೆಲೆ ಸೂಚ್ಯಂಕ
- ನಗರ ಚಿಲ್ಲರೆ ಬೆಲೆ ಸೂಚ್ಯಂಕ
- ಗ್ರಾಮೀಣ ಚಿಲ್ಲರೆ ಬೆಲೆ ಸೂಚ್ಯಂಕ
- ಕ್ಷೇತ್ರ ಗಣತಿ
- ಕೈಗಾರಿಕಾ ವಾರ್ಷಿಕ ಸಮೀಕ್ಷೆ
- ಬೆಳೆ ಕಟಾವು ಪ್ರಯೋಗ
- ಸ್ಥಳೀಯ ಸಂಸ್ಥೆಗಳ ಲೆಕ್ಕ ಪತ್ರಗಳ – ಆರ್ಥಿಕ ಮತ್ತು ಉದ್ದೇಶಿತ ವರ್ಗೀಕರಣ

18. ಬೆಳೆ ಕ್ಷೇತ್ರಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹಣೆ, ವರದಿಗಳನ್ನು ನಿಖರವಾಗಿ ಮತ್ತು ಸಕಾಲಿಕವಾಗಿ ಹೊರತರುವ ನಿಟ್ಟಿನಲ್ಲಿ ಸಹಕಾರಿಯಾಗುವ GIS-GPS DzsÁjvÀ Crop Inventory and Updation system ಪರೀಕ್ಷಾರ್ಥ ಪ್ರಾಯೋಗಿಕ ಯೋಜನೆಯನ್ನು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ನಲ್ಲೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ Indian Institute of Management, Bangalore Consortium ಇವರ ಸಹಕಾರದೊಂದಿಗೆ ಸಾಲಿನ ಮೂರು ಋತುವಿನ ಮಾಹಿತಿಯನ್ನು ಸಂಗ್ರಹಿಸುವ ಮೂಲಕ ಕೈಗೊಳ್ಳಲಾಗಿದೆ. ಸದರಿ ಪರೀಕ್ಷಾರ್ಥ ಯೋಜನೆಯ ವರದಿಯನ್ನು ಅನುಸರಿಸಿ ಮಾಹಿತಿ ಸಂಗ್ರಹಣೆ ಮತ್ತು ವರದಿ ಕುರಿತಂತೆ ಸಾಧಕ–ಬಾಧಕಗಳನ್ನು ಪರಿಶೀಲಿಸಿ ಅನುಷ್ಠಾನಿಸಬಲ್ಲ ಸೂಕ್ತ ಮಾರ್ಗೋಪಾಯ ಕುರಿತಂತೆ ಸರ್ಕಾರಕ್ಕೆ ಸಲಹೆ ನೀಡಲು ಡಾ॥ಪಿ.ಪಿ.ನಾಗೇಶ್ವರ್ ರಾವ್, ವಿಜ್ಞಾನಿ (ನಿವೃತ್ತ), ಇಸ್ರೋ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ತಾಂತ್ರಿಕ ಪರಿಣಿತರ ಸಮಿತಿಯನ್ನು ರಚಿಸಲಾಗಿದೆ.

19. ರಾಜ್ಯ ಸರ್ಕಾರದ ಇಲಾಖೆಗಳು ಮತ್ತು ಜಿಲ್ಲಾಡಳಿತಕ್ಕೆ ಯೋಜನೆ ಕಾರ್ಯಕ್ರಮ ಅನುಷ್ಠಾನ ಮತ್ತು ಉಸ್ತುವಾರಿಗೆ ಪರಿಣಾಮಕಾರಿಯಾಗಿ ಸಹಕಾರಿಯಾಗಬಲ್ಲ ಸರ್ಕಾರದ ಆಸ್ತಿಗಳು ಮತ್ತು ಫಲಾನುಭವಿಗಳ ನಕ್ಷೀಕರಣ ಪ್ರಾಯೋಗಿಕ ಯೋಜನೆಯನ್ನು GIS-GPS ನ ಮೂಲಕ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ಸಹಯೋಗದೊಂದಿಗೆ ತುಮಕೂರು, ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಯಲ್ಲಿ ಕೈಗೊಳ್ಳಲು ಉದ್ದೇಶಿಸಿದ್ದು, ಇದಕ್ಕಾಗಿ ಪೂರ್ವಭಾವಿ ತಯಾರಿ ಮಾಡಿಕೊಳ್ಳಲಾಗುತ್ತಿದೆ.

**ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ (ಕೆಎಸ್ಎಸ್ಡಿಎ):**

ಕರ್ನಾಟಕ ರಾಜ್ಯ ಸರ್ಕಾರವು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಮತ್ತು ಇತರೆ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳ ಸದಸ್ಯತ್ವದೊಂದಿಗೆ "ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ"ಯನ್ನು ಸರ್ಕಾರದ ಆದೇಶ ಸಂಖ್ಯೆ: ಪಿಡಿ 64 ಎಸ್ಎಂಸಿ 2008, ದಿನಾಂಕ 25.03.2009ರ ಮೂಲಕ ಸ್ಥಾಪಿಸಲಾಗಿದೆ. ಸದರಿ ಸಂಸ್ಥೆಯನ್ನು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960ರಡಿ ದಿನಾಂಕ 20.04.2009ರಂದು ನೋಂದಾಯಿಸಲಾಗಿದೆ.

ರಾಜ್ಯ ಸಾಂಖ್ಯಿಕ ವ್ಯವಸ್ಥೆಯನ್ನು ಸುಧಾರಿಸಲು ಭಾರತೀಯ ಸಾಂಖ್ಯಿಕ ಬಲವರ್ಧನೆ ಯೋಜನೆಯಡಿ ತಯಾರಿಸಿದ ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯನ್ನು ರೂಪಿಸುವುದು ಮತ್ತು ಅನುಷ್ಠಾನಗೊಳಿಸುವುದು ಸಂಸ್ಥೆಯ ಉದ್ದೇಶವಾಗಿದೆ.

ಈ ಸಂಸ್ಥೆಯು 1ನೇ ಅಕ್ಟೋಬರ್ 2010 ರಿಂದ ಕಾರ್ಯನಿರ್ವಹಿಸುತ್ತಿದೆ. ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರದ ನಡುವಿನ ಒಡಂಬಡಿಕೆಗೆ 10ನೇ ಡಿಸೆಂಬರ್ 2010 ರಂದು ಸಹಿ ಹಾಕಲಾಗಿದೆ.

ಕರ್ನಾಟಕ ರಾಜ್ಯ ಕಾರ್ಯತಾಂತ್ರಿಕ ಸಾಂಖ್ಯಿಕ ಯೋಜನೆಯ ಅಡಿಯಲ್ಲಿ ಆಡಳಿತ ಪರಿಷತ್ತಿನ ನಿರ್ಣಯಗಳನ್ನು ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆಯ ಯೋಜನಾ ನಿರ್ದೇಶಕರು ಅನುಷ್ಠಾನಿಸುವರು.

ರಾಜ್ಯದ ಪ್ರಮುಖ 20 ಸಾಂಖ್ಯಿಕ ಚಟುಚಟಿಕೆಗಳನ್ನು ಉತ್ತಮ ಪಡಿಸುವ ಸಲುವಾಗಿ 2012–13 ನೇ ಸಾಲಿನ ಕ್ರಿಯಾ ಯೋಜನೆಯನ್ನು ಅನುಮೋದಿಸಲಾಗಿದ್ದು, ಅನುಷ್ಠಾನಿಸಲಾಗುತ್ತಿದೆ. ಸರ್ಕಾರದ ಆದೇಶ ಸಂಖ್ಯೆ ಪಿಡಿ 64 ಎಸ್‌ಎಂಸಿ 2008, ದಿನಾಂಕ 25.03.2009 ರಂತೆ 2010–11 ಮತ್ತು 2011–12 ನೇ ಸಾಲಿನ ಲೆಕ್ಕ ಪತ್ರಗಳನ್ನು ಪರಿಶೋಧನೆಗೊಂಡಿದ್ದು, ಇದನ್ನು ಆಡಳಿತ ಪರಿಷತ್ತಿನ ಮುಂದೆ ಮಂಡಿತವಾಗಿ ಅನುಮೋದನೆಗೊಂಡಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಪಿಡಿ 42 ಎಸ್‌ಎಂಸಿ 2009, ದಿನಾಂಕ 11.08.2009ರಲ್ಲಿ ಕರ್ನಾಟಕ ಸಾಂಖ್ಯಿಕ ವ್ಯವಸ್ಥೆ ಅಭಿವೃದ್ಧಿ ಸಂಸ್ಥೆ(ಕೆಎಸ್‌ಎಸ್‌ಡಿಐ)ಯಡಿ ಸೃಜಿಸಲಾಗಿರುವ ಹುದ್ದೆಗಳು ಕೆಳಗಿನಂತಿದೆ:

| **ಕ್ರ. ಸಂ.** | **ಹುದ್ದೆ** | **ಹುದ್ದೆಗಳ ಸಂಖ್ಯೆ** | **28.02.2014 ಕ್ಕೆ ಇದ್ದಂತೆ ಕಾರ್ಯನಿರತ/ ಖಾಲಿ** |
|---|---|---|---|
| 1 | ಯೋಜನಾ ನಿರ್ದೇಶಕರು | 1 | ಕಾರ್ಯನಿರತ |
| 2 | ಉಪ ನಿರ್ದೇಶಕರು | 1 | ಖಾಲಿ |
| **ಕ್ರ. ಸಂ.** | **ಹುದ್ದೆ** | **ಹುದ್ದೆಗಳ ಸಂಖ್ಯೆ** | **28.02.2014 ಕ್ಕೆ ಇದ್ದಂತೆ ಕಾರ್ಯನಿರತ/ ಖಾಲಿ** |
| 3 | ಸಹಾಯಕ ಸಾಂಖ್ಯಿಕ ಅಧಿಕಾರಿ | 2 | ಕಾರ್ಯನಿರತ |
| 4 | ಅಧೀಕ್ಷಕರು | 1 | ಕಾರ್ಯನಿರತ |
| 5 | ಪ್ರಥಮ ದರ್ಜೆ ಸಹಾಯಕ | 1 | ಖಾಲಿ |
| 6 | ಶೀಘ್ರಲಿಪಿಗಾರರು/ ಬೆರಳಚ್ಚುಗಾರರು ಕಮ್ ಕಿರಿಯ ಸಹಾಯಕ | 2 | 1 ಕಾರ್ಯನಿರತ<br>1 ಖಾಲಿ |
| 7 | ಗ್ರೂಪ್ ಡಿ | 2 | ಕಾರ್ಯನಿರತ (ಹೊರಗುತ್ತಿಗೆ ಆಧಾರದ ಮೇಲೆ) |
| **ಒಟ್ಟು** | | **10** | **7** |

ದಿನಾಂಕ:28.09.2012 ರಂದು ನಡೆದ ಸಾಮಾನ್ಯ ಪರಿಷತ್ತಿನ ಅನುಮೋದನೆಯಂತೆ ಇಬ್ಬರು ಗಣಕಯಂತ್ರ ಅಪರೇಟರ್‌ಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ ಮತ್ತು ಪ್ರಸ್ತುತ ಅವರು ಕಾರ್ಯನಿರ್ವಹಿಸುತ್ತಿದ್ದಾರೆ.

**ಕಾನೂನು ತಿದ್ದುಪಡಿ, ಮೌಲ್ಯಮಾಪನ ಅಧ್ಯಯನ ಮತ್ತು ಪ್ರಕಟಣೆಗಳು**

**ಕಾನೂನು ಮತ್ತು ತಿದ್ದುಪಡಿ:**

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಜನನ ಮತ್ತು ಮರಣಗಳ ಕಡ್ಡಾಯ ನೋಂದಣಿಗಾಗಿ ಜನನ ಮತ್ತು ಮರಣಗಳ ನೋಂದಣಿ ಅಧಿನಿಯಮ 1969 ಮತ್ತು ಕರ್ನಾಟಕ ಜನನ ಮತ್ತು ಮರಣಗಳ ನೋಂದಣಿ ನಿಯಮಗಳು 1999 ಅನ್ನು ಅನುಷ್ಠಾನಗೊಳಿಸುತ್ತಿದೆ.

**12ನೇ ಸುತ್ತಿನ ಅಭಿವೃದ್ಧಿ ಕಾರ್ಯಕ್ರಮಗಳ ಮೇಲಿನ ಮಾದರಿ ಸಮೀಕ್ಷೆ ಯೋಜನೆ–2012–13:**

ಹನ್ನೆರಡನೇ ಸುತ್ತಿನ ಮಾದರಿ ಸಮೀಕ್ಷೆಯ ಕಾರ್ಯಕ್ರಮವನ್ನು 2010–11 ಮತ್ತು 2011–12ರ ಉಲ್ಲೇಖಿತ ವರ್ಷಗಳಿಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ನಾಲ್ಕು ಅಭಿವೃದ್ಧಿ ಯೋಜನೆಗಳಿಗೆ ಕೈಗೊಳ್ಳಲಾಗಿದೆ. ಅವುಗಳೆಂದರೆ 1. ಬಸವ ವಸತಿ ಯೋಜನೆ 2. ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ. ಅ) ಕೊಳವೆ ನೀರು ಸರಬರಾಜು ಯೋಜನೆ ಆ) ಕಿರು ನೀರು ಸರಬರಾಜು ಯೋಜನೆ ಇ) ಕೊಳವೆ ಬಾವಿ ಯೋಜನೆ 3. ಗ್ರಾಮೀಣ ರಸ್ತೆ ಯೋಜನೆ. ಅ) ನಬಾರ್ಡ ಆ) ಸುವರ್ಣ ರಸ್ತೆ ಯೋಜನೆ. 4. ಮಣ್ಣು ಮತ್ತು ನೀರು ಸಂರಕ್ಷಣೆ ಕಾಮಗಾರಿಗಳು.

**13ನೇ ಸುತ್ತಿನ ಮಾದರಿ ಸಮೀಕ್ಷೆ**

ಈ ಸುತ್ತಿನಲ್ಲಿ ಕೆಳಕಂಡ 5 ಅಭಿವೃದ್ಧಿ ಯೋಜನೆಗಳನ್ನು ತೆಗೆದುಕೊಂಡು ಮಾದರಿ ಸಮೀಕ್ಷೆಯನ್ನು ಕೈಗೊಳ್ಳಲಾಯಿತು 1) ನಿರ್ಮಲ ಭಾರತ ಅಭಿಯಾನ 2) ಭೂ ಚೇತನ 3) ನಿರಂತರ ಜ್ಯೋತಿ 4) ಸಮಗ್ರ ಶಿಶು ಅಭಿವೃದ್ಧಿ ಯೋಜನೆ 5) ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ.

ಮೇಲಿನ ಯೋಜನೆಗಳ ಸಮೀಕ್ಷೆ ಅಧ್ಯಯನವನ್ನು ಪೂರ್ಣಗೊಳಿಸಲಾಯಿತು. ನಮೂನೆಗಳ ಗಣಕೀಕರಣ ಮತ್ತು ವರದಿ ತಯಾರಿಕಾ ಕಾರ್ಯವು ಅಂತಿಮ ಹಂತದಲ್ಲಿದೆ.

**ಪ್ರಕಟಣೆಗಳು/ ವರದಿಗಳು**

2012–13, ಮತ್ತು 2013–14 ರಲ್ಲಿ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಿಂದ ಹೊರತರಲಾಗಿರುವ ನಿಯತಕಾಲಿಕ ವರದಿ/ಪ್ರಕಟಣೆಗಳನ್ನು ಅನುಬಂಧ 2 ಮತ್ತು ಅನುಬಂಧ 3 ರಲ್ಲಿ ಕ್ರಮವಾಗಿ ನೀಡಲಾಗಿದೆ.

**ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಆಡಳಿತಾತ್ಮಕ ಚಟುವಟಿಕೆಗಳು**

**ಸಿಬ್ಬಂದಿ:**

ನಿರ್ದೇಶನಾಲಯ, ಅಧೀನ ಕಚೇರಿಗಳು ಮತ್ತು ನಿಯೋಜನೆ ಮೇಲೆ ಇತರೆ ಇಲಾಖೆಗಳಲ್ಲಿರುವ ವೃಂದವಾರು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿ ಮತ್ತು ಸಿಬ್ಬಂದಿಯ ಮಂಜೂರಾದ, ಭರ್ತಿಯಾದ, ಖಾಲಿಯಿರುವ ಹುದ್ದೆಗಳ ವಿವರಗಳನ್ನು ಅನುಬಂಧ –4 ರಲ್ಲಿ ನೀಡಲಾಗಿದೆ.

**ನಿವೃತ್ತಿ:**

ಪ್ರಸ್ತುತ ವರ್ಷದಲ್ಲಿ ನಿವೃತ್ತಿ ಹೊಂದುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

| **ಕ್ರ. ಸಂ** | **ಗ್ರೂಪ್** | **ನಿವೃತ್ತಿ ಹೊಂದುವವರ ಸಂಖ್ಯೆ 2013–14** |
|---|---|---|
| 1 | ಎ | 30 |
| 2 | ಬಿ | 13 |
| 3 | ಸಿ | 25 |
| 4 | ಡಿ | 02 |
| ಒಟ್ಟು | | 70 |

**ಹೊರಗುತ್ತಿಗೆ:**

ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಪಡೆದ ವ್ಯಕ್ತಿಗಳ ಸಂಖ್ಯೆ ಈ ಕೆಳಗೆ ನೀಡಲಾಗಿದೆ.

| ಕ್ರ.ಸಂ | ಹುದ್ದೆ | ಸಂಖ್ಯೆ |
|---|---|---|
| | ಸಾಂಖ್ಯಿಕ ನಿರೀಕ್ಷಕರು | 84 |
| 1 | ಬೆರಳಚ್ಚುಗಾರರು | 37 |
| 2 | ವಾಹನ ಚಾಲಕರು | 08 |
| 3 | ಗ್ರೂಪ್ ಡಿ | 22 |
| ಒಟ್ಟು | | 151 |

**ತರಬೇತಿ:**

ಸಾಂಖ್ಯಿಕ ನಿರೀಕ್ಷಕರು ಮತ್ತು ಗಣತಿದಾರರಿಗೆ 2 ವಾರಗಳ ಅವಧಿಯ ಪ್ರವೇಶಾವಧಿ ತರಬೇತಿಯನ್ನು ಫೆಬ್ರವರಿ 2014ರಲ್ಲಿ ಆಯ್ದ ಜಿಲ್ಲಾ ತರಬೇತಿ ಸಂಸ್ಥೆಗಳಾದ ಬೆಂಗಳೂರು(ಗ್ರಾಮಾಂತರ), ಮೈಸೂರು, ಬೆಳಗಾಂ ಮತ್ತು ಧಾರವಾಡಗಳಲ್ಲಿ ಮೂಲ ಅಂಕಿ ಅಂಶಗಳು ಹಾಗೂ ನಿರ್ದೇಶನಾಲಯಕ್ಕೆ ಸಂಬಂಧಿಸಿದ ಚಟುವಟಿಕೆಗಳ ಬಗ್ಗೆ ತರಬೇತಿ ನೀಡಲಾಯಿತು.

ಇತರೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 35 ಸಹಾಯಕ ಸಾಂಖ್ಯಿಕ ಅಧಿಕಾರಿಗಳಿಗೆ 'ಸಾಂಖ್ಯಿಕ ವ್ಯವಸ್ಥೆ ಮತ್ತು ಸಾಂಖ್ಯಿಕ ಚಟುವಟಿಕೆಗಳ ಬಗ್ಗೆ ಫೆಬ್ರವರಿ 2014 ರಲ್ಲಿ 4 ದಿನಗಳ ತರಬೇತಿಯನ್ನು ನೀಡಲಾಯಿತು.

ನಿರ್ದೇಶನಾಲಯ, ಜಿಲ್ಲಾ ಪಂಚಾಯತ್ ಮತ್ತು ಇತರೆ ಇಲಾಖೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ನಿರ್ದೇಶಕರು ಮತ್ತು ಉಪ ನಿರ್ದೇಶಕರುಗಳಿಗೆ 2 ಬ್ಯಾಚ್‌ಗಳಲ್ಲಿ ಆಡಳಿತ ತರಬೇತಿ ಸಂಸ್ಥೆ, ಮೈಸೂರಿನಲ್ಲಿ 'ನಿರ್ವಹಣೆ ಅಭಿವೃದ್ಧಿ ಕಾರ್ಯಕ್ರಮ'ಗಳ ಬಗ್ಗೆ ಮಾರ್ಚ್ 2014ರಲ್ಲಿ 5 ದಿನಗಳ ಅವಧಿಗೆ ತರಬೇತಿ ನೀಡಲಾಯಿತು.

**ನಾಸಾ(NASA)ದಲ್ಲಿ ತರಬೇತಿಗೆ ಹಾಜರಾದ ಅಧಿಕಾರಿ/ಸಿಬ್ಬಂದಿಗಳ ವಿವರ ಈ ಕೆಳಕಂಡಂತಿದೆ.**

| ಕ್ರ. ಸಂ. | ತರಬೇತಿ ಏರ್ಪಡಿಸಿದವರು | ಗುಂಪು ಎ | | ಗುಂಪು ಬಿ | | ಗುಂಪು ಸಿ | | ಒಟ್ಟು ಮೊತ್ತ | | |
|---|---|---|---|---|---|---|---|---|---|---|
| | | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಗಂಡು | ಹೆಣ್ಣು | ಒಟ್ಟು |
| 1 | ನ್ಯಾಷನಲ್ ಅಕಾಡಮಿ ಆಫ್ ಸ್ಟ್ಯಾಟಿಸ್ಟಿಕಲ್ ಅಡ್‌ಮಿನಿಸ್ಟ್ರೇಶನ್ (ಓಂಖಿ) ನೋಯಿಡಾ (ರಾಜ್ಯದ ಹೊರಗೆ) | 4 | - | - | 1 | - | 1 | 4 | 2 | 6 |
| **ಒಟ್ಟು** | | **4** | **-** | **-** | **1** | **-** | **1** | **4** | **2** | **6** |

ನಿರ್ದೇಶನಾಲಯದ ಕೇಂದ್ರ ಕಛೇರಿ ಹಾಗೂ ಜಿಲ್ಲಾ ಪಂಚಾಯತ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 15 ಅಧಿಕಾರಿಗಳಿಗೆ 'National Accounts Statistics' ಬಗ್ಗೆ ವಿತ್ತೀಯ ನೀತಿ ಸಂಸ್ಥೆ ಯಲ್ಲಿ ಡಿಸೆಂಬರ್ 2013ರಲ್ಲಿ 5 ದಿನಗಳ ಅವಧಿಗೆ ತರಬೇತಿಯನ್ನು ಆಯೋಜಿಸಲಾಯಿತು.

ಕಾರ್ಮಿಕ ಸಂಸ್ಥೆ, ಶಿಮ್ಲಾ, ಪ್ರತಿ ವರ್ಷವು ನಡೆಸುವ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕದ ಬೆಲೆ ಸಂಗಹಣಕಾರರು/ಮೇಲ್ವಿಚಾರಕರಿಗೆ ತರಬೇತಿ ಕಾರ್ಯಕ್ರಮದಲ್ಲಿ 2013ನೇ ಸಾಲಿನಲ್ಲಿ 1 ಸಹಾಯಕ ನಿರ್ದೇಶಕರು, 1 ಸಹಾಯಕ ಸಾಂಖ್ಯಿಕ ಅಧಿಕಾರಿ ಹಾಗೂ 2 ಸಾಂಖ್ಯಿಕ ನಿರೀಕ್ಷಕರುಗಳು ಪಾಲ್ಗೊಂಡಿದ್ದರು.

ಸಕಾಲಿಕ ವರದಿ ಯೋಜನೆ (TRS), ಬೆಳೆ ಅಂದಾಜು ಸಮೀಕ್ಷೆ (CES) ಹಾಗೂ ಜನನ ಮತ್ತು ಮರಣ ನೋಂದಣಿ ಬಗ್ಗೆ ತಾಲ್ಲೂಕ ಹಾಗೂ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಮೂಲಕಾರ್ಯಕರ್ತರಿಗೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿಗಳು ಮತ್ತು ಜಿಲ್ಲಾ ಸಂಖ್ಯಾಸಂಗ್ರಹಾಧಿಕಾರಿಗಳು ತರಬೇತಿ ನೀಡಿರುತ್ತಾರೆ. ಸಕಾಲಿಕ ವರದಿ ಯೋಜನೆ (TRS) ಮತ್ತು ಬೆಳೆ ಅಂದಾಜು ಸಮೀಕ್ಷೆ (CES) ಗಳ ತರಬೇತಿಗೆ ಹಾಜರಾದ ಮೂಲಕಾರ್ಯಕರ್ತರ ಜಿಲ್ಲಾವಾರು ವಿವರಗಳನ್ನು ಅನುಬಂಧ – 5 ರಲ್ಲಿ ನೀಡಲಾಗಿದೆ.

2013–14ನೇ ಸಾಲಿನಲ್ಲಿ ನಾಗರೀಕ ನೋಂದಣಿ ಪದ್ಧತಿಯ ಬಗ್ಗೆ ಜಿಲ್ಲಾವಾರು ತರಬೇತಿಯನ್ನು ಕರ್ನಾಟಕ ರಾಜ್ಯ ಕಾರ್ಯ ತಾಂತ್ರಿಕ ಸಾಂಖ್ಯಿಕ ಯೋಜನೆ (ಕೆಎಸ್‌ಎಸ್‌ಎಸ್‌ಪಿ) ಅಡಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ತರಬೇತಿಯ ವಿವರಗಳು ಕೆಳಕಂಡಂತಿವೆ.

ನಾಗರೀಕ ನೋಂದಣಿ ಪದ್ಧತಿಯ ನೋಂದಣಿದಾರರ (ಆಶಾ, ಅಂಗನವಾಡಿ ಮತ್ತು ಎಎನ್‌ಎಮ್ಸ್) ತರಬೇತಿ 2012.

| ಕ್ರ. ಸಂ. | ತರಬೇತಿಯ ಸ್ಥಳ | ತರಬೇತಿದಾರರ ಸಂಖ್ಯೆ |
|---|---|---|
| 1 | ಬಿಜಾಪುರ | 1555 |
| 2 | ಬೀದರ್ | 823 |
| 3 | ಗದಗ | 1108 |
| 4 | ಚಿತ್ರದುರ್ಗ | 2514 |
| | **ಒಟ್ಟು** | **6000** |

**2013ನೇ ಸಾಲಿನಲ್ಲಿ ನಡೆಸಲಾದ ಮರಣ ಕಾರಣ ವೈದ್ಯಕೀಯ ಪ್ರಮಾಣಪತ್ರ ತರಬೇತಿ ಕಾರ್ಯಕ್ರಮದ ವಿವರಗಳು ಈ ಕೆಳಕಂಡಂತಿದೆ.**

| ಕ್ರ. ಸಂ. | ತರಬೇತಿಯ ಸ್ಥಳ | ನಡೆಸಲಾದ ತರಬೇತಿಗಳ ಸಂಖ್ಯೆ. | ತರಬೇತಿ ಹೊಂದಿದ ವೈದ್ಯಾಧಿಕಾರಿಗಳು ಒಟ್ಟು ಸಂಖ್ಯೆ. |
|---|---|---|---|
| 1 | ಬಿದರ್ | 1 | 55 |
| 2 | ಹಾಸನ | 1 | 83 |
| 3 | ಚಿಕ್ಕಮಗಳೂರು | 1 | 82 |
| 4 | ಗದಗ | 1 | 43 |
| 5 | ಹಾವೇರಿ | 1 | 50 |
| 6 | ಕೋಲಾರ | 1 | 58 |

| ಕ್ರ. ಸಂ. | ತರಬೇತಿಯ ಸ್ಥಳ | ನಡೆಸಲಾದ ತರಬೇತಿಗಳ ಸಂಖ್ಯೆ. | ತರಬೇತಿ ಹೊಂದಿದ ವೈದ್ಯಾಧಿಕಾರಿಗಳು ಒಟ್ಟು ಸಂಖ್ಯೆ. |
|---|---|---|---|
| 7 | ಚಾಮರಾಜನಗರ | 1 | 67 |
| 8 | ಉತ್ತರ ಕನ್ನಡ | 1 | 100 |
| 9 | ಬೆಂಗಳೂರು | 1 | 74 |
| **ಒಟ್ಟು** | | **9** | **612** |

**ನೂತನ ಆಡಳಿತಾತ್ಮಕ ಕ್ರಮಗಳು:**

ಇಲಾಖೆಯ ಸಾಮರ್ಥ್ಯವನ್ನು ಹೆಚ್ಚಿಸಲು ಈ ಕೆಳಗಿನ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

i) ಈ ಕೆಳಕಂಡ ಹುದ್ದೆಗಳಿಗೆ ನೇಮಕಾತಿಯನ್ನು ಅನುಕಂಪದ ಆಧಾರದ ಮೇಲೆ ಮಾಡಲಾಗಿದೆ.

| | |
|---|---|
| 1. ಪ್ರಥಮ ದರ್ಜೆ ಸಹಾಯಕರು | 05 |
| 2. ಗಣತಿದಾರರು | 16 |
| 3. ದ್ವಿತೀಯ ದರ್ಜೆ ಸಹಾಯಕರು | 02 |

2013–14 ನೇ ಸಾಲಿನಲ್ಲಿ ಈ ಕೆಳಗಿನ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರಿಗೆ ಬಡ್ತಿ ನೀಡಲಾಗಿದೆ.

| **ಬಡ್ತಿ** | |
|---|---|
| ಜಂಟಿ ನಿರ್ದೇಶಕರು | 12 |
| ಉಪ ನಿರ್ದೇಶಕರು | 46 |
| ಸಹಾಯಕ ನಿರ್ದೇಶಕರು | - |
| ಸಹಾಯಕ ಸಾಂಖ್ಯಿಕ ಅಧಿಕಾರಿ | - |
| ಸಾಂಖ್ಯಿಕ ನಿರೀಕ್ಷಕರು | - |
| ಪತ್ರಾಂಕಿತ ವ್ಯವಸ್ಥಾಪಕರು | 02 |
| ಅಧೀಕ್ಷಕರು | 13 |
| ಪ್ರಥಮ ದರ್ಜೆ ಸಹಾಯಕರು | 14 |
| ದ್ವಿತೀಯ ದರ್ಜೆ ಸಹಾಯಕರು | 4 |
| ಹಿರಿಯ ಬೆರಳಚ್ಚುಗಾರರು | - |
| ಶೀಘ್ರಲಿಪಿಗಾರರು | - |

**ತಪಾಸಣೆಗಳು:**

ಪ್ರಸಕ್ತ ಸಾಲಿನಲ್ಲಿ ನಿರ್ದೇಶಕರು, ಆಸಾಂನಿ ಕೈಗೊಂಡಿರುವ ಆಡಳಿತಾತ್ಮಕ ತಪಾಸಣೆಗಳ ವಿವರಗಳು ಈ ಕೆಳಕಂಡಂತಿವೆ.

1. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ದಕ್ಷಿಣ ಕನ್ನಡ
2. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಉಡುಪಿ
3. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಹಾಸನ.

## ಲೆಕ್ಕ ಪರಿಶೋಧನೆಯ ಆಕ್ಷೇಪಣೆಗಳು, ವ್ಯಾಜ್ಯಗಳು, ವಿಧಾನ ಸಭೆ/ ವಿಧಾನ ಪರಿಷತ್ತು

**ಲೆಕ್ಕ ಪರಿಶೋಧನೆ:**

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಲೆಕ್ಕ ಪರಿಶೋಧನೆಯನ್ನು ಕರ್ನಾಟಕದ ಮಹಾಲೇಖಪಾಲರಿಂದ 2012–13ನೇ ಸಾಲಿನವರೆಗೆ ಕೈಗೊಂಡಿದ್ದು, ತಮ್ಮ ವರದಿಯಲ್ಲಿ ಎರಡು ಆಕ್ಷೇಪಣೆಗಳನ್ನು ನೀಡಿರುತ್ತಾರೆ.

**ನ್ಯಾಯಾಲಯ ಮತ್ತು ನ್ಯಾಯ ಮಂಡಳಿಗಳಲ್ಲಿ ಬಾಕಿ ಪ್ರಕರಣಗಳು:**

ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಬಾಕಿಯಿರುವ ಪ್ರಕರಣಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

| ಕ್ರ.ಸಂ | ಹುದ್ದೆಯ ಹೆಸರು | ಬಾಕಿ ಇರುವ ಪ್ರಕರಣಗಳು |
|---|---|---|
| 1 | ಜಂಟಿ ನಿರ್ದೇಶಕರು | - |
| 2 | ಉಪ ನಿರ್ದೇಶಕರು | - |
| 3 | ಸಹಾಯಕ ನಿರ್ದೇಶಕರು | 01 |
| 4 | ಸಹಾಯಕ ಸಾಂಖ್ಯಿಕ ಅಧಿಕಾರಿಗಳು | 09 |
| 5 | ಸಾಂಖ್ಯಿಕ ನಿರೀಕ್ಷಕರು | 04 |
| 6 | ಬೆರಳಚ್ಚುಗಾರರು | 01 |
| 7 | ಗಣತಿದಾರರು | 03 |
| **ಒಟ್ಟು:** | | **18** |

ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಪ್ರಕರಣಗಳು ಖಾಲಿ ಇರುವುದಿಲ್ಲ.

**ಮಾಹಿತಿ ಹಕ್ಕು:**

ಮಾಹಿತಿ ಹಕ್ಕು ಅಧಿನಿಯದ ವಿವರಗಳನ್ನು ಇಲಾಖೆಯ ಅಂತರ್ ಜಾಲದಲ್ಲಿ ಪ್ರಕಟಿಸಲಾಗಿದೆ. ಸ್ವೀಕೃತಿಯಾದ, ಉತ್ತರಿಸಲಾಗಿರುವ, ತಿರಸ್ಕೃತವಾದ ಮತ್ತು ಬಾಕಿ ಇರುವ ಮೇಲ್ಮನವಿ ಅರ್ಜಿಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

**ಮಾಹಿತಿ ಹಕ್ಕು ಅಧಿನಿಯಮದ ಪ್ರಕರಣಗಳು;**

| ಕ್ರ. ಸಂ | ಅರ್ಜಿಗಳು | ಸಂಖ್ಯೆ |
|---|---|---|
| 1 | ಸ್ವೀಕೃತಿಯಾದವು | 106 |
| 2 | ಉತ್ತರಿಸಲಾಗಿರುವವು | 106 |
| 3 | ತಿರಸ್ಕೃತವಾದವುಗಳು | - |
| 4 | ಬಾಕಿ ಇರುವ ಮೇಲ್ಮನವಿ ಪ್ರಕರಣಗಳು | - |

**ವಿಧಾನಸಭೆ/ ವಿಧಾನ ಪರಿಷತ್ತಿನ ಪ್ರಶ್ನೆಗಳು:** ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

**ವಿಧಾನ ಸಭೆ ಪ್ರಶ್ನೆಗಳು**

| ಕ್ರಮ ಸಂಖ್ಯೆ | ಪ್ರಶ್ನೆಗಳು | ಸಂಖ್ಯೆ |
|---|---|---|
| 1 | ಸ್ವೀಕೃತವಾದವು | 34 |
| 2 | ಉತ್ತರಿಸಿದವು | 34 |
| 3 | ಬಾಕಿ ಇರುವಂತಹವು | ಇಲ್ಲ |

**ವಿಧಾನ ಪರಿಷತ್ತಿನ ಪ್ರಶ್ನೆಗಳು**

| ಕ್ರಮ ಸಂಖ್ಯೆ | ಪ್ರಶ್ನೆಗಳು | ಸಂಖ್ಯೆ |
|---|---|---|
| 1 | ಸ್ವೀಕೃತವಾದವು | 21 |
| 2 | ಉತ್ತರಿಸಿದವು | 21 |
| 3 | ಬಾಕಿ ಇರುವಂತಹವು | ಇಲ್ಲ |

**ಇಲಾಖಾ ವಿಚಾರಣೆ:**

ಇಲಾಖಾ ವಿಚಾರಣೆಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

| ಹುದ್ದೆಯ ಹೆಸರು | ಚಾಲ್ತಿಯಲ್ಲಿರುವ ಪ್ರಕರಣಗಳು | ಮುಕ್ತಾಯಗೊಳಿಸಿರುವ ಪ್ರಕರಣಗಳು | ಬಾಕಿ ಇರುವ ಪ್ರಕರಣಗಳು |
|---|---|---|---|
| ಉಪ ನಿರ್ದೇಶಕರು | - | - | 01 |
| **ಒಟ್ಟು:** | - | - | 01 |